Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ-19 | ಸಂಚಿಕೆ-2 | ಜನವರಿ 6-12, 2025 | ಪುಟ 16 | ರೂ.10/-
Volume-19 | Issue-2 | January 6-12, 2025 | Pages:16 | Price: 10/-

ಸಿಪಿಐ(ಎಂ) 24ನೇ ರಾಜ್ಯ ಸಮ್ಮೇಳನ

24ನೇ CPIM ರಾಜ್ಯ ಸಮ್ಮೇಳನ
29-30-31 ಡಿಸೆಂಬರ್ 2024, ತುಮಕೂರು





ಜನತೆಯ ಸಂಕಟಗಳ ವಿರುದ್ಧ ವಿಶಾಲ ಹೋರಾಟ ತೀವ್ರಗೊಳಿಸಲು, ಪರ್ಯಾಯ ರಾಜಕೀಯ ರೂಪಿಸಲು ಕರೆ



ಹೊಸ ವರ್ಷ-2025 ಹೋರಾಟ ಮತ್ತು ಪ್ರತಿರೋಧದ ವರ್ಷವಾಗಲಿ

ಜನ ಚಳುವಳಿಗಳ ನೆಚ್ಚಿನ ನಾಯಕ
ಕಾಮ್ರೇಡ್ ಜಿ.ಸಿ.ಬಯ್ಯಾರೆಡ್ಡಿ ಇನ್ನಿಲ್ಲ

ನಕ್ಸಲೀಯರ ಶರಣಾಗತಿ: ಸಮಗ್ರ ನೀತಿ, ಪ್ರಾಮಾಣಿಕ ಪ್ರಯತ್ನ ಅಗತ್ಯ

ನಕ್ಸಲೀಯರ ಶರಣಾಗತಿ: ಸಮಗ್ರ ನೀತಿ ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ

ಸಂಪಾದಕೀಯ

ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಕಳೆದ ಡಿಸೆಂಬರ್ 30, 2024 ರಂದು ಸಶಸ್ತ್ರ ಹೋರಾಟದ ಹಾದಿಯಲ್ಲಿರುವ ಎಲ್ಲ ನಕ್ಸಲರು ಆ ಮಾರ್ಗವನ್ನು ಕೈಬಿಟ್ಟು ಸರಕಾರಕ್ಕೆ ಶರಣಾಗಿ ಪ್ರಜಾಸತ್ತಾತ್ಮಕ ಮುಖ್ಯವಾಹಿನಿ ಕಾರ್ಯಚಟುವಟಿಕೆಗಳ ಭಾಗವಾಗಬೇಕೆಂದು ಕರೆ ನೀಡಿದ್ದಾರೆ. ಅಲ್ಲದೇ ಈ ಸಂಬಂಧ ರಾಜ್ಯ ಸರಕಾರವು ಒಂದು ಸ್ಪಷ್ಟವಾದ ಮತ್ತು ಸರಳವಾದ 'ಶರಣಾಗತಿ ನೀತಿ'ಯನ್ನು ರೂಪಿಸಿದೆ ಎಂದು ಘೋಷಿಸಿದ್ದಾರೆ. ಅಲ್ಲದೇ ಹೀಗೆ ಶಸ್ತ್ರಗಳನ್ನು ಒಪ್ಪಿಸಿ ಶರಣಾಗುವ ನಕ್ಸಲರಿಗೆ ಸಹಾನುಭೂತಿಯಿಂದ ಆದ್ಯತೆಯ ಮೇರೆಗೆ ಪ್ರೋತ್ಸಾಹಧನ, ಜೀವನೋಪಾಯಕ್ಕಾಗಿ ಕೌಶಲ್ಯ ಅಭಿವೃದ್ಧಿ ತರಬೇತಿ ಹಾಗೂ ಅವರ ವಿರುದ್ಧ ಇರುವ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಿಕೊಳ್ಳಲು ಅಗತ್ಯವಾದ ಕಾನೂನು ನೆರವನ್ನು ಒದಗಿಸುವುದಾಗಿಯೂ ಹೇಳಿದ್ದಾರೆ. 'ಶಾಂತಿಗಾಗಿ ನಾಗರೀಕರು' ಸಮಿತಿ ಮತ್ತು ಸರಕಾರದ ಉನ್ನತ ಅಧಿಕಾರಿಗಳ ಮುತುವರ್ಜಿ ಗೆ ಸ್ಪಂದಿಸಿರುವ ಆರು ಜನ ನಕ್ಸಲೀಯರು ಶರಣಾಗಲು ಸಿದ್ಧವಾಗಿದ್ದಾರೆ ಎಂದೂ ತಿಳಿದು ಬಂದಿದೆ. ಅದು ಸ್ವಾಗತಾರ್ಹ.

ಇತ್ತೀಚೆಗೆ ನವೆಂಬರ್ 20, 2024 ರಂದು ಉಡುಪಿ ಜಿಲ್ಲೆ ಹೆಬ್ರಿ ತಾಲ್ಲೂಕಿನ ಪೀತಬೈಲುವಿನಲ್ಲಿ ನಕ್ಸಲ್ ನಿಗ್ರಹ ಪಡೆಯ ಗುಂಡಿಗೆ ನಕ್ಸಲ್ ನಾಯಕ ವಿಕ್ರಮ ಗೌಡ 'ಎನ್ ಕೌಂಟರ್' ಗೆ ಬಲಿಯಾದ ಮೇಲೆ 'ನಕ್ಸಲ್ ಸಮಸ್ಯೆ'ಯ ಪ್ರಶ್ನೆ ಮತ್ತೆ ಮುಂಚೂಣಿಗೆ ಬಂದಿದೆ.

ಕರ್ನಾಟಕ ಸರಕಾರದ ಈ ಘೋಷಣೆಗಳೇನೋ ಕೇಳಲು ಚೆನ್ನಾಗಿವೆ. ಆದರೆ ವಾಸ್ತವ ಬಹಳ ಭಿನ್ನವಾಗಿರುವಂತೆ ಕಾಣುತ್ತದೆ. ಸ್ವತಃ ವಿಕ್ರಮ್ ಗೌಡ ಹತ್ಯೆ ಒಂದು ನಕಲಿ 'ಎನ್ಕೌಂಟರ್' ಎಂಬ ದಟ್ಟ ಅನುಮಾನಗಳಿವೆ. ಬಹುತೇಕವಾಗಿ ಪ್ರಭುತ್ವ–ಸರಕಾರಗಳು ನಕ್ಸಲ್ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವ ಅಥವಾ ಅರ್ಥೈಸುವ ರೀತಿಯೇ ಅತ್ಯಂತ ದೋಷದಿಂದ ಕೂಡಿದೆ. ಅದನ್ನು ಒಂದು ಸಾಮಾಕಿಕ, ಆರ್ಥಿಕ, ರಾಜಕೀಯ ಸಮಸ್ಯೆ ಎಂದು ಪರಿಗಣಿಸದೇ ಅದು ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಎಂಬಂತೆ ನೋಡುವುದು, ಅದನ್ನು ನಿವಾರಿಸಲು ಮುಂದಾಗುವ ವಿಧಾನಗಳೇ ಅತ್ಯಂತ ದೋಷಪೂರಿತ. ಈ ಅಂಶ ಉಳಿದವುಗಳ ಜೊತೆಗೆ ಇದೆ ಎಂಬುದು ನಿಜವಾದರೂ ಅಂತಹ ಪರಿಸ್ಥಿತಿ ಉದ್ಭವಿಸಲು ಕಾರಣವಾದ ಮೂಲ ನೆಲೆಯನ್ನು ಕಂಡುಕೊಳ್ಳದೇ ಸಮಸ್ಯೆಗೆ ಪರಿಹಾರವೂ ಸಾಧ್ಯವಿಲ್ಲ. ಆದ್ದರಿಂದ ಸಮಗ್ರವಾಗಿಯೇ ಪರಿಸ್ಥಿತಿಯನ್ನು ಪರಿಗಣಿಸಿ ಪರಿಹಾರವನ್ನು ಹುಡುಕಬೇಕು. ಕೇವಲ ಬಂದೂಕಿನ ಬಲದಿಂದ ನಕ್ಸಲ್ ಚಳುವಳಿಯನ್ನು ನಿಗ್ರಹ ಮಾಡುತ್ತೇವೆ ಎಂಬ ಪ್ರಭುತ್ವದ ಧೋರಣೆ ಸರಿಯಾದುದಲ್ಲ. ಆದರೆ ಭಾರತದ ಒಕ್ಕೂಟದ ಸರಕಾರವೂ ಸಹ 2025 ರೊಳಗೆ ಎಲ್ಲಾ ನಕ್ಸಲೀಯರನ್ನು ನಿರ್ಮೂಲನೆ ಮಾಡುವುದಾಗಿ ಘೋಷಿಸಿ, ಕಾರ್ಯಾಚರಣೆಗೆ ಇಳಿದಿರುವುದು ಅತ್ಯಂತ ದಿಗ್ಭ್ರಮೆ ಹುಟ್ಟಿಸಿದೆ. ಅದು ಪ್ರಗತಿಪರ, ಪ್ರಜಾಪ್ರಭುತ್ವವಾದಿಗಳ, ಜನಪರವಾದ ಶಕ್ತಿಗಳ ವಿರುದ್ಧವೂ ಬಳಸಲಾಗುತ್ತಿದೆ.

ವಿವಿಧ ಹೆಸರು, ಗುಂಪುಗಳಲ್ಲಿರುವ 'ನಕ್ಸಲೀಯ'ರ, ಭಾರತೀಯ ಸಮಾಜ, ಪ್ರಭುತ್ವ, ಕ್ರಾಂತಿಯ ಘಟ್ಟ ಇತ್ಯಾದಿಗಳ ಬಗೆಗಿನ ಸೈದ್ಧಾಂತಿಕ ನಿಲುವು, ಅದನ್ನು ಆಧರಿಸಿದ ಕಾರ್ಯವಿಧಾನಗಳೇ ಅತ್ಯಂತ ಅವೈಜ್ಞಾನಿಕ, ಘೋಷಿತ ಉದ್ದೇಶಗಳಿಗೆ ತದ್ವಿರುದ್ಧ. ಅದು ಅತಿರೇಕದ ಎಡ ದುಸ್ಸಾಹಸವಾದಿ ತಪ್ಪು ಹಾದಿ ಎಂಬುದು ಹಲವು ದಶಕಗಳ ಅನುಭವವೇ ತೋರಿಸಿದೆ. ಇದರಿಂದಾಗಿ ಜನತೆಗಾಗಿ ಸಮರ್ಪಿಸಿಕೊಂಡ ಅನೇಕ ಪ್ರಾಮಾಣಿಕ ಕಾರ್ಯಕರ್ತರು, ನಾಯಕರು ಹಾಗೂ ನಾಗರೀಕರು ಮತ್ತು ಪೊಲೀಸ್ ಮುಂತಾದ ರಕ್ಷಣಾ ಪಡೆಯ ಯೋಧರು, ಸಿಬ್ಬಂದಿ ಮುಂತಾದವರ ಜೀವ ಹಾನಿ, ಆಸ್ತಿ ಹಾನಿ ಸಂಭವಿಸಿವೆ.

ಆದರೆ ಭೂಮಿ ಹಕ್ಕು, ಅರಣ್ಯ ಹಕ್ಕು, ಪರಿಸರ, ಹುಲಿ ಸಂರಕ್ಷಣೆ–ಆನೆ ಕಾರಿಡಾರ್–ಸಂರಕ್ಷಿತ ಅರಣ್ಯ , ರಾಷ್ಟ್ರೀಯ ಉದ್ಯಾನ ವನ, ಇತ್ಯಾದಿ ಇತ್ಯಾದಿ ಹೆಸರುಗಳಲ್ಲಿ ಆದಿವಾಸಿಗಳ ಒಕ್ಕಲೆಬ್ಬಿಸುವಿಕೆ ಮುಂತಾದವುಗಳ ಪ್ರಶ್ನೆಗಳ ಸಂಬಂಧ ನಕ್ಸಲೀಯರು ಎತ್ತಿರುವ ಪ್ರಶ್ನೆಗಳು ಅತ್ಯಂತ ಪ್ರಸ್ತುತವಾಗಿದೆ. ಹೀಗಾಗಿ ಸರಕಾರಗಳು ಕೇವಲ ಶರಣಾಗುವ ನಕ್ಸಲರಿಗೆ ವೈಯುಕ್ತಿಕವಾಗಿ ಬದುಕಲು ಆಸರೆ ಒದಗಿಸುವ ಭರವಸೆ ನೀಡಿದರೆ ಸಾಲದು. ಬಡ ರೈತರು, ಆದಿವಾಸಿಗಳು ಮುಂತಾದ ದನಿಇಲ್ಲದ ಶೋಷಿತ ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸುವ ಸಮಗ್ರ ನೀತಿ ರೂಪಿಸಿ ಅದನ್ನು ಪ್ರಾಮಾಣಿಕವಾಗಿ ಜಾರಿ ಮಾಡಬೇಕು. ಅವರ ನೆಲೆಗಳನ್ನು ಸಂರಕ್ಷಿಸಬೇಕು. ಆದರೆ ನಮ್ಮ ಸರಕಾರಗಳಿಗೆ ಅಂತಹ ರಾಜಕೀಯ ಇಚ್ಚಾಶಕ್ತಿ ಇಲ್ಲ ಎಂಬುದು ಪದೇ ಪದೇ ಸಾಬೀತಾಗುತ್ತಿದೆ.

ಶರಣಾಗುವ ನಕ್ಸಲರಿಗೆ ಒದಗಿಸಲಾಗುವುದು ಎನ್ನಲಾಗುವ ಸೌಕರ್ಯಗಳು ಎಷ್ಟರ ಮಟ್ಟಿಗೆ ಅವರಿಗೆ ದಕ್ಕುತ್ತವೆ ಎಂಬುದು ಸಹ ಪ್ರಶ್ನಾರ್ಹವಾದ ವಿಷಯ. ಏಕೆಂದರೆ ರಾಜ್ಯದಲ್ಲಿ ಈಗ್ಗೆ ಕೆಲ ವರ್ಷಗಳ ಹಿಂದೆ ಸಶಸ್ತ್ರ ಹೋರಾಟದ ದಾರಿಯನ್ನು ಕೈಬಿಟ್ಟು ಪ್ರಜಾಸತ್ತಾತ್ಮಕ ಚಳುವಳಿಯ ದಾರಿಗೆ ಬಂದ ನಕ್ಸಲರ ಪೈಕಿ ಕೆಲವೇ ಕೆಲವು ನಾಯಕರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲಾಗಿದೆ. ಅವರ ಜೊತೆಗೆ ಶರಣಾದ ಹಲವು ಮಾಜಿ ನಕ್ಸಲರು ಜೀವನೋಪಾಯದ ದಾರಿ ಕಾಣದೆ, ತಮ್ಮ ಮೇಲಿನ ಮೊಕದ್ದಮೆಗಳನ್ನು ನಡೆಸಲು ಹಣವೂ ಇಲ್ಲದೇ ಅತ್ಯಂತ ದಾರುಣ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬ ಮಾಹಿತಿಗಳಿವೆ. ಸರಕಾರದ ಘೋಷಿತ ಶರಣಾಗತಿಯ ಯೋಜನೆ ಯಶಸ್ವಿಯಾಗಬೇಕಾದರೆ ಮೊದಲು ನಕ್ಸಲರಲ್ಲಿ ಈ ಬಗ್ಗೆ ಭರವಸೆ ತುಂಬಲು ಸರಕಾರ ಕ್ರಮ ವಹಿಸಬೇಕು. ವಾಸ್ತವವಾಗಿ ರಾಜ್ಯವನ್ನು ಕಾಡುತ್ತಿರುವ ನಕ್ಸಲ್ ಸಮಸ್ಯೆಯ ಜಾಲ ಕೇರಳ, ತಮಿಳುನಾಡು ಮತ್ತು ಇತರೆ ನೆರೆಯ ರಾಜ್ಯಗಳಲ್ಲೂ ಹರಡಿಕೊಂಡಿದೆ. ರಾಜ್ಯ ಸರಕಾರ ಈ ವಿಷಯದಲ್ಲಿ ನೆರೆಯ ರಾಜ್ಯಗಳೊಂದಿಗೂ ಸಮನ್ವಯ ಸಾಧಿಸಬೇಕು. ಪರಿಹಾರ ರೂಪಿಸಬೇಕು.

ಮೂಲಭೂತವಾಗಿ ನಕ್ಸಲ್ ಚಳುವಳಿ ಎಂಬುದು ಭಾರತದ ರಾಜಕೀಯ–ಆರ್ಥಿಕ ಪರಿಸ್ಥಿತಿಗೆ ಮಾರ್ಕ್ಸ್ವಾದವನ್ನು ಅನ್ವಯಿಸಿ ವಿಶ್ಲೇಷಿಸುವ ವಿಚಾರದಲ್ಲಿ ಆಗಿರುವ ಗಂಭೀರ ಮಾರ್ಗಚ್ಯುತಿ ಹಾಗೂ ಅವೈಜ್ಞಾನಿಕ ಧೋರಣೆಯ ಫಲವಾಗಿ ಹುಟ್ಟಿಕೊಂಡಿರುವ ಒಂದು ದುಸ್ಸಾಹಸವಾದಿ ಚಳುವಳಿ. ಮಾವೋವಾದದ ಹೆಸರಿನಲ್ಲಿ ಹುಟ್ಟಿಕೊಂಡ, ವೈಜ್ಞಾನಿಕ ಮಾರ್ಕ್ಸ್ವಾದ– ಲೆನಿನ್ ವಾದದ ಹಾದಿಯಿಂದ ಹಳಿತಪ್ಪಿದ ಈ ಚಳುವಳಿಯಿಂದ ಭಾರತದಾದ್ಯಂತ ಅಸಂಖ್ಯಾತ ಜನರು ತಮ್ಮ ಅಮೂಲ್ಯ ಪ್ರಾಣವನ್ನು ಕಳೆದುಕೊಂಡಿದ್ದಾರೆ. ನಕ್ಸಲೀಯರು ಹಿಡಿದಿರುವ ದಾರಿ ಪ್ರಾಯೋಗಿಕವಲ್ಲ, ವೈಜ್ಞಾನಿಕವೂ ಅಲ್ಲ. ನಕ್ಸಲೀಯ ಚಳುವಳಿಯ ನೇತಾರರು, ಕಾರ್ಯಕರ್ತರು ಸಹ ಈ ವಿಷಯವನ್ನು ಮನದಟ್ಟು ಮಾಡಿಕೊಂಡು, ಶೋಷಿತ ವಿಶಾಲ ಜನ ಸಾಮೂಹಗಳನ್ನು ಸಂಘಟಿಸಿ, ಪ್ರಜಾಸತ್ತಾತ್ಮಕವಾದ ಬೃಹತ್ ಚಳುವಳಿಗಳನ್ನು ಹರಿಯ ಬಿಡುವ ದಾರಿಗೆ ಹೊರಳಿಕೊಳ್ಳಬೇಕು. ಭಾರತದ ಬಹುಪಾಲು ಶೋಷಿತ ಸಮುದಾಯಗಳಿಂದಲೂ ದೂರವಾಗಿ ದಟ್ಟ ಅರಣ್ಯಗಳಲ್ಲಿ ಅಡಗಿಕೊಂಡು, ಸ್ವಂತದ ಜೀವ ಉಳಿಸಿಕೊಳ್ಳುವುದೇ ಒಂದು ಪರಮ ಗುರಿಯಾಗಿ ಹೋಗುವ ಸನ್ನಿವೇಶಗಳಲ್ಲಿ ಯಾವ ಕ್ರಾಂತಿಯನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ನಕ್ಸಲರು ಮನಗಾಣಬೇಕು.

ಸಾರಿಗೆ ದರ ಹೆಚ್ಚಳ ಜನ ವಿರೋಧಿ–ಪ್ರತಿಭಟನೆಗೆ ಸಿಪಿಐಎಂ ಕರೆ

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ವ್ಯಾಪ್ತಿಯಲ್ಲಿ ಪ್ರಯಾಣಿಕರ ಸಾರಿಗೆ ದರಗಳು ಶೇಕಡ 15 ರಷ್ಟು ಹೆಚ್ಚಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ಖಂಡಿಸುತ್ತದೆ ಮತ್ತು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕರೆ ನೀಡಿದೆ.

ಡೀಸೆಲ್ ದರಗಳ ಹೆಚ್ಚಳ ಮತ್ತು ಸಿಬ್ಬಂದಿ ವೆಚ್ಚ ಹೆಚ್ಚಳದ ನೆಪದಲ್ಲಿ ದರ ಏರಿಕೆ ಮಾಡಿರುವುದು ಅಪ್ರಜಾಸತ್ತಾತ್ಮಕ ಮತ್ತು ಅವೈಜ್ಞಾನಿಕವಾಗಿದೆ. ಮೇಲಾಗಿ ಸಾಮಾನ್ಯ ಜನರ ವಿರೋಧಿಯಾಗಿದೆ.

ಡೀಸೆಲ್ ಹೆಚ್ಚಳವಾಗಿದೆ ಎನ್ನುವ ಸರ್ಕಾರ, ಡೀಸೆಲ್ ದರ ಇಳಿದಾಗ ದರಗಳನ್ನು ಎಂದಾದರೂ ಕಡಿಮೆ ಮಾಡಿದೆಯೇ? ಅದಕ್ಕಿಂತ ಮುಖ್ಯವಾಗಿ ಸಾರ್ವಜನಿಕ ಸಾರಿಗೆಯ ಡೀಸೆಲ್ ದರಗಳನ್ನು ಕಡಿಮೆ ಇಡಬೇಕಾದ್ದು ಸರಕಾರದ ಜವಾಬ್ದಾರಿಯಾಗಿದೆ. ವಿಪರ್ಯಾಸವೆಂದರೆ ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವು ಮುಕ್ತ ಮಾರುಕಟ್ಟೆ ದರಗಳಿಗಿಂತ ದುಬಾರಿಯಾಗಿದೆ. ಸರಕಾರಕ್ಕೆ ನಿಜಕ್ಕೂ ವೆಚ್ಚವನ್ನು ಕಡಿಮೆ ಮಾಡಬೇಕೆಂದಿದ್ದರೆ ಸಾರಿಗೆ ನಿಗಮಗಳಿಗೆ ಪೂರೈಸುವ ಡೀಸೆಲ್ ದರವನ್ನು ಸಬ್ಸಿಡಿ ದರದಲ್ಲಿ ಪೂರೈಸಬೇಕು ಅಥವಾ ಮುಕ್ತ ಮಾರುಕಟ್ಟೆ ದರಗಳಲ್ಲಾದರೂ ಪೂರೈಸಬೇಕು. ಆದ್ದರಿಂದ ಶೇಕಡ 15 ರ ದರ ಹೆಚ್ಚಳಕ್ಕೆ ಡೀಸೆಲ್ ದರ ಹೆಚ್ಚಳ ಕಾರಣ ಎನ್ನುವುದು ಸುಳ್ಳು ನೆಪವಾಗಿದೆ.

ಸಿಬ್ಬಂದಿ ವೆಚ್ಚ ಹೆಚ್ಚಳವಾಗಿರುವುದು ಮತ್ತೊಂದು ಕಾರಣವೆನ್ನಲಾಗಿದೆ. ಈಗಾಗಲೇ ನಾಲ್ಕು ನಿಗಮಗಳಲ್ಲಿ ಸಿಬ್ಬಂದಿಗಳಿಗೆ ಸುಮಾರು 3 ವರ್ಷಗಳ ವೇತನ ಬಾಕಿ ನೀಡಬೇಕಿದೆ ಮತ್ತು ಹೊಸ ವೇತನ ಒಪ್ಪಂದ ಮಾಡಬೇಕಿದೆ. 1950 ರ ಖಖಿಅ ಕಾಯ್ದೆ ಪ್ರಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಸರ್ಕಾರ ಬಜೆಟ್ ಬೆಂಬಲ ನೀಡುವುದು ಅಗತ್ಯ. ಏಕೆಂದರೆ ಸಾರ್ವಜನಿಕ ಹಿತ ದೃಷ್ಟಿಯಿಂದ ಒದಗಿಸುವ ಸಾರಿಗೆಯನ್ನು ಲಾಭ ನಷ್ಟದ ಲೆಕ್ಕದಲ್ಲಿ ನೋಡಬಾರದು. ನಷ್ಟ ಉಂಟಾದಲ್ಲಿ ಸರಕಾರ ಅದನ್ನು ಭರಿಸಬೇಕಾಗುತ್ತದೆ. ಸಾರ್ವಜನಿಕ ಸಾರಿಗೆಗಳು ಎಲ್ಲಾ ಸಂದರ್ಭಗಳಲ್ಲೂ ಲಾಭವನ್ನು ತರಲು ಆಗುವುದಿಲ್ಲ. ಸಾರಿಗೆ ನಿಗಮಗಳ ಅರ್ಧದಷ್ಟು ಮಾರ್ಗ ಕಾರ್ಯಾಚರಣೆಗಳು ಗ್ರಾಮಾಂತರದಲ್ಲಿ ಇರುವುದರಿಂದ ಸಹಜವಾಗಿಯೇ ನಷ್ಟ ಹೊಂದುತ್ತದೆ. ಜನರ ಹಿತದೃಷ್ಟಿಯಿಂದ ಸರಕಾರ ಅದನ್ನು ಭರಿಸಬೇಕು. ಅದರ ಬದಲಿಗೆ ಬೆಲೆ ಹೆಚ್ಚಳ ಮಾಡುವುದು ಜನವಿರೋಧಿ ಕ್ರಮವಾಗಿದೆ.



ಬೆಂಗಳೂರಿನ ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿ, ಕೆ. ಮಹಾಂತೇಶ್, ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ.ಎನ್. ಮಂಜುನಾಥ್, ಮುಖಂಡರಾದ ಕೆ.ಎಸ್. ವಿಮಲಾ, ಗೌರಮ್ಮ, ಕೆ.ಎಸ್ ಲಕ್ಷ್ಮಿ, ಶ್ರೀಪತಿ, ನಾಗರಾಜ, ಟಿ.ಸುರೇಂದ್ರರಾವ್, ಹನುಮಂತರಾವ್ ಹವಲ್ದಾರ್, ರಾಜಣ್ಣ, ಎಚ್.ಎನ್. ಗೋಪಾಲಗೌಡ ಸೇರಿದಂತೆ ಅನೇಕರಿದ್ದರು.

ಸಾರಿಗೆ ನಿಗಮಗಳ ನಷ್ಟ ಕಡಿಮೆ ಮಾಡಲು ಸಾರ್ವಜನಿಕರ, ರಾಜಕೀಯ ಪಕ್ಷಗಳ ಸಲಹೆಗಳನ್ನು ಆಡಳಿತ ವರ್ಗ ಪಡೆಯಬಹುದು. ಆಡಳಿತಾತ್ಮಕ ವಿಧಾನಗಳಲ್ಲಿ ಸಾಕಷ್ಟು ನಷ್ಟ ಕಡಿಮೆ ಮಾಡಬಹುದು. ಪ್ರಯಾಣಿಕರ ಸಾರಿಗೆ ದರ ಹೆಚ್ಚಳ ಉತ್ತಮ ಮಾರ್ಗವಲ್ಲ. ಎಲೆಕ್ಟ್ರಿಕ್ ಬಸ್ಸುಗಳನ್ನು ನಿಗಮಗಳೇ ಕಾರ್ಯಾಚರಣೆಯನ್ನು ಮಾಡಿದರೆ ಸಾಕಷ್ಟು ಆದಾಯ ಹೆಚ್ಚುತದೆ. ಖಾಸಗಿ ಕಂಪನಿಗಳ ಜೊತೆ ದುಬಾರಿ ಒಪ್ಪಂದಗಳನ್ನು ಮಾಡಿಕೊಂಡು ನಿಗಮಗಳೇ ನಷ್ಟ ಉಂಟು ಮಾಡಿಕೊಳ್ಳುತ್ತಿವೆ. ನಿಗಮಗಳ ಬಸ್ಸುಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡುವ ಮೂಲಕ ನಷ್ಟ ಕಡಿಮೆ ಮಾಡಬಹುದು. ಸರ್ಕಾರ ಈ ವಿಧಾನಗಳನ್ನು ಕೈ ಬಿಟ್ಟು ದರ ಹೆಚ್ಚಿಸುತ್ತಿರುವುದು ಜನವಿರೋಧಿಯಾಗಿದೆ.

ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದ ನರಳುತ್ತಿರುವ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುವ ರಾಜ್ಯ ಸರ್ಕಾರದ ದರ ಹೆಚ್ಚಳದ ತೀರ್ಮಾನವನ್ನು ವಾಪಸ್ ಪಡೆಯಬೇಕೆಂದು ಸಿಪಿಐ(ಎಂ) ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಕರೆ ನೀಡಿದೆ.

ಜನ ಚಳುವಳಿಗಳ ನೆಚ್ಚಿನ ನಾಯಕ ಪ್ರೀತಿಯ ಸಂಗಾತಿ ಜಿ.ಸಿ. ಬಯ್ಯಾರೆಡ್ಡಿ ಇನ್ನಿಲ್ಲ







ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ದ ರಾಜ್ಯ ಸಮಿತಿ ಅಧ್ಯಕ್ಷರು, ಭಾರತ ವಿದ್ಯಾರ್ಥಿ ಫೆಡರೇಷನ್‌ನ ಮಾಜಿ ರಾಜ್ಯ ಅದ್ಯಕ್ಷರು, ಕರ್ನಾಟಕ ರಾಜ್ಯದಲ್ಲಿ ಹಲವಾರು ಜನಚಳುವಳಿಗಳನ್ನು ಕಟ್ಟಿ ಬೆಳೆಸಿದ ಹಿರಿಯ ಹೋರಾಟಗಾರ, ಕಮ್ಯೂನಿಸ್ಟ್ ಚಳುವಳಿಯ ಕಾರ್ಯಕರ್ತರ ಪ್ರೀತಿಯ ಸಂಗಾತಿ ಕಾಂ. ಜಿ.ಸಿ. ಬಯ್ಯಾರೆಡ್ಡಿಯವರು ಜನವರಿ 4, 2025 ರಂದು ನಿಧನರಾದರು. ಶ್ವಾಸಕೋಶದ ಸೋಂಕಿನ ಕಾರಣದಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು 2025 ಜನವರಿ 4 ರಂದು ಹೆಚ್ಚಿನ ಚಿಕಿತ್ಸೆಗಾಗಿ ಜಯನಗರದ ಅಪೋಲೋ ಆಸ್ಪತ್ರೆಯಲ್ಲಿ ಬೆಳಗಿನ ಜಾವ 2.30 ರ ಸುಮಾರಿಗೆ ಬಹು ಅಂಗಾಗಗಳ ವೈಫಲ್ಯದಿಂದ ಕೊನೆಯುಸಿರೆಳೆದರು. 64 ವಯಸ್ಸಿನ ಅವರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು, ಮಿತ್ರರನ್ನು ಜನಚಳುವಳಿಗಳ ಸಂಗಾತಿಗಳನ್ನು ಅಗಲಿದ್ದಾರೆ.

ಜಿ.ಸಿ.ಬಯ್ಯಾರೆಡ್ಡಿಯವರನ್ನು ಡಿಸೆಂಬರ್ 27, 2024 ರಂದು ಅವರ ಆಮ್ಲಜನಕ ಸ್ಯಾಚುರೇಷನ್ ಮಟ್ಟ ಕುಸಿದ ಕಾರಣ ಬೆಂಗಳೂರಿನ ರಾಜಾಜಿನಗರದ ಸುಗುಣ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿಸಲಾಗಿತ್ತು. ವೈದ್ಯರು ತುರ್ತು ಚಿಕಿತ್ಸೆ ನೀಡುತ್ತಿರುವಾಗಲೇ ಹಠಾತ್ತನೆ ಅವರ ಹೃದಯ ಬಡಿತ ನಿಂತಿತ್ತು. ಸಿ.ಪಿ.ಆರ್. ಪ್ರಕ್ರಿಯೆ ಮೂಲಕ ಹೃದಯ ಬಡಿತವನ್ನು ಪುನರ್ ಸ್ಥಾಪಿಸಿ ಚಿಕಿತ್ಸೆ ನೀಡಲಾದ ನಂತರ ಚೇತರಿಕೆಗೊಂಡಿದ್ದರು. ಆದರೆ ಮತ್ತೆ ಶ್ವಾಸಕೋಶದ ಸೋಂಕಿಗೆ ತುತ್ತಾದರು. ತಜ್ಞ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಜಯನಗರದ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಯಿತು. ಶ್ವಾಸಕೋಶದ ಸೋಂಕಿನಿಂದ ಗುಣಮುಖರಾಗದೇ ಮುಂಜಾನೆ 2-30 ಗಂಟೆ ಸಮಯದಲ್ಲಿ ಹೃದಯಾಘಾತ ಉಂಟಾಗಿ ಬಹು ಅಂಗಾಗಗಳ ವೈಪಲ್ಯಕ್ಕೆ ಒಳಗಾಗಿ ನಿಧನರಾದರು.

ಬಯ್ಯಾರೆಡ್ಡಿಯವರು ಅವಿಭಜಿತ ಕೋಲಾರ ಜಿಲ್ಲೆಯ ಚಿಂತಾಮಣಿ (ಈಗಿನ ಚೇಳೂರು ತಾ.) ತಾಲೂಕಿನ ಗಡಿಗವಾರಪಲ್ಲಿ ಗ್ರಾಮದಲ್ಲಿ ಅಕ್ಟೋಬರ್ 10, 1960 ರಂದು ಜನಿಸಿದರು. ಅವರ ತಂದೆ ದಕ್ಷಿಣ ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಜಿ.ಎಸ್. ಚೌಡಪ್ಪ ಮತ್ತು ತಾಯಿ ಬಯ್ಯಮ್ಮ. ಬಯ್ಯಾರೆಡ್ಡಿಯವರು



ಜನಶಕ್ತಿ, ಕ್ರಿಯಾ ಶ್ರದ್ದಾಂಜಲಿ

ಕೊನೆಯ ಪುತ್ರರು. 1980 ರಲ್ಲಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಗೆ ಸೇರಿದ ಅವರು ವಿದ್ಯಾರ್ಥಿ ಚಳುವಳಿಯ ಮೂಲಕ ಹಂತ ಹಂತವಾಗಿ ಬೆಳೆದವರು. ನರಗುಂದ-ನವಲಗುಂದ ಪ್ರದೇಶದಲ್ಲಿ ಆರಂಭಗೊಂಡ ರೈತರ ಬಂಡಾಯ ಸಂದರ್ಭದಲ್ಲಿ ಹೋರಾಟ ನಿರತ ರೈತರಿಗೆ ಬೆಂಬಲ ನೀಡಿ ವಿದ್ಯಾರ್ಥಿಗಳ ಸಮರಶೀಲ ಹೋರಾಟವನ್ನು ಸಂಘಟಿಸಿದರು. ಆ ಸಂದರ್ಭದಲ್ಲಿ ನಡೆದ ಪೋಲೀಸ್ ಗೋಲೀಬಾರ್‌ನಲ್ಲಿ ಹಲವರು ಹುತಾತ್ಮರಾಗಿದ್ದರು.

ಕೆಂಬಾವುಟದ ಗೌರವ-ಗಣ್ಯರ ಶ್ರದ್ಧಾಂಜಲಿ

ಜನವರಿ 4, 2025 ರಂದು ಬೆಳಿಗ್ಗೆ ಅಪೊಲೋ ಆಸ್ಪತ್ರೆಯಿಂದ 10 ಗಂಟೆಯ ಸುಮಾರಿಗೆ ಬಯ್ಯಾರೆಡ್ಡಿಯವರ ಮೃತದೇಹವನ್ನು ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಸಿಪಿಐ(ಎಂ) ಕಚೇರಿ ಇರುವ ಇ.ಎಂ.ಎಸ್. ಭವನಕ್ಕೆ ತರಲಾಯಿತು. "ಕಾಂ. ಜಿ.ಸಿ. ಬಯ್ಯಾರೆಡ್ಡಿ ಅಮರ್ ರಹೇ," "ಕಾಂ. ಜಿ.ಸಿ.ಬಿ ಯವರಿಗೆ ಕೆಂಪು ವಂದನೆ" ಮುಂತಾದ ಘೋಷಣೆಗಳೊಂದಿಗೆ ದುಃಖತಪ್ತ ಸಂಗಾತಿಗಳು, ಬಂಧುಗಳು, ಸ್ನೇಹಿತರು ಮೃತದೇಹವನ್ನು ಬರಮಾಡಿಕೊಂಡರು. ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಅವರೊಂದಿಗೆ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳು ಮೃತ ದೇಹದ ಮೇಲೆ ಪಕ್ಷದ ಕೆಂಬಾವುಟವನ್ನು ಹೊದಿಸಿ ಗೌರವಿಸಿದರು. ಬೆಳಿಗ್ಗೆ 10. ರಿಂದ ಸಂಜೆ ಸುಮಾರು 5.30 ರವರೆಗೆ ದೇಹವನ್ನು ಪಕ್ಷದ ಕಚೇರಿ ಬಳಿ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಹಾಗೂ ಗೌರವ ಸಮರ್ಪಣೆಗಾಗಿ ಇರಿಸಲಾಗಿತ್ತು. ನಾಡಿನ ಹಲವು ಜನಚಳುವಳಿಗಳ ಮುಖಂಡರು, ರಾಜಕೀಯ ನಾಯಕರು, ಗಣ್ಯರು, ಸಾಹಿತಿ-ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಸಿಪಿಐ(ಎಂ) ಪಕ್ಷದ ಮುಖಂಡರು, ಕಾರ್ಯಕರ್ತರು, ಬಂಧುಗಳು ಕಾಂ. ಜಿ.ಸಿ. ಬಯ್ಯಾರೆಡ್ಡಿಯವರಿಗೆ ಗೌರವ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರೂ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ. ವಿಜೂ ಕೃಷ್ಣನ್, ಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರೂ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕಾಂ. ಬಿ. ವೆಂಕಟ್, ಜನ ಚಳುವಳಿಗೆ ಕಾಂ. ಜಿ.ಸಿ ಬಯ್ಯಾರೆಡ್ಡಿಯವರು ಕೊಟ್ಟ ಕೊಡುಗೆಯ ಕುರಿತು ಮಾತನಾಡಿ ಶ್ರದ್ಧಾಂಜಲಿ ಅರ್ಪಿಸಿದರು. ಹಾಗೆಯೇ ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರಾದ ಕಾಂ. ವಿ.ಜೆ.ಕೆ. ನಾಯರ್, ಕಾಂ.ಜಿ.ಎನ್. ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಕೇಂದ್ರ ಸಮಿತಿಯ ಸದಸ್ಯರಾದ ಕಾಂ. ಯು.ಬಸವರಾಜ್, ಹಿರಿಯ ಮಹಿಳಾ ನಾಯಕಿ ಕೆ.ಎಸ್.ವಿಮಲ, ವಿದ್ಯಾರ್ಥಿ ದೆಸೆಯಿಂದಲೂ ಒಡನಾಡಿಗಳಾಗಿದ್ದ ಕಾಂ. ಎಸ್.ವೈ.ಗುರುಶಾಂತ್ ಅವರುಗಳು ಸಹ ನುಡಿ ನಮನ ಸಲ್ಲಿಸಿದರು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ, ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಾದ ಕೆ.ಎಚ್. ಮುನಿಯಪ್ಪ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಮತ್ತು ಶಾಸಕರಾದ ಬಿ.ಆರ್. ಪಾಟೀಲ, ಮಾಜಿ ಸಚಿವರು ಹಾಗೂ ಮಾಜಿ ವಿಧಾನ ಸಭಾ ಸ್ಪೀಕರ್ ರಮೇಶ್ ಕುಮಾರ್, ಮಹಾಲಕ್ಷ್ಮಿ ಲೇಔಟ್ ಶಾಸಕರಾದ ಕೆ. ಗೋಪಾಲಯ್ಯ, ಸಂಸದ, ಡಿ.ವೈ. ಎಫ್.ಐ. ಅಖಿಲ ಭಾರತ ಅಧ್ಯಕ್ಷರಾದ ಎ.ಎ. ರಹೀಂ ಅವರು ಸಹ ಗೌರವ ಸಲ್ಲಿಸಿದರು.

ಮಾಜಿ ಸಂಸದರಾದ ಪುಟ 4 ಕ್ಕೆ



ರಾಜ್ಯ ಕಾರ್ಯದರ್ಶಿ ಮಂಡಳಿಯಿಂದ



ಮಹಿಳಾ ಸಂಘಟನೆಯಿಂದ

ಜನ ಚಳುವಳಿಗಳ ನೆಚ್ಚಿನ ನಾಯಕ..... ಪುಟ 3 ರಿಂದ



ಕೆ.ಸಿ. ರಾಮಮೂರ್ತಿ ಐ.ಪಿ.ಎಸ್(ನಿ), ನಿವೃತ್ತ ಐ.ಎ.ಎಸ್. ಅಧಿಕಾರಿ ನಾರಾಯಣಸ್ವಾಮಿ, ಮಾಜಿ ಚುನಾವಣಾಧಿಕಾರಿಗಳಾದ ಶ್ರೀನಿವಾಸಾಚಾರಿ ಐ.ಎ.ಎಸ್., ಸುಪ್ರಿಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್, ಹಿರಿಯ ಪತ್ರಕರ್ತರಾದ ಎಸ್.ಆರ್. ಆರಾಧ್ಯ, ಕೃಷಿ ಆರ್ಥಿಕ ತಜ್ಞರು ಮತ್ತು ಕರ್ನಾಟಕ ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷರಾದ ಡಾ. ಪ್ರಕಾಶ್ ಜಿ. ಕಮ್ಮರಡಿ, ಸಾಹಿತಿ ಚಿಂತಕರಾದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಎಸ್.ಜಿ. ಸಿದ್ಧರಾಮಯ್ಯ, ನಗರಗೆರೆ ರಮೇಶ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಮ್ ಮುಂತಾದವರು ಅಗಲಿದ ಚೇತನಕ್ಕೆ ಅಂತಿಮ ನಮನ ಸಲ್ಲಿಸಿದರು. ತ್ರಿಪುರಾ ರಾಜ್ಯ ಕಾರ್ಯದರ್ಶಿ, ವಿರೋಧ ಪಕ್ಷದ ನಾಯಕರಾದ ಜಿತೇಂದ್ರ ಚೌಧುರಿ, ಕಿಸಾನ್ ಸಭಾದ ಮಾಜಿ ಅದ್ಯಕ್ಷರು, ಪಿ.ಬಿ.ಸದಸ್ಯರಾಗಿದ್ದ ಎಸ್. ರಾಮಚಂದ್ರ ಪಿಳ್ಳೈ, ಪಿ.ಬಿ.ಸದಸ್ಯರೂ ರಾಜ್ಯ ಉಸ್ತುವಾರಿಗಳಾದ ಕಾಂ.ಎಂ.ಎ.ಬೇಬಿ, ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ನವರು ಶ್ರದ್ಧಾಂಜಲಿ ಸಂದೇಶ ಕಳುಹಿಸಿದ್ದರು.

ಸಿಪಿಐ ಪಕ್ಷದ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, ರಾಜ್ಯ ಮುಖಂಡರಾದ ಡಾ.ಸಿದ್ದನಗೌಡ ಪಾಟೀಲ, ಎಸ್.ಯು.ಸಿ.ಐ.(ಸಿ) ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ. ಕೆ. ಉಮಾರವರ ನೇತೃತ್ವದ ನಿಯೋಗ, ಸಿಪಿಐ(ಎಂ.ಎಲ್.) ಪಕ್ಷದ ರಾಜ್ಯ ಕಾರ್ಯದರ್ಶಿ ಕ್ಲಿಫ್ಟನ್ ರೊಸಾರಿಯೋ, ಕರ್ನಾಟಕ ಜನಶಕ್ತಿಯ ರಾಜ್ಯಾಧ್ಯಕ್ಷರಾದ ನೂರ್ ಶ್ರೀಧರ್, ಭೂಮಿ ಮತ್ತು ವಸತಿ ಹಕ್ಕು ಹೋರಾಟ ಸಮಿತಿ ಕುಮಾರ್ ಸಮತಳ, ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್‌ನ ಜಿ.ಆರ್. ಶಿವಶಂಕರ್ ನೇತೃತ್ವದ ಪಕ್ಷದ ನಿಯೋಗಗಳು ಮೃತ ದೇಹಕ್ಕೆ ನಮಿಸಿ ಅಂತಿಮ ಗೌರವ ಸಲ್ಲಿಸಿದರು. ಮಂಗಳೂರಿನಲ್ಲಿ ಸೇರಬೇಕಿದ್ದ ಡಿ.ವೈ.ಎಫ್.ಐ. ರಾಜ್ಯ ಸಮಿತಿಯನ್ನು ಸಭೆಯನ್ನು ರದ್ದು ಮಾಡಿ ರಾಜ್ಯ ಮುಖಂಡರು ಭಾಗಿಯಾದರು.

ಹಾಗೆಯೇ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ಕರ್ನಾಟಕ ರಾಜ್ಯ ರೈತ ಸಂಘಟನೆಯ ನಾಯಕಿ ಚುಕ್ಕಿ ನಂಜುಂಡಸ್ವಾಮಿ, ಭಾರತೀಯ ಕೃಷಿಕ ಸಮಾಜದ ರಾಜ್ಯಾಧ್ಯಕ್ಷರಾದ ಸಿದ್ದುಗೌಡ ಮೋದಗಿ, ರೈತ ಮುಖಂಡ ವೀರಸಂಗಯ್ಯ, ಕರ್ನಾಟಕ ಪ್ರಾಂತ ರೈತ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಶೇಖರ ಬಾಳೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಕರ್ನಾಟಕ ದಲಿತ ಸಂಘರ್ಷ ಸಮಿತಿ (ಸಂಯೋಜಕ)ಯ ರಾಜ್ಯ ಸಂಚಾಲಕರಾದ ವಿ. ನಾಗರಾಜ್, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆಯ ಅಧ್ಯಕ್ಷರಾದ ಡಾ. ಬಿ.ಆರ್..ಮಂಜುನಾಥ್ ಮತ್ತು ವೇದಿಕೆಯ ಸಂಗಾತಿಗಳು, ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಮುಖಂಡರಾದ ಎಚ್.ಎಸ್. ಜೈಕುಮಾರ್, ಹದ್ಲಿ, ವೇದ ಮುಂತಾದವರು, ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಮುಂಖಡರಾದ ಶುಭಂಕರ ಚಕ್ರವರ್ತಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿ ಇ.ಬಸವರಾಜ್ ಮುಂತಾದವರು, ಸಂವಿಧಾನ ಓದು ಅಭಿಯಾನದ ಮುಖಂಡರಾದ ಎಚ್.ಎನ್. ಹರಿ, ಬಯ್ಯಾರೆಡ್ಡಿಯವರ ಒಡನಾಡಿ, ಅಖಿಲ ಭಾರತ ವಕೀಲರ ಸಂಘದ ರಾಜ್ಯಾಧ್ಯಕ್ಷರಾದ ಹರೀಂದ್ರ, ಕೆ.ಆರ್. ವೆಂಕಟೇಶಗೌಡ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ, ಮುಂತಾದವರು ಅಂತಿಮ ಗೌರವ ಸಲ್ಲಿಸಿದರು. ಸಿಪಿಐ(ಎಂ) ಪಕ್ಷದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮಂಡ್ಯ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಪ್ಪಳ, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ–ದಾವಣಗೆರೆ, ವಿಜಯಪುರ, ಮುಂತಾದ ನಾನಾ ಜಿಲ್ಲೆಗಳ ಸಂಗಾತಿಗಳು ಅಗಲಿದ ಸಂಗಾತಿಗಳಿಗೆ ನಮನ ಸಲ್ಲಿಸಿದರು.

ಸಂಜೆ ಬಯ್ಯಾರೆಡ್ಡಿಯವರ ಮಡದಿ ಶ್ರೀಮತಿ ಮಂಜರಿ ಹಾಗೂ ಮಗಳು ಕುಮಾರಿ ನಿಲೋನ ಮತ್ತು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಮುಂತಾದವರು ವಾಹನದಲ್ಲಿ ಮೃತದೇಹವನ್ನು ಅವರ ಸ್ವಗ್ರಾಮಕ್ಕೆ ತೆಗೆದುಕೊಂಡು ಹೊರಟರು.

ಈಗಾಗಲೇ ಸಾವಿರ ದಿನಗಳು ದಾಟಿ ಛಲದಿಂದ ಮುಂದೆವರೆದಿರುವ ದೇವನಹಳ್ಳಿ ಚನ್ನರಾಯಪಟ್ಟಣದ ರೈತರ ಭೂ ಸ್ವಾಧೀನ ವಿರೋಧಿ ಚಳುವಳಿಯ ಹೋರಾಟಗಾರರು ಬಯ್ಯಾರೆಡ್ಡಿಯವರ ಮೃತದೇಹವನ್ನು ತಮ್ಮ ಹೋರಾಟದ ಸ್ಥಳಕ್ಕೆ ತಂದು ಅಲ್ಲಿ ತಾವು ಗೌರವ ಸಲ್ಲಿಸಲು ಅವಕಾಶ ಮಾಡಿಕೊಡಬೇಕು ಎಂದು ಬಯಸಿ ಒತ್ತಾಯಸಿದ ಹಿನ್ನೆಲೆಯಲ್ಲಿ ಮಾರ್ಗ ಮಧ್ಯೆ ದೇಹವನ್ನು ಅಲ್ಲಿನ ಹೋರಾಟ ನಿರತರು ಧರಣ ನಡೆಸುತ್ತಿರುವ ಜಾಗದಲ್ಲಿ ಇಡಲಾಗಿತ್ತು.







ಅಲ್ಲಿ ಚಳುವಳಿಗಾರರು ತಮ್ಮ ಗೌರವವನ್ನು ಸಲ್ಲಿಸಿದರು. ನಂತರ ಹುಟ್ಟೂರು ಗಡಿಗವಾರಪಲ್ಲಿ ಗ್ರಾಮದಲ್ಲಿ ಸಾರ್ವಜನಿಕರ ಗೌರವ ಸಲ್ಲಿಕೆಗೆ ಇಡಲಾಯಿತು.

ಗ ಡಿ ಗ ವಾ ರ ಪ ಲ್ಲಿ ಂ ು ಲ್ಲಿ ಂ ು ೂ ಬಯ್ಯಾರೆಡ್ಡಿಯವರ ಕುಟುಂಬ ಸದಸ್ಯರು, ನೂರಾರು ಜನ ಗ್ರಾಮಸ್ಥರು, ಚಳುವಳಿಕಾರರು, ಸಮಾಜದ ನಾನಾ ವಲಯಗಳ ಗಣ್ಯರು ಬಂದು ಗೌರವ ಸಲ್ಲಿಸಿದರು.

ಗಡಿಗವಾರಪಲ್ಲಿಯಲ್ಲಿ ಶ್ರದ್ಧಾಂಜಲಿ ಸಭೆ

ಜನವರಿ 5, 2025 ರಂದು ಬೆಳಿಗ್ಗೆ ಗಡಿಗವಾರಪಲ್ಲಿಯಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು. ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ.ಬಿ.ವಿ.ರಾಘವುಲು ಅವರು ಮಾತನಾಡಿ "ಬಯ್ಯಾರೆಡ್ಡಿಯವರು ರೈತರ ಅಥವಾ ಜನರ ಯಾವುದೇ ಸಮಸ್ಯೆ ಇರಲಿ ಸರಳವಾಗಿ ಜನರಿಗೆ ಹೇಳುತ್ತಿದ್ದರು. ಅವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದರು. 40 ವರ್ಷಗಳ ಬೆಳೆದು ನಿಂತ ಮರವು, ಒಳ್ಳೆಯ ಫಲವನ್ನು, ನೆರಳನ್ನು ನೀಡುವ ಕಾಲದಲ್ಲಿ ಉರುಳಿ ಬಿದ್ದಂತಾಗಿದೆ." ಎಂದರು. ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾಂ.ಕೆ.ಎನ್. ಉಮೇಶ್ ಅವರು ಮಾತನಾಡಿ, 'ತಾವು 1994 ರಲ್ಲಿ ವಕೀಲನಾಗಿ ನೋಂದಾಯಿಸಿಕೊಂಡೆ. ಆದರೆ ಬಯ್ಯಾರೆಡ್ಡಿಯವರು ನನ್ನನ್ನು ಪಕ್ಷದ ಪೂರ್ಣಾವಧಿ ಕಾರ್ಯಕರ್ತನಾಗಬೇಕು ಎಂದು ಮನವೊಲಿಸಿದರು. ಆ ರೀತಿ ಕಾಯಕರ್ತರನ್ನು ಮನವೊಲಿಸುವ ಸಾಮರ್ಥ್ಯ ಅವರಲ್ಲಿತ್ತು. ಕಾರ್ಯಕರ್ತರನ್ನು ಗುರುತಿಸುವುದರಲ್ಲಿ ಹಾಗೂ ಬೆಳೆಸುವುದರಲ್ಲಿ ಅವರಿಗಿದ್ದ ಸಾಮರ್ಥ್ಯ ಅತ್ಯಂತ ಅಪರೂಪದ್ದು" ಎಂದರು.

ಕಾಂ. ವಿಜೂ ಕೃಷ್ಣನ್ ಅವರು ಮಾತನಾಡಿ "ಜವಾಹರ ಲಾಲ್ ನೆಹರೂ ವಿ.ವಿ.ಯಲ್ಲಿ ತಾವು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ನನಗೆ ಬಯ್ಯಾರೆಡ್ಡಿಯವರು ಆಪ್ತಮಿತ್ರನಂತೆ ಇದ್ದರು. ರೈತರ ಸಮಸ್ಯೆಗಳು, ರೈತ ಚಳುವಳಿಗಳ ಬಗೆಗೆ ಯಾವುದೇ ವಿಷಯವನ್ನು ಆಳವಾಗಿ ತಿಳಿದುಕೊಳ್ಳಬೇಕಾದರೆ ಅತ್ಯುತ್ತಮ ಅನುಭವ ತಿಳುವಳಿಕೆ ಹೊಂದಿದ್ದ ಬಯ್ಯಾರೆಡ್ಡಿಯವರೊಂದಿಗೆ ಚರ್ಚಿಸಿ ಮಾರ್ಗದರ್ಶನ ಪಡೆದುಕೊಳ್ಳುತ್ತಿದೆ" ಎಂದರು.

ಹಿರಿಯ ನಾಯಕ ಕಾಂ.ಜಿ.ಎನ್. ನಾಗರಾಜ್ ಅವರು ಮಾತನಾಡಿ, "ಬಯ್ಯಾರೆಡ್ಡಿಯವರು ವಿದ್ಯಾರ್ಥಿ ಚಳುವಳಿಯಿಂದ ಪಡೆದ ಅನುಭವ, ಜ್ಞಾನವನ್ನು ಜನಚಳುವಳಿಗಳನ್ನು ಕಟ್ಟಲು ಸಮರ್ಥವಾಗಿ ಬಳಸಿದರು. ಕೊರೊನ ಲಾಕ್ ಡೌನ್ ಕಾಲದಲ್ಲಿ ತೋಟದ ಮನೆಯಲ್ಲಿ ಇದ್ದುಕೊಂಡೇ ರೈತ ಚಳುವಳಿಯನ್ನು ಎತ್ತರಕ್ಕೇರಿಸುವ ಕೆಲಸ ಮಾಡಿದರು. ರಾಜ್ಯದ ನಾನಾ ರೈತ ಸಂಘಟನೆಗಳನ್ನು ಒಂದು ವೇದಿಕೆಗೆ ತಂದು ಸಂಯುಕ್ತ ಕಿಸಾನ್ ಮೋರ್ಚಾದಂತೆ, ರಾಜ್ಯದಲ್ಲಿ ಸಂಯುಕ್ತ ಹೋರಾಟ ಸಮಿತಿಯನ್ನು ರೂಪಿಸುವಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದರು." ಎಂದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಎಸ್. ವರಲಕ್ಷ್ಮಿಯವರು ಮಾತನಾಡಿ ಬಯ್ಯಾರೆಡ್ಡಿಯವರು ಈ ಹಳ್ಳಿಯವರು ಮಾತ್ರವಲ್ಲ, ರಾಜ್ಯದಲ್ಲಿ, ದೇಶದಲ್ಲಿ ದೊಡ್ಡ ನಾಯಕ. ರೈತರಿಗೆ ಆಗುತ್ತಿರುವ ಅನ್ಯಾಯ, ಮೋಸ ತಪ್ಪಿಸಲು ಬಯ್ಯಾರೆಡ್ಡಿಯವರಂತಹ ನಾಯಕರು ಬೇಕು" ಎಂದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಎಂ.ಪಿ. ಮುನಿವೆಂಟಕಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕಾಂ.ಕೆ.ಪ್ರಕಾಶ್ ರವರು, ರಾ.ಕಾ. ಮಂ.ಸದಸ್ಯರಾದ ಕೆ.ನೀಲಾ, ಕೆ.ಮಹಾಂತೇಶ್, ಮುಜೀಬ್, ಚಂದ್ರಪ್ಪ ಹೊಸ್ಕೆರಾ, ಮುಂತಾದವರು ಉಪಸ್ಥಿತರಿದ್ದರು. ಬಹಿರಂಗ ಸಭೆಯ ನಂತರ ಗ್ರಾಮದಲ್ಲಿ ಮೆರವಣಿಗೆಯಲ್ಲಿ ಮೃತದೇಹವನ್ನು ಕೊಂಡೊಯ್ದು ಕುಟುಂಬದ ತೋಟದ ಮಣ್ಣಿನಲ್ಲಿ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಯಿತು.

'ಕಾಂ. ಜಿ.ಸಿ. ಬಯ್ಯಾರೆಡ್ಡಿ ಅಮರ್ ರಹೇ, ಕಾಂ. ಜಿ.ಸಿ. ಬಯ್ಯಾರೆಡ್ಡಿಯವರ ಕನಸುಗಳನ್ನು ನನಸು ಮಾಡುತ್ತೇವೆ' ಎಂಬ ಘೋಷಣೆಗಳು ಮೊಳಗಿದವು.

ವರದಿ: ಆರ್.ರಾಮಕೃಷ್ಣ

(ಅಗಲಿದ ಜಿ.ಸಿ.ಬಯ್ಯಾರೆಡ್ಡಿ ಅವರ ಕುರಿತ ನುಡಿ ನಮನಗಳ ವಿಶೇಷ ಬರಹಗಳು – ಮುಂದಿನ ಸಂಚಿಕೆಯಲ್ಲಿ.)



ಜನತೆಯ ಸಂಕಟಗಳ ವಿರುದ್ಧ ಹೋರಾಟ ತೀವ್ರಗೊಳಿಸಲು ಮತ್ತು ಎಡ-ಪ್ರಜಾಸತ್ತಾತ್ಮಕ ಪರ್ಯಾಯ ರಾಜಕೀಯ ರಂಗವನ್ನು ರೂಪಿಸಲು ಸಿಪಿಐ(ಎಂ) 24ನೇ ರಾಜ್ಯ ಸಮ್ಮೇಳನ ನಿರ್ಧಾರ

ರಾಜ್ಯದ ರೈತರು, ಕಾರ್ಮಿಕರು, ಕೂಲಿಕಾರರು, ದುರ್ಬಲ ವರ್ಗಗಳು, ಮಧ್ಯಮ ವರ್ಗಗಳು ಮತ್ತು ಇತರೆ ಜನ ವಿಭಾಗಗಳ ಮೇಲೆ ಸಂಕಟಗಳನ್ನು ಹೇರಿರುವ ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ಮತ್ತು ಕರ್ನಾಟಕದಲ್ಲಿ ಎಡ-ಪ್ರಜಾಸತ್ತಾತ್ಮಕ ಪರ್ಯಾಯ ರಾಜಕೀಯ ರಂಗವನ್ನು ರೂಪಿಸಲು ಸಿಪಿಐ(ಎಂ) ತೀರ್ಮಾನಿಸಿದೆ. ಡಿಸೆಂಬರ್ 29-31, 2024 ರವರೆಗೆ ತುಮಕೂರು ನಗರದಲ್ಲಿ ನಡೆದ 24 ನೇ ರಾಜ್ಯ ಸಮ್ಮೇಳನದಲ್ಲಿ ಈ ತೀರ್ಮಾನಗಳನ್ನು ಮಾಡಲಾಗಿದೆ.





ಕಾಂ. ಪ್ರಕಾಶ್ ಕೆ.

ಕೇಂದ್ರದ ಮೋದಿ ಸರ್ಕಾರವು ದೇಶದ ಬಹುಸಂಖ್ಯಾತ ಬಡವರನ್ನು ಬಲಿಕೊಟ್ಟು ಮತೀಯವಾದಿ ನೀತಿಗಳ ನೆರಳಲ್ಲಿ ಕಾರ್ಪೋರೇಟ್ ಬಂಡವಾಳದಾರರ ಹಿತಕ್ಕಾಗಿ ನವ-ಉದಾರವಾದಿ ನೀತಿಗಳನ್ನು ಆಕ್ರಮಣಕಾರಿಯಾಗಿ ಜಾರಿ ಮಾಡುತ್ತಿದೆ. ಇತ್ತ ರಾಜ್ಯದ ಕಾಂಗ್ರೆಸ್ ಸರ್ಕಾರವೂ ಮೋದಿ ಸರ್ಕಾರದ ರೀತಿಯ ನೀತಿಗಳನ್ನೇ ಅನುಸರಿಸುತ್ತಿದೆ ಎಂದು ಸಮ್ಮೇಳನದಲ್ಲಿ ಮಂಡಿಸಿದ ರಾಜಕೀಯ ವರದಿಯಲ್ಲಿ ವಿಶ್ಲೇಷಿಸಿದೆ. ಇದರಿಂದ ಬಡವರು, ಕೂಲಿ ಕಾರ್ಮಿಕರು, ರೈತರು, ಕಾರ್ಮಿಕರು ಮತ್ತು ಇತರೆ ದುಡಿಯುವ ಜನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬೆಲೆ ಏರಿಕೆ, ನಿರುದ್ಯೋಗ, ಉದ್ಯೋಗ ಅಭದ್ರತೆ, ರೈತರ ಬೆಳೆಗೆ ಸಿಗದ ಬೆಲೆ, ಬಲವಂತದ ಭೂಸ್ವಾಧೀನ, ಶಿಕ್ಷಣ, ಆರೋಗ್ಯ, ಮತ್ತು ಇತರೆ ನಾಗರೀಕ ಸೇವೆಗಳ ದುಬಾರಿ, ಇತ್ಯಾದಿ ಸಮಸ್ಯೆಗಳಿಂದಾಗಿ ಜರ್ಜರಿತಗೊಂಡಿದ್ದಾರೆ. ಇದೇ ಸಂದರ್ಭದಲ್ಲಿ ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುತ್ತಿರುವ ಕುರಿತು ಸಮ್ಮೇಳನ ಆತಂಕ ವ್ಯಕ್ತಪಡಿಸಿದೆ.

ಆರ್.ಎಸ್.ಎಸ್. ಮತ್ತು ಅದರ ಪರಿವಾರವು ಧಾರ್ಮಿಕ ಹಾಗೂ ಜನರ ಧಾರ್ಮಿಕ ನಂಬಿಕೆಗಳನ್ನು ದುರುಪಯೋಗಪಡಿಸಿಕೊಂಡು ಮತೀಯವಾದಿ ನೆಲೆಯಲ್ಲಿ ಜನರ ಐಕ್ಯತೆಯನ್ನು ಮುರಿಯಲು ನಡೆಸುತ್ತಿರುವ ಪ್ರಯತ್ನಗಳನ್ನು ಹತ್ತಿಕ್ಕುವಲ್ಲಿ ರಾಜ್ಯ ಸರ್ಕಾರವು ವಿಫಲವಾಗಿದೆ ಎಂದು ಸಮ್ಮೇಳನವು ಅಭಿಪ್ರಾಯಪಟ್ಟಿದೆ. ಕೋಮು ವಿಭಜನೆ ತಡೆಗಟ್ಟುವ ವಿಚಾರದಲ್ಲಿ ಹಾಗೂ ಜನತೆಯ ಐಕ್ಯತೆಯನ್ನು ಕಾಪಾಡಲು ಸಿಪಿಐ(ಎಂ)ನ ಕಾರ್ಯಕರ್ತರು ಮುಂಚೂಣಿಯಲ್ಲಿರುವಂತೆ ಪಕ್ಷದ ಕಾರ್ಯಕರ್ತರಿಗೆ ಸಮ್ಮೇಳನವು ಕರೆ ನೀಡಿದೆ.

ಭೂರಹಿತ ಕುಟುಂಬಗಳಿಗೆ ಮನೆ ನಿವೇಶನ, ಅರಣ್ಯ ಸಾಗುವಳಿದಾರರಿಗೆ ರಕ್ಷಣೆ, ಬಲವಂತದ ಭೂಸ್ವಾಧೀನ ಕೈಬಿಡಲು, ಕರಾಳ ಕೃಷಿ ಕಾಯ್ದೆಗಳ ರದ್ದತಿಗಾಗಿ, ಸಾರ್ವಜನಿಕ ಆಸ್ತಿಗಳ ಖಾಸಗೀಕರಣದ ವಿರುದ್ಧ, ಫೆಬ್ರವರಿ 10 ರಂದು ತಿಂಗಳಲ್ಲಿ ನಡೆಯುವ ಪಾದಯಾತ್ರೆಗೆ ಬೆಂಬಲ, ಐಸಿಡಿಎಸ್ ಯೋಜನೆ ದುರ್ಬಲಗೊಳಿಸುವುದರ ವಿರುದ್ಧ, ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳಿಗೆ ಕಡಿವಾಣಕ್ಕೆ ಒತ್ತಾಯಿಸಿ, ಸಾರ್ವಜನಿಕ ಪಡಿತರ ವ್ಯವಸ್ಥೆ ಬಲಪಡಿಸಲು ಹಾಗೂ ಬಡವರ ಬಿಪಿಎಲ್ ಕಾರ್ಡ್ ರದ್ದತಿ ವಿರೋಧಿಸಿ, ಸಾಗರ ಮಾಲಾ ಯೋಜನೆಯಿಂದ ಕರಾವಳಿ ಜನರ ಮೇಲಾಗುತ್ತಿರುವ ವ್ಯತಿರಿಕ್ತ ಪರಿಣಾಮಗಳ ನಿವಾರಣೆಗೆ ಒತ್ತಾಯಿಸಿ, ಕೃತಕ ಬುದ್ಧಮತ್ತೆಯಿಂದ ಹೆಚ್ಚುತ್ತಿರುವ ಉದ್ಯೋಗ ನಷ್ಟವನ್ನು ತಡೆಗಟ್ಟಲು, ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ಕಾಯ್ದೆಯಿಂದ ಐಟಿ/ಐಟಿಇಎಸ್ ವಲಯಕ್ಕೆ ವಿನಾಯಿತಿ ನೀಡಿರುವುದನ್ನು ವಿರೋಧಿಸಿ, ಬಿಬಿಎಂಪಿ, ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಶೀಘ್ರವೇ ನಡೆಸುವಂತೆ ಒತ್ತಾಯಿಸುವ ನಿರ್ಣಯಗಳು ಸೇರಿದಂತೆ 33 ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿದೆ. ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಸಾಮಾಜಿಕ ಭದ್ರತೆ ಹಾಗೂ ಕಟ್ಟಡ ನಿರ್ಮಾಣ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಪಂಚಾಯಿತಿ, ಹಮಾಲಿ, ಸಾರಿಗೆ ಇತ್ಯಾದಿ ಶ್ರಮಜೀವಿ ವರ್ಗಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಸಮ್ಮೇಳನ ನಿರ್ಣಯ ಕೈಗೊಂಡಿದೆ ಮತ್ತು ಈ ನಿಟ್ಟಿನಲ್ಲಿ ನಡೆಯುವ ಹೋರಾಟಗಳನ್ನು ಬೆಂಬಲಿಸಲು ತೀರ್ಮಾನಿಸಿದೆ.

ಆರ್ಥಿಕ ಮತ್ತು ಸಾಮಾಜಿಕ ನೀತಿಗಳಲ್ಲಿ ವ್ಯತ್ಯಾಸವಿಲ್ಲದಂತೆ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳು ಕಾರ್ಯ ನಿರ್ವಹಿಸುತ್ತಿರುವುದನ್ನು ಸಮ್ಮೇಳನವು ಗುರುತಿಸಿದೆ. ಜನರ ಸಂಕಷ್ಟಗಳನ್ನು ದುರುಪಯೋಗ ಪಡಿಸಿಕೊಂಡು ಕೋಮುವಾದವನ್ನು ಬೆಳೆಸಲಾಗುತ್ತಿದೆ. ಜನತೆಗೆ ನೀತಿಗಳ ಪರ್ಯಾಯ ಮತ್ತು ರಾಜಕೀಯ ಪರ್ಯಾಯ ಇಲ್ಲದಂತಾಗಿದೆ. ಈ ನಿಟ್ಟಿನಲ್ಲಿ ಜನತೆಗೆ ಅಗತ್ಯವಾದ ಒಂದು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಪರ್ಯಾಯ ರಾಜಕೀಯ ರಂಗವನ್ನು ರೂಪಿಸಲು ಸಿಪಿಐ(ಎಂ) ರಾಜ್ಯ ಸಮ್ಮೇಳನವು ತೀರ್ಮಾನಿಸಿದೆ. ರಾಜ್ಯದ ಎಡ ಪಕ್ಷಗಳು ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು, ಸಂಘಟನೆಗಳು, ಶಕ್ತಿಗಳು ಮತ್ತು ವ್ಯಕ್ತಿಗಳನ್ನು ಒಗ್ಗೂಡಿಸಿ ಈ ರಂಗವನ್ನು ಕಟ್ಟಲು ಉದ್ದೇಶಿಸಲಾಗಿದೆ.

ಹೋರಾಟಗಳು ಮತ್ತು ಆಂದೋಲನಗಳಲ್ಲಿ ಸಿಪಿಐ(ಎಂ) ಮತ್ತು ಇತರೆ ಕಮ್ಯುನಿಸ್ಟ್ ಪಕ್ಷಗಳು ಮುಂಚೂಣಿಯಲ್ಲಿದ್ದರೂ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಮತಗಳಿಕೆ ಪ್ರಮಾಣ ಕುಸಿಯುತ್ತಿರುವುದನ್ನು ಗಂಭೀರವಾಗಿ ಸಮ್ಮೇಳನವು ವಿಮರ್ಶಿಸಿದೆ. ಕೆಳಹಂತದ ಪಕ್ಷ ಸಂಘಟನೆಗೆ ಒತ್ತು ಮತ್ತು ಸಮೂಹಗಳ ರಾಜಕೀಯ ಪ್ರಜ್ಞೆಯನ್ನು ಎತ್ತರಿಸಬೇಕೆಂದು ಸಮ್ಮೇಳನವು ತೀರ್ಮಾನ ಮಾಡಿದೆ.

ಸಮ್ಮೇಳನ ಆಯ್ಕೆ ಮಾಡಿದ ನೂತನ ರಾಜ್ಯ ಸಮಿತಿ

ಮುಂದಿನ ಮೂರು ವರ್ಷಗಳ ಅವಧಿಗೆ 7 ಮಹಿಳೆಯರು ಸೇರಿ 35 ಜನರ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನವು ಸರ್ವಾನುಮತದಿಂದ ಆಯ್ಕೆ ಮಾಡಿತು. 6 ಖಾಯಂ ಆಹ್ವಾನಿತರು ಮತ್ತು 3 ವಿಶೇಷ ಆಹ್ವಾನಿತರು ಮತ್ತು 2025 ಏಪ್ರಿಲ್ ನಲ್ಲಿ ಮಧುರೈನಲ್ಲಿ ನಡೆಯುವ ಅಖಿಲ ಭಾರತ ಮಹಾಧಿವೇಶನಕ್ಕೆ ಪ್ರತಿನಿಧಿಗಳನ್ನು ಸಮ್ಮೇಳನವು ಆಯ್ಕೆ ಮಾಡಿತು.



ಕೆ. ಪ್ರಕಾಶ್-ನೂತನ ಕಾರ್ಯದರ್ಶಿ

ನೂತನ ರಾಜ್ಯ ಸಮಿತಿಯು ಡಾ.ಪ್ರಕಾಶ್ ಕೆ. ಅವರನ್ನು ನೂತನ ರಾಜ್ಯ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿತು. ಇವರೊಂದಿಗೆ ಯು.ಬಸವರಾಜ, ಜಿ.ಸಿ.ಬಯ್ಯಾರೆಡ್ಡಿ, ಮೀನಾಕ್ಷಿ ಸುಂದರಂ, ಎಸ್. ವರಲಕ್ಷ್ಮಿ, ಕೆ.ನೀಲಾ, ಗೋಪಾಲಕೃಷ್ಣ ಅರಳಹಳ್ಳಿ, ಯಾದವ ಶೆಟ್ಟಿ, ಸೈಯದ್ ಮುಜೀಬ್, ಎಂ.ಪಿ.ಮುನಿವೆಂಕಟಪ್ಪ, ಕೆ.ಮಹಾಂತೇಶ್ ಮತ್ತು ಚಂದ್ರಪ್ಪ ಹೊಸ್ಕೇರಾ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ರಾಜ್ಯ ಸಮಿತಿ ಸದಸ್ಯರು

ರಾಜ್ಯ ಸಮಿತಿ ಸದಸ್ಯರಾಗಿ ದೇವಿ, ವಿಮಲಾ ಕೆ.ಎಸ್. ಪುಟ್ಟಮಾದು, ಎಸ್.ವೈ. ಗುರುಶಾಂತ್, ಜಿ.ನಾಗರಾಜ, ಬಿ. ಮಾಳಮ್ಮ, ಯಶವಂತ್ ಟಿ., ಎಚ್.ಎಸ್. ಸುನಂದ, ಮುನೀರ್ ಕಾಟಿಪಳ್ಳ, ಸಿದ್ದಗಂಗಪ್ಪ, ನಿರುಪಾದಿ, ಸೂರ್ಯನಾರಾಯಣ ಪಿ, ಯಮುನಾ ಗಾಂವ್ಕರ್, ಸುರೇಶ್ ಕಲಾಗಾರ್, ಬಿ.ಎನ್. ಮಂಜುನಾಥ್, ಎನ್. ಪ್ರತಾಪಸಿಂಹ, ರಘುರಾಮರೆಡ್ಡಿ, ಕೆ.ಜಿ.ವಿರೇಶ್, ಸೂರಜ್ ನಿದಿಯಾಂಗ, ಕೃಷ್ಣೇಗೌಡ ಟಿ.ಎಲ್, ಸತ್ಯಬಾಬು, ಭೀಮರಾಯ ಪೂಜಾರಿ, ಎನ್. ಕೆ.ಸುಬ್ರಮಣ್ಯ ಆಯ್ಕೆಯಾಗಿದ್ದಾರೆ.

ರಾಜ್ಯ ಸಮಿತಿಯ ಖಾಯಂ ಆಹ್ವಾನಿತರಾಗಿ ಬಾಸ್ಸರ್ ರೆಡ್ಡಿ, ಸುನೀಲ್ ಕುಮಾರ್ ಬಜಾಲ್, ಡಾ. ಅನಿಲ್ ಕುಮಾರ್, ಗುರುರಾಜ ದೇಸಾಯಿ, ಮಾಲಿನಿ ಮೇಸ್ತಾ, ಮೀನಾಕ್ಷಿ ಬಾಳಿ ಆಯ್ಕೆಯಾಗಿದ್ದಾರೆ. ವಿಶೇಷ ಆಹ್ವಾನಿತರಾಗಿ ಹಿರಿಯ ನಾಯಕರಾದ ವಿ.ಜೆ.ಕೆ. ನಾಯರ್, ಜಿ.ಎನ್. ನಾಗರಾಜ್, ಬಾಲಕೃಷ್ಣ ಶೆಟ್ಟಿ ಆಯ್ಕೆಯಾಗಿದ್ದಾರೆ.

ಕಂಟ್ರೋಲ್ ಕಮೀಷನ್ ನ ಸಂಚಾಲಕರಾಗಿ ಎನ್.ಕೆ. ವಸಂತರಾಜ್, ಸದಸ್ಯರಾಗಿ ಗೌರಮ್ಮ ಮತ್ತು ಎಸ್.ಕೆ. ಗೀತಾ ಆಯ್ಕೆಯಾಗಿದ್ದಾರೆ.

ತತ್ವಬದ್ಧ, ಸಮರ್ಪಿತ ಕ್ರಾಂತಿಕಾರಿ ಹೋರಾಟಗಾರ ಕಾಂ.ಜಿ.ಸಿ. ಬಯ್ಯಾರೆಡ್ಡಿ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಶ್ರದ್ಧಾಂಜಲಿ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಜಿ.ಸಿ.ಬಯ್ಯಾರೆಡ್ಡಿಯವರ ನಿಧನಕ್ಕೆ ಸಿಪಿಐ(ಎಂ)ರಾಜ್ಯ ಸಮಿತಿಯು ತೀವ್ರ ಶೋಕವನ್ನು ವ್ಯಕ್ತಪಡಿಸಿದೆ.

ಕಳೆದ ಒಂದು ವಾರದಿಂದ ಶ್ವಾಸಕೋಶದ ಸೋಂಕಿನಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಇಂದು 2025 ಜನವರಿ 4 ರಂದು ಜಯನಗರದ ಅಪೋಲೋ ಆಸ್ಪತ್ರೆಯಲ್ಲಿ ಬೆಳಗಿನ ಜಾವ 2.30 ರ ಸುಮಾರಿಗೆ ಬಹು ಅಂಗಾಗಗಳ ವೈಫಲ್ಯದಿಂದ ನಿಧನರಾದರು. 64 ವಯಸ್ಸಿನ ಅವರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು, ಮಿತ್ರರನ್ನು ಹೋರಾಟದ ಒಡನಾಡಿಗಳನ್ನು ಅಗಲಿದ್ದಾರೆ.

ಅವಿಭಜಿತ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಗಡಿಗವಾರಪಲ್ಲಿ ಗ್ರಾಮದಲ್ಲಿ ಜನಿಸಿದ ಬಯ್ಯಾರೆಡ್ಡಿ ಅವರ ತಂದೆ ದಕ್ಷಿಣ ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಚೌಡಪ್ಪ ಮತ್ತು ತಾಯಿ ಬಯ್ಯಮ್ಮ ಅವರ ನಾಲ್ಕನೆಯ ಪುತ್ರರು. ಎಸ್.ಎಫ್.ಐ.ನಲ್ಲಿ ಸಕ್ರಿಯರಾಗಿ 1980ರ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.)ಗೆ ಸೇರಿದ ಅವರು ವಿದ್ಯಾರ್ಥಿ ಚಳುವಳಿಯ ಮೂಲಕ ಹಂತ ಹಂತವಾಗಿ ಬೆಳೆದವರು. ನರಗುಂದ-ನವಲಗುಂದ ಪ್ರದೇಶದಲ್ಲಿ ಆರಂಭಗೊಂಡ ರೈತರ ಬಂಡಾಯ ಸಂದರ್ಭದಲ್ಲಿ ಹೋರಾಟ ನಿರಂತರ ರೈತರಿಗೆ ಬೆಂಬಲ ನೀಡಿ ವಿದ್ಯಾರ್ಥಿಗಳ ಸಮರಶೀಲ ಹೋರಾಟವನ್ನು ಸಂಘಟಿಸಿದರು. ಆ ಸಂದರ್ಭದಲ್ಲಿ ನಡೆದ ಪೋಲೀಸ್ ಗೋಲೀಬಾರ್‌ನಲ್ಲಿ ಹಲವಾರು ಹುತಾತ್ಮರಾಗಿದ್ದರು.

1988 ರಲ್ಲಿ ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷರಾಗಿ 1994ರ ವರೆಗೆ ಪರಿಣಾಮಕಾರಿಯಾಗಿ ವಿದ್ಯಾರ್ಥಿ ಚಳುವಳಿಗೆ ನಾಯಕತ್ವ ನೀಡಿ ಶ್ರಮಿಸಿದರು. ಆ ಸಂದರ್ಭದಲ್ಲಿ ಬೆಲೆಏರಿಕೆ, ಶೈಕ್ಷಣಿಕ ಶುಲ್ಕ ಏರಿಕೆ, ಡೋನೇಶನ್ ವಸೂಲಾತಿಯ ವಿರುದ್ಧದ ಚಳುವಳಿ, ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯಗಳಿಗಾಗಿ, ಸಂಜೆ ಕಾಲೇಜ್ ವಿದ್ಯಾರ್ಥಿಗಳ ಬಸ್ ಪಾಸ್ ಸೌಲಭ್ಯಕ್ಕಾಗಿ, ಶುಲ್ಕಗಳ ಇಳಿಕೆಗಾಗಿ, ಬರಗಾಲದ ಸಮಸ್ಯೆಗಳ ಪರಿಹಾರಕ್ಕಾಗಿ, ಐ.ಟಿ.ಐ. ಮತ್ತು ರೇಷ್ಮೆ ಪದವಿ ವಿದ್ಯಾರ್ಥಿಗಳ ಉದ್ಯೋಗದ ಹಕ್ಕಿಗಾಗಿ ಹೀಗೆ ಹಲವಾರು ಪ್ರಮುಖವಾದ ವಿದ್ಯಾರ್ಥಿಗಳ ಚಳುವಳಿಯನ್ನು ರಾಜ್ಯದಾದ್ಯಂತ ಕಟ್ಟಿದರು.

ಬಳಿಕ ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ರೈತ ಸಂಘದ ಮುಖಂಡರಾಗಿ ಶಾಶ್ವತ ನೀರಾವರಿಗಾಗಿ ನಡೆದಪಾದಯಾತ್ರೆಮತ್ತುನಂತರದಹೋರಾಟದಲ್ಲಿ ಪ್ರಮುಖ ನಾಯಕರಾಗಿ ಶ್ರಮಿಸಿದರು. ಅಲ್ಲದೆ 2000 ನೇ ಇಸ್ವಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, 2017 ರಲ್ಲಿ ಅಧ್ಯಕ್ಷರಾಗಿ ಕಳೆದ ಎರಡೂವರೆ ದಶಕಗಳಲ್ಲಿ ಶ್ರಮಿಸುತ್ತಾ ಬಂದಿದ್ದಾರೆ. ನೀರಾವರಿ ಪ್ರಶ್ನೆ, ರೈತರ ಫಸಲಿಗೆ ಬೆಂಬಲಿತ ಬೆಲೆ, ಬೆಳೆ ಹಾನಿಯಿಂದ ಸಂಕಷ್ಟಕ್ಕೀಡಾದ ರೈತರ ಪ್ರಶ್ನೆಗಳು, ತೊಗರಿ, ಮೆಣಸಿನಕಾಯಿ, ತೆಂಗು, ಅಡಿಕೆ, ರೇಷ್ಮೆ ಮುಂತಾದ ಬೆಳೆಗಳ ಒಟ್ಟು ಸಮಸ್ಯೆಗಳು, ಸಾವಿರ ದಿನಗಳು ದಾಟಿದ ದೇವನಹಳ್ಳಿ ಚನ್ನರಾಯಪಟ್ಟಣದ ರೈತರ ಚಳುವಳಿ, ಕುಡಿತಿನಿ ಹಾಗೂ ಬೆಂಗಳೂರಿನ ಅತ್ತಿಬೆಲೆ ಪ್ರದೇಶದ ಭೂಸ್ವಾಧೀನತೆಗಳೂ ಒಳಗೊಂಡಂತೆ ಕೈಗಾರಿಕೆಗಳ ಮತ್ತು ನಗರದ ಅಭಿವೃದ್ಧಿಗೆಂದು ರಾಜ್ಯದ ವಿವಿಧ ಭಾಗಗಳಲ್ಲಿ



ಆದ ಭೂ ಸ್ವಾಧೀನತೆಯ ಅನ್ಯಾಯ, ವಂಚನೆಗಳ ವಿರುದ್ಧ, ಕುಕ್ಕುಟ ಉದ್ಯಮದಲ್ಲಿದ್ದ ರೈತರಿಗಾಗಿ, ನೈಸ್ ಕಂಪನಿಯ ಮೂಲಕ ಆದ ಅನ್ಯಾಯಗಳ ವಿರುದ್ಧ, ಹಾಲು ಉತ್ಪಾದಕರ ಸಮಸ್ಯೆಗಳ ಪರಿಹಾರಕ್ಕಾಗಿ ಹೀಗೆ ಪ್ರಬಲವಾದ ಚಳುವಳಿಯನ್ನು ಸಂಘಟಿಸುವುದರಲ್ಲಿ ನಾಯಕತ್ವವನ್ನು ನೀಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ವಿವಿಧ ರೈತ ಸಂಘಟನೆಗಳ ಮತ್ತು ಕಾರ್ಮಿಕ ಹಾಗೂ ಇತರೆ ಜನ ವಿಭಾಗಗಳನ್ನು ಒಳಗೊಂಡ ವಿಶಾಲ ಐಕ್ಯ ಚಳುವಳಿಯನ್ನು ಕಟ್ಟುವಲ್ಲಿ ಸಂಯುಕ್ತ ಹೋರಾಟ ಕರ್ನಾಟಕದ ಪ್ರಮುಖ ಸಂಚಾಲಕರಾಗಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದಾರೆ. ಅವರು 1994 ರಲ್ಲಿ ಚಿಂತಾಮಣಿ ವಿಧಾನಸಭಾ ಕ್ಷೇತ್ರದಿಂದ ಮತ್ತು 1997ರಲ್ಲಿ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

1991 ರಲ್ಲಿ ಮಂಗಳೂರಿನಲ್ಲಿ ನಡೆದ ಸಿಪಿಐ(ಎಂ)ನ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ನಂತರದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಶ್ರಮಿಸುತ್ತಾ ಬಂದಿದ್ದಾರೆ. ಸಮರ್ಪಣೆ, ಪ್ರಾಮಾಣಿಕತೆ, ಸೈದ್ಧಾಂತಿಕ ಬದ್ಧತೆ, ಸಮರಶೀಲ ಹೋರಾಟದ ಮನೋಭಾವದ ಸಂಗಾತಿ ಜಿ.ಸಿ. ಬಯ್ಯಾರೆಡ್ಡಿ ಅವರು ರಾಜ್ಯದಲ್ಲಿ ರೈತ, ಕಾರ್ಮಿಕರ ಮತ್ತು ದಲಿತ, ಆದಿವಾಸಿ ಸಮುದಾಯಗಳ, ಮಹಿಳೆ, ಶೋಷಿತ ಎಲ್ಲ ಜನ ವಿಭಾಗಗಳ ಐಕ್ಯ ಚಳುವಳಿಯನ್ನು ಕಟ್ಟುವಲ್ಲಿ ಅದನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಸಮಾಜದಲ್ಲಿ ಶಾಂತಿ, ನಾಡಿನ ಸೌಹಾರ್ದ ಪರಂಪರೆಯ ರಕ್ಷಣೆಗಾಗಿ, ಒಟ್ಟಾರೆ, ದುಡಿಯುವ ಜನರ ಚಳುವಳಿ ಕಟ್ಟುವಲ್ಲಿ, ರಾಜ್ಯದಲ್ಲಿ ದುಡಿಯುವ ವರ್ಗದ ಪರ್ಯಾಯ ರಾಜಕೀಯವನ್ನು ಕಟ್ಟುವಲ್ಲಿ ಅವರ ಪಾತ್ರ ಮಹತ್ವದ್ದು ಎಂದು ಅವರ ಕೊಡುಗೆಗಳನ್ನು ಸಿಪಿಐ(ಎಂ) ಸ್ಮರಿಸುತ್ತದೆ. ಅವರ ಅಕಾಲಿಕ ಅಗಲಿಕೆ ನಾಡಿನ ಶ್ರಮಜೀವಿಗಳ ಮತ್ತು ಪ್ರಜಾಸತ್ತಾತ್ಮಕ ಪ್ರಗತಿಪರ ಜನ ಚಳುವಳಿಗೆ ಅಪಾರವಾದ ನಷ್ಟವನ್ನು ಉಂಟು ಮಾಡಿದೆ ಎಂದು ಅಭಿಪ್ರಾಯಸುತ್ತದೆ ಮತ್ತು ಸಮಾನತೆಯ ಸಮ ಸಮಾಜವನ್ನು ಕಟ್ಟುವ ಅನ್ಯಾಯ ಅಸಮಾನತೆಗಳ ಎದುರಿನಲ್ಲಿ ಹೋರಾಡುವ ಅವರ ಆಶಯಗಳನ್ನು ಸಾಧಿಸುವುದು ಅವರ ಕೊಡುಗೆಗಳನ್ನು ಸ್ಮರಿಸುತ್ತಾ ಭಾವನಾತ್ಮಕ ಶ್ರದ್ಧಾಂಜಲಿಯನ್ನು ಸಿಪಿಐ(ಎಂ) ಸಲ್ಲಿಸುತ್ತದೆ. ದುಃಖ ತಪ್ತರಾದ ಅವರ ಕುಟುಂಬಕ್ಕೆ ಬಂಧು ಬಳಗಕ್ಕೆ ಹಾಗೂ ಎಲ್ಲ ಸಂಗಾತಿಗಳಿಗೂ ತೀವ್ರ ಸಂತಾಪವನ್ನು ಸೂಚಿಸುತ್ತದೆ.

ಡಾ.ಕೆ.ಪ್ರಕಾಶ್, ರಾಜ್ಯ ಕಾರ್ಯದರ್ಶಿ

ಕಾಂ.ಜಿ.ಸಿ. ಬಯ್ಯಾರೆಡ್ಡಿ ನಿಧನ-ರೈತ ಚಳುವಳಿಗೆ ತುಂಬಲಾರದ ನಷ್ಟ-ಕೆ.ಪಿ.ಆರ್.ಎಸ್. ಶ್ರದ್ಧಾಂಜಲಿ

ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ರಾಜ್ಯ ಸಮಿತಿ ಅಧ್ಯಕ್ಷರಾದ ಕಾಂ. ಜಿ.ಸಿ. ಬಯ್ಯಾರೆಡ್ಡಿ ರವರ ನಿಧನದಿಂದ ರಾಜ್ಯದ ರೈತ ಚಳುವಳಿಗೆ ಹಾಗೂ ಐಕ್ಯ ಹೋರಾಟಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್.) ಕರ್ನಾಟಕ ರಾಜ್ಯ ಸಮಿತಿ ಕಂಬನಿ ಮಿಡಿದಿದೆ.

ದಿನಾಂಕ 10-10-1960 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಗಡಿಗವಾರಪಲ್ಲಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಜಿ.ಎಸ್. ಚೌಡಪ್ಪ ಹಾಗೂ ಬಯ್ಯಮ್ಮರವರ ನಾಲ್ಕನೆಯ ಮಗನಾಗಿ ಜನಿಸಿದ ಕಾಂ. ಜಿ.ಸಿ. ಬಯ್ಯಾರೆಡ್ಡಿರವರು ಬಾಲ್ಯದಿಂದಲೇ ಹೋರಾಟದ ಮನೋಭಾವ ಇದ್ದವರು.

1980 ರಲ್ಲಿ ಚಿಂತಾಮಣಿ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಯಾಗಿರುವಾಗಲೇ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಸಂಘಟನೆಯ ಸೆಳೆತಕ್ಕೆ ಒಳಗಾಗಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಕಾಂ.ಜಿ.ಸಿ. ಬಯ್ಯಾರೆಡ್ಡಿರವರು ಸಮರಶೀಲ ವಿದ್ಯಾರ್ಥಿ ನಾಯಕರಾಗಿ ಬೆಳೆದು ಬಂದರು. ಸುಪ್ರಸಿದ್ಧ ನವಲಗುಂದ-ನರಗುಂದ ರೈತ ಹೋರಾಟದ ಗೋಲಿಬಾರ್ ಖಂಡಿಸಿ ಚಿಂತಾಮಣಿಯಲ್ಲಿ ಬಹು ದೊಡ್ಡ ವಿದ್ಯಾರ್ಥಿ ಪ್ರತಿಭಟನೆ ಸಂಘಟಿಸಿದ್ದರು. ಈ ಪ್ರತಿಭಟನೆಯ ಮೇಲೂ ಗೋಲಿಬಾರ್ ಆಗಿತ್ತು. ಉತ್ತಮ ನಾಯಕತ್ವ ಗುಣ ಹಾಗೂ ಸಮರಶೀಲ ಹೋರಾಟದಲ್ಲಿ ಮುಂಚೂಣಿಯಲ್ಲಿರುತ್ತಿದ್ದ ಕಾಂ.ಜಿ.ಸಿ. ಬಯ್ಯಾರೆಡ್ಡಿ ರವರು ಅವಿಭಜಿತ ಕೋಲಾರ ಜಿಲ್ಲೆಯ ಎಸ್. ಎಫ್.ಐ. ಜಿಲ್ಲಾ ನಾಯಕರಾಗಿ ನಂತರ 1988 ರಲ್ಲಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ವಿದ್ಯಾರ್ಥಿ ಚಳವಳಿಯಿಂದ ಬಿಡುಗಡೆಗೊಂಡ ನಂತರ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ರೈತ ಚಳವಳಿ ಕಟ್ಟಲು ಸಂಪೂರ್ಣವಾಗಿ ತೊಡಗಿಸಿಕೊಂಡ ಕಾಂ.ಜಿ.ಸಿ. ಬಯ್ಯಾರೆಡ್ಡಿರವರು 2000ನೇ ಇಸವಿಯಲ್ಲಿ ಗುಲ್ಬರ್ಗದಲ್ಲಿ ನಡೆದ ಹನ್ನೆರಡನೇ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಆಗಿ ಆಯ್ಕೆಗೊಂಡು 2013 ರ ತನಕ ಈ ಜವಾಬ್ದಾರಿ ನಿರ್ವಹಿಸಿ ಇಡೀ ರಾಜ್ಯದಾದ್ಯಂತ ಸಾವಿರಾರು ಹೋರಾಟಗಳಲ್ಲಿ ಭಾಗವಹಿಸಿ ನೂರಾರು ಹೋರಾಟಗಳನ್ನು ರೂಪಿಸುವ ಮೂಲಕ ರಾಜ್ಯದ ಜನಪ್ರಿಯ ರೈತ ನಾಯಕರಾಗಿ ಗುರುತಿಸಿಕೊಂಡಿದ್ದರು. ನಂತರ 2017 ರಲ್ಲಿ ಹುಬ್ಬಳ್ಳಿ ಯಲ್ಲಿ ನಡೆದ ಪ್ರಾಂತ ರೈತ ಸಂಘದ 16 ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯಾಧ್ಯಕ್ಷರಾಗಿ ಆಯ್ಕೆಗೊಂಡು, ಅವರು ತಮ್ಮ ಕೊನೆ ಉಸಿರು ಎಳೆಯುವವರೆಗೂ ರೈತ ಹೋರಾಟದಲ್ಲಿ ಅಸೀಮ ಬದ್ಧತೆ ಹಾಗೂ ಸೈದ್ಧಾಂತಿಕ ನಿಷ್ಠೆಯಲ್ಲಿ ಯಾವುದೇ ಕುಂದುಂಟಾಗದಂತೆ ಜತನದಿಂದ ಕಾಪಾಡಿಕೊಂಡಿದ್ದ ಒಬ್ಬ ಮಹಾನ್ ಮಾರ್ಕ್ಸ್‌ವಾದಿ ಹೋರಾಟಗಾರರಾಗಿದ್ದರು.

ಬಗರ್ ಹುಕುಂ ಸಾಗುವಳಿ ರೈತರ ಹೋರಾಟ, ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರೀಕರಣ ವಿರುದ್ಧ ನಡೆದ ಹೋರಾಟ, ರೇಷ್ಮೆ, ಹಾಲು, ಕಬ್ಬು, ತೆಂಗು, ತೊಗರಿ, ಹತ್ತಿ ಮುಂತಾದ ಬೆಳೆಗಾರರ ಹೋರಾಟ, ಕೋಳಿ ಸಾಕಾಣಿಕೆ ದಾರರ ರೈತರ ಪರವಾದ ಹೋರಾಟ, ಅರಣ್ಯ ಸಾಗುವಳಿ ರೈತರ ಪರವಾದ ಹೋರಾಟ, ರಾಜ್ಯದ ವಿವಿಧ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ನಡೆದ ಹೋರಾಟ, ಎಂ.ಎಸ್.ಪಿ. ಕಾನೂನು, ಸಾಲಬಾಧೆಯಿಂದ ನರಳುವ ರೈತ ಸಮುದಾಯಕ್ಕೆ ಋಣಮುಕ್ತಿ ಕಾನೂನು ಜಾರಿಗಾಗಿ ನಡೆದ ಹೋರಾಟ ಹೀಗೆ ತಮ್ಮ ಸುದೀರ್ಘ ನಲವತ್ತು ವರ್ಷಗಳ ರೈತ ಚಳವಳಿಯಲ್ಲಿ ನೂರಾರು ಹೋರಾಟಗಳನ್ನು ಮುನ್ನಡೆಸಿದ್ದರು.

ಕರಾಳ ಕೃಷಿ ಕಾಯ್ದೆಗಳ ವಿರುದ್ಧ ಐತಿಹಾಸಿಕ ದೆಹಲಿ ರೈತ ಚಳವಳಿ ಪ್ರಾರಂಭವಾದ ಸಂದರ್ಭದಲ್ಲಿ ಕರ್ನಾಟಕದಿಂದಲೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಪಾರ ಮುತುವರ್ಜಿವಹಿಸಿದ್ದ ಕಾಂ.ಜಿ.ಸಿ. ಬಯ್ಯಾರೆಡ್ಡಿರವರು ಕರ್ನಾಟಕದಲ್ಲೂ ಐಕ್ಯ ಹೋರಾಟಗಳನ್ನು ರೂಪಿಸಿ ಸಂಯುಕ್ತ ಹೋರಾಟ ಕರ್ನಾಟಕ ವೇದಿಕೆ ರೂಪಿಸಿ ರಾಜ್ಯದ ಬಹುತೇಕ ರೈತ ಸಂಘಗಳನ್ನು ಒಂದೇ ವೇದಿಕೆಯಡಿಯಲ್ಲಿ ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು ಮತ್ತು ಅದರ ಸಂಯೋಜಕರಾಗಿ ಎಲ್ಲಾ ರೈತ ಸಂಘಟನೆಗಳ ಪ್ರೀತಿ ಪಾತ್ರ ನಾಯಕರಾಗಿ ವಿಶ್ವಾಸ ಗಳಿಸಿದ್ದರು. ಕೆಂಪೇಗೌಡ ಬಡಾವಣೆ ಸಂದರ್ಭದ ಭೂ ಸ್ವಾಧೀನದಿಂದ ಹಿಡಿದು ಇತ್ತೀಚಿನ ದೇವನಹಳ್ಳಿ ಚನ್ನರಾಯಪಟ್ಟಣ ಭೂ ಸ್ವಾಧೀನದವರೆಗಿನ ಬೆಂಗಳೂರಿನ ಹಾಗೂ ರಾಜ್ಯದ ಭೂ ಸ್ವಾಧೀನದ ನೂರಾರು ಹೋರಾಟಗಳಲ್ಲಿ ರೈತರು ನ್ಯಾಯ ಪಡೆಯುವಂತೆ ಸದಾ ಅವರ ನೆಚ್ಚಿನ ನಾಯಕರಾಗಿದ್ದರು.

ಸುಮಾರು ನಲವತ್ತು ವರ್ಷಗಳ ಕಾಲದ ರೈತ ಚಳವಳಿ ಮುನ್ನಡೆಸಿದ್ದ ಅಪಾರ ಅನುಭವಿ ರೈತ ನಾಯಕನ ಸಾವಿನಿಂದ ರಾಜ್ಯದ ಐಕ್ಯ ರೈತ ಚಳವಳಿಗೆ ಹಾಗೂ ಎಡಪಂಥೀಯ ರೈತ ಹೋರಾಟಕ್ಕೆ ಬಹಳ ದೊಡ್ಡ ಹಿನ್ನಡೆ ಉಂಟಾಗಿದ್ದು ಸಾಮೂಹಿಕ ಪ್ರಯತ್ನದಿಂದ ಅವರ ಹೋರಾಟವನ್ನು ಮುಂದುವರೆಸುವುದು ಕಾಂ.ಜಿ.ಸಿ. ಬಯ್ಯಾರೆಡ್ಡಿ ರವರಿಗೆ ಸಲ್ಲಿಸುವ ಸರಿಯಾದ ಶ್ರದ್ಧಾಂಜಲಿ ಎಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯ ಪಡುತ್ತದೆ.

ಯು. ಬಸವರಾಜ, ರಾಜ್ಯ ಉಪಾಧ್ಯಕ್ಷರು,
ಟಿ. ಯಶವಂತ, ರಾಜ್ಯ ಪ್ರಧಾನ ಕಾರ್ಯದರ್ಶಿ

2024 ರಲ್ಲಿ ನಮ್ಮ ದೇಶ-ವಿದೇಶಗಳಲ್ಲಿ ಆದ ಬೆಳವಣಿಗೆಗಳೇನು? 2025ರ ನಿರೀಕ್ಷೆಗಳೇನು? ಎಂದು ವಿವರಿಸಿದ್ದಾರೆ ಲೇಖಕರು.

ಹೋರಾಟ ಮತ್ತು ಪ್ರತಿರೋಧದ ವರ್ಷವಾಗಲಿದೆ 2025



ಪ್ರಕಾಶ್ ಕಾರತ್

ಈಗಷ್ಟೇ ಮುಗಿದ 2024ನೇ ವರ್ಷ, ರಾಷ್ಟ್ರೀಯವಾಗಿಯೂ ಅಂತಾರಾಷ್ಟ್ರೀಯವಾಗಿಯೂ ತುಂಬಾ ಪ್ರಕ್ಷೋಭೆಯಿಂದ ಕೂಡಿದ ವರ್ಷವಾಗಿತ್ತು. ಹೊಸದಾಗಿ ನಿರ್ಮಿಸಲಾದ; ಆದರೆ ಅಪೂರ್ಣವಾದ ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರಭುತ್ವ ಪ್ರಾಯೋಜಿತವಾದ ಮೂರ್ತಿ ಪ್ರತಿಷ್ಠಾಪನೆಯೊಂದಿಗೆ ಭಾರತದಲ್ಲಿ ವರ್ಷ ಆರಂಭವಾಗಿತ್ತು. ಹಿಂದೂತ್ವ ರಾಜ್‌ನ ಯುಗ ಆರಂಭವಾಗಿದೆಯೆಂದು ಬಿಜೆಪಿ ಆಡಳಿತಗಾರರು ನೀಡಿದ ಸೂಚನೆ ಅದಾಗಿತ್ತು. ಅದಾದ ಮೇಲೆ, ಇಬ್ಬರು ಮುಖ್ಯಮಂತ್ರಿಗಳ ಬಂಧನ ಸಹಿತ ಪ್ರತಿಪಕ್ಷಗಳ ಮುಖಂಡರ ಮೇಲೆ ಕೇಂದ್ರೀಯ ಸಂಸ್ಥೆಗಳ ಮೂಲಕ ನಾನಾ ದಾಳಿಗಳನ್ನು ನಡೆಸಲಾಯಿತು.

ಮಹತ್ವದ 18ನೇ ಲೋಕಸಭೆ ಚುನಾವಣೆಗೆ ರಂಗ ಸಜ್ಜುಗೊಂಡಿತು. ಒಂದೆಡೆ, ಬಿಜೆಪಿ-ಆರೆಸ್ಸೆಸ್ ಮತ್ತವರ ಬೆಂಬಲಿಗರು ಮತ್ತು ಇನ್ನೊಂದೆಡೆ ಇಂಡಿಯಾ ಕೂಟದ ಪಕ್ಷಗಳ ನಡುವೆ ಸಂಘರ್ಷ ಸ್ಪಷ್ಟವಾಗಿತ್ತು. ಅದರ ಪರಿಣಾಮವಾಗಿ ಬಿಜೆಪಿಗೆ ಹಿನ್ನಡೆಯಾಗಿದೆ. 400ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವುದಾಗಿ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ 240 ಸೀಟುಗಳನ್ನಷ್ಟೇ ಗಳಿಸಿ ಬಹುಮತದ ಅಗತ್ಯಕ್ಕಿಂತ ಕೆಳಗೆ ಇಳಿಯಿತು.

ನರೇಂದ್ರ ಮೋದಿಯ ಮೂರನೇ ಅವಧಿ ಆರಂಭವಾಗುವುದರೊಂದಿಗೆ ದೇಶದ ರಾಜಕೀಯ ಸನ್ನಿವೇಶವನ್ನು ಕೆಳಗಿನಂತೆ ವಿಶ್ಲೇಷಿಸಬಹುದು: ಹಿಂದೂತ್ವ-ಕಾರ್ಪೊರೇಟ್ ಅಜೆಂಡಾವನ್ನು ಮುಂದೊತ್ತಲು ಮೋದಿ ಸರಕಾರ ಸಂಕಲ್ಪಿಸಿದೆ; ನವ ಉದಾರವಾದಿ ನೀತಿಗಳನ್ನು ಮುಂದುವರಿಸುವುದರಿಂದ ಬೆಲೆಯೇರಿಕೆಯೇ ಆಗಲಿ ನಿರುದ್ಯೋಗವೇ ಆಗಲಿ, ಜನರ ಮೇಲಿನ ಹೊರೆಯನ್ನು ಹೆಚ್ಚಿಸಲಿದೆ ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ಬಡವರ ಸಂಕಟ ಮುಂದುವರಿಯುವಂತೆ ಮಾಡಲಿದೆ. ಪ್ರತಿಪಕ್ಷಗಳ ಬಲ ಹೆಚ್ಚಿರುವುದರಿಂದ ಹಿಂದೂತ್ವ-ಸರ್ವಾಧಿಕಾರಿ ಶಕ್ತಿಗಳಿಗೆ ಪ್ರತಿರೋಧವನ್ನು ಹೆಚ್ಚಿಸಲು ಅವಕಾಶ ಹೆಚ್ಚಿದೆ.

ಅಪಾಯ ಕಡಿಮೆಯೆಂದಲ್ಲ

ಸಂಸತ್ತಿನಲ್ಲಿ ಬಿಜೆಪಿ ದುರ್ಬಲವಾಗಿದೆಯೆಂದರೆ ಅದು ಸರಕಾರದ ಅಧಿಕಾರವನ್ನು ಅಪಾಯಕಾರಿಯಾಗಿ ಚಲಾಯಿಸುವುದು ಕಡಿಮೆಯಾಗಿದೆ ಎಂದು ಅರ್ಥವಲ್ಲ. ಪ್ರಭುತ್ವದ ಸಂಸ್ಥೆಗಳನ್ನು ಕಬ್ಜಾ ಮಾಡುವುದು ಹಾಗೂ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಹಿತ ಎಲ್ಲ ರಂಗಗಳಲ್ಲಿ ಹಿಂದೂತ್ವ ಸಿದ್ಧಾಂತವನ್ನು ಕೆತ್ತುವ ಪ್ರಯತ್ನ ಮುಂದುವರಿಯಲಿದೆ. ಜನರು ಮತ್ತು ಸಮಾಜದಲ್ಲಿ, ಕಾಯಂ ಕೋಮು ವಿಭಜನೆಯನ್ನು ಸೃಷ್ಟಿಸಲು ವಂಚನೆಯ ಮುಸ್ಲಿಂ-ವಿರೋಧಿ ಪ್ರಚಾರವನ್ನು ಎಗ್ಗಿಲ್ಲದೆ ಮುಂದುವರಿಸಲಾಗಿದೆ. ಸಂಭಾಲ್ ಮತ್ತು ಅಜ್ಮೇರ್ ಷರೀಫ್‌ನಲ್ಲಿ ಮಸೀದಿಗಳ ಸಮೀಕ್ಷೆ ನಡೆಸಿ ಅವುಗಳ ಕೆಳಗಡೆ ದೇವಾಲಯಗಳನ್ನು ಗುರುತಿಸುವ ಬೇಡಿಕೆಯು ಈ ಹುನ್ನಾರದ ಭಾಗವಾಗಿದೆ. ಈ ಬೆದರಿಕೆಯನ್ನು ಹೆಚ್ಚು ದೃಢವಾಗಿ ಮತ್ತು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳ ಸೈದ್ಧಾಂತಿಕ ಹೋರಾಟದಿಂದ ಎದುರಿಸಬೇಕು.

2024ರಲ್ಲಿ ಕೋಮುವಾದ-ಕಾರ್ಪೊರೇಟ್ ಅಪವಿತ್ರಮೈತ್ರಿ ಇನ್ನಷ್ಟು ಮುಂದುವರಿಯಿತು. ಮೋದಿ ಸರಕಾರದ ಮುದ್ದಿನ ದೊಡ್ಡ ಬಂಡವಾಳಶಾಹಿಗಳು ಸಂಪತ್ತು ಹೆಚ್ಚಿಸಿಕೊಂಡರು ಹಾಗೂ ಭಾರಿ ಪ್ರಮಾಣದ ಲಾಭವನ್ನು ದೋಚಿಕೊಂಡರು. ಈ ದೊಡ್ಡ ಕಾರ್ಪೊರೇಟ್‌ಗಳಾದ ಅಂಬಾನಿ, ಅದಾನಿ, ಟಾಟಾ, ಬಿರ್ಲಾ ಮತ್ತು ಭಾರತಿ ಮಿತ್ತಲ್, ಹಣಕಾಸೇತರ ಕಾರ್ಪೊರೇಟ್ ವಲಯದ ಒಟ್ಟು ಸಂಪತ್ತಿನಲ್ಲಿ ಶೇಕಡ 20ನ್ನು ಹೊಂದಿವೆ. ಮೋದಿ ಸರಕಾರದ ಮೂರನೇ ಅವಧಿಯು ಖಾಸಗೀಕರಣವನ್ನು ಇನ್ನಷ್ಟು ವೇಗ, ಹೊಸ ಹುರುಪಿನಿಂದ ನಡೆಸುತ್ತಿರುವುದನ್ನು ಕಾಣುತ್ತಿದ್ದೇವೆ. ವಿದ್ಯುತ್ ವಿತರಣೆ ಕ್ಷೇತ್ರದಲ್ಲಿ ಡಿಸ್ಕಾಂಗಳನ್ನು ಖಾಸಗೀಕರಿಸಲಾಗುತ್ತಿದೆ. ಇದು ಚಂಡೀಗಢದಲ್ಲಿ ಅದಂತೆ ದೊಡ್ಡ ಹೋರಾಟಗಳಿಗೆ ಕಾರಣವಾಗುತ್ತಿದೆ. ಕೇಂದ್ರಾಡಳಿತ ಪ್ರದೇಶದ ಲಾಭದಾಯಕ ಡಿಸ್ಕಾಂ ಅನ್ನು ಖಾಸಗಿಗೆ ಕೊಡಲು ಸರಕಾರ ಹೊರಟಿರುವುದು ಆಕ್ರೋಶಕ್ಕೆ ಕಾರಣವಾಗಿದೆ. ಫೆರೋ ಸ್ಕ್ರ್ಯಾಪ್‌ನಂಥ ಇತರ ಲಾಭದಾಯಕ ಪಿಎಸ್‌ಯುಗಳು ಕೂಡ ಇಂಥದ್ದೇ ಕವಲು ಹಾದಿಯಲ್ಲಿವೆ.

ಈ ನೀತಿಗಳು ಮತ್ತು ಜನರ ಮೇಲೆ ಅವುಗಳ ಪರಿಣಾಮಗಳಿಗೆ ಪ್ರತಿರೋಧ ವ್ಯಕ್ತವಾಗಿಲ್ಲವೆಂದಲ್ಲ. ಸಂದು ಹೋದ ವರ್ಷ, ದುಡಿಯುವ ಜನರ ನಾನಾ ವಿಭಾಗಗಳ ಅನೇಕ ಹೋರಾಟಗಳಿಗೆ ಸಾಕ್ಷಿಯಾಗಿದೆ. ಅಂಗನವಾಡಿ, ಆಶಾ ಮತ್ತು ಬಿಸಿಯೂಟದ ಸ್ಕೀಮ್ ಕಾರ್ಮಿಕರ ಮುಷ್ಕರಗಳು ಮತ್ತು ಹೋರಾಟಗಳು ಅತಿ ಹೆಚ್ಚು ವ್ಯಾಪಕವಾಗಿದ್ದವು. ವಿಶಾಖಪಟ್ಟಣಂ ಉಕ್ಕು ಸ್ಥಾವರ ಖಾಸಗೀಕರಿಸುವುದರ ವಿರುದ್ಧದ ದೀರ್ಘ ಹೋರಾಟ ಇನ್ನೂ ಮುಂದುವರಿದಿದೆ. ವಿದ್ಯುಚ್ಛಕ್ತಿ ಕಾರ್ಮಿಕರು, ಕಲ್ಲಿದ್ದಲು ಕಾರ್ಮಿಕರು, ಅಂಚೆ, ಬ್ಯಾಂಕ್ ಮತ್ತು ವಿಮಾ ನೌಕರರ ವಲಯವಾರು ಮುಷ್ಕರಗಳು ನಡೆದಿವೆ. ತಮಿಳುನಾಡಿನ ಕಾಂಚೀಪುರಂನಲ್ಲಿರುವ ಸ್ಯಾಮ್‌ಸಂಗ್ ಸ್ಥಾವರದ ಕಾರ್ಮಿಕರು ನಡೆಸಿದ 37 ದಿನದ ಮುಷ್ಕರ ತುಂಬಾ ಗಮನಾರ್ಹ ಕಾರ್ಮಿಕ ಮುಷ್ಕರವಾಗಿತ್ತು. ಸಂಘ ಕಟ್ಟಿಕೊಳ್ಳುವ ಹಕ್ಕು ಮತ್ತು ಅದಕ್ಕೆ ಬಹುರಾಷ್ಟ್ರೀಯ ದಿಗ್ಗಜ ಕಂಪನಿಯಿಂದ ಮಾನ್ಯತೆಯನ್ನು ಬಯಸಿ ಕಾರ್ಮಿಕರು ಈ ಹೋರಾಟ ನಡೆಸಿದ್ದರು.

ಕೇಂದ್ರೀಯ ಕಾರ್ಮಿಕ ಸಂಘಟನೆಗಳು (ಸಿಟಿಯು) ಮತ್ತು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಜಂಟಿಯಾಗಿ ಬೃಹತ್ ಕಾರ್ಯಾಚರಣೆಗಳನ್ನು ನಡೆಸಿವೆ. ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳು ಮತ್ತು ಹಿಂಸಾಚಾರವನ್ನು ವಿರೋಧಿಸಿ ದೇಶದಾದ್ಯಂತ ಪ್ರತಿಭಟನೆಗಳು ನಡೆದಿವೆ. ಸ್ಪರ್ಧಾತ್ಮಕ ಪರೀಕ್ಷೆಗಳ ತಪ್ಪು ವ್ಯವಸ್ಥೆಗಳು ಮತ್ತು ಪ್ರಶ್ನೆ ಪತ್ರಿಕೆಗಳ ಸೋರಿಕೆಯನ್ನು ಪ್ರತಿಭಟಿಸಿ ಅನೇಕ ರಾಜ್ಯಗಳಲ್ಲಿ ಯುವಜನರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದಿದ್ದಾರೆ. ಶುಲ್ಕ ಏರಿಕೆ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಹೋರಾಟಗಳನ್ನು ನಡೆಸುತ್ತಿದ್ದಾರೆ. ಹೊಸ ವರ್ಷವು ಇನ್ನಷ್ಟು ಹೆಚ್ಚು ಹೋರಾಟಗಳು ಹಾಗೂ ಸಂಘರ್ಷದ ತಾಣಗಳನ್ನು ಕಾಣಲಿದೆ.

ಜನಾಂಗ ಹತ್ಯೆಯ ಸಮರ

ಅಂತಾರಾಷ್ಟ್ರೀಯವಾಗಿ, 2024ನೇ ವರ್ಷವನ್ನು ಪ್ರಮುಖವಾಗಿ 21ನೇ ಶತಮಾನದ ಅತ್ಯಂತ ಕೆಟ್ಟ ಜನಾಂಗೀಯ ನರಹತ್ಯೆಯ ಯುದ್ಧಕ್ಕಾಗಿ ನೆನಪಿಸಲಾಗುತ್ತದೆ; ಗಾಜಾದಲ್ಲಿ ಇಸ್ರೇಲ್‌ನಿಂದ ಪ್ಯಾಲೆಸ್ತೀನಿಯರ ನರಮೇಧ ನಡೆಯುತ್ತಿದೆ. 2023ರ ಅಕ್ಟೋಬರ್‌ನಲ್ಲಿ ಆರಂಭವಾದ ಬರ್ಬರ ಆಕ್ರಮಣ 2024ರಲ್ಲೂ ಮುಂದುವರಿಯಿತು. ಹೊಸ ವರ್ಷ ಆರಂಭವಾದರೂ ಅದಕ್ಕೆ ವಿರಾಮ ಸಿಕ್ಕಂತಿಲ್ಲ. ನಾಗರಿಕರನ್ನು ಗುರಿಯಾಗಿಸಿ ವೈಮಾನಿಕ ದಾಳಿಗಳು, ಡ್ರೋನ್ ಆಕ್ರಮಣಗಳು ಮತ್ತು ಆರ್ಟಿಲರಿ ಶೆಲ್ಲಿಂಗ್‌ಗಳ ಮೂಲಕ ಗಾಜಾ ಜನರ ನಿರ್ಮೂಲನೆ ಮಾಡಲಾಗುತ್ತಿದೆ. ಆಸ್ಪತ್ರೆಗಳು ಮತ್ತು ಶಾಲೆಗಳನ್ನು ಉದ್ದೇಶಪೂರ್ವಕವಾಗಿಯೇ ಟಾರ್ಗೆಟ್ ಮಾಡಲಾಗುತ್ತಿದೆ. ಗಾಜಾಕ್ಕೆ ಆಹಾರ ಸರಬರಾಜನ್ನು ನಿಲ್ಲಿಸಿ ಜನರು ಹಸಿವಿನಿಂದ ಕಂಗೆಡುವುದನ್ನು ನರಮೇಧದ ಒಂದು ಅಸ್ತ್ರವನ್ನಾಗಿ ಮಾಡಲಾಗಿದೆ. ಮಧ್ಯಪ್ರವೇಶ ಮಾಡಿ ಅಮೆರಿಕ-ಬೆಂಬಲಿತ ಆಕ್ರಮಣವನ್ನು ನಿಲ್ಲಿಸಲು ವಿಫಲವಾಗಿರುವುದರ ಬಗ್ಗೆ ಜಗತ್ತಿನಾದ್ಯಂತ ಹತಾಶೆ ಉಂಟಾಗಿದೆ. ಅದರ ಜತೆ ಜತೆಯಲ್ಲೇ ಆಘಾತಕಾರಿ ನರಮೇಧದ ಮುಂದೆ ಅಪಾರ ಧೈರ್ಯ ಮತ್ತು ಕೆಚ್ಚನ್ನು ತೋರಿಸಿದ ಪ್ಯಾಲೆಸ್ತೀನಿ ಜನರಿಗೆ ಜಗತ್ತಿನಾದ್ಯಂತ ಮೆಚ್ಚುಗೆ ಹಾಗೂ ಸೌಹಾರ್ದತೆಯೂ ವ್ಯಕ್ತವಾಗಿದೆ.

2024ರಲ್ಲಿ ಯುರೋಪ್‌ನಲ್ಲಿ ಅತಿ-ಬಲಪಂಥೀಯರು ಮುನ್ನಡೆ ಸಾಧಿಸಿದ್ದು ನವ ಉದಾರವಾದಿ ನೀತಿಗಳನ್ನು ಅಪ್ಪಿಕೊಂಡ ನಂತರ ಸೋಷಲ್-ಡೆಮಾಕ್ರಾಟ್ ಮಧ್ಯಪಂಥೀಯರು ಬಲಪಂಥದತ್ತ ಹೊರಳಿದ್ದನ್ನು ತೋರಿಸುತ್ತದೆ. ಈ ದೇಶಗಳಲ್ಲಿ ಎಡ ಶಕ್ತಿಗಳು ಇಲ್ಲದಿರುವುದರಿಂದ ಪ್ರತಿಪಕ್ಷಗಳ ಸ್ಥಾನವನ್ನು ಅತಿ-ಬಲಪಂಥೀಯರು ಆವರಿಸಿಕೊಳ್ಳುತ್ತಿದ್ದಾರೆ. ಆದರೆ ಪರಿಣಾಮಕಾರಿ ಪರ್ಯಾಯ ಎಂದು ಬಿಂಬಿಸಿಕೊಳ್ಳಲು ಸಮರ್ಥವಾದಲ್ಲೆಲ್ಲ ಎಡ ಶಕ್ತಿಗಳು ಅತಿ ಬಲ ಪಂಥೀಯರಿಗೆ ಸವಾಲು ಹಾಕುವ ಸ್ಥಿತಿಯಲ್ಲಿವೆ. ಫ್ರಾನ್ಸ್‌ನಲ್ಲಿ, ಎಡ ಪಂಥೀಯ ಮೈತ್ರಿಕೂಟವಾದ ನ್ಯೂ ಪಾಪ್ಯುಲರ್ ಫ್ರಂಟ್ ಸಂಸದೀಯ ಚುನಾವಣೆಗಳಲ್ಲಿ ಏಕೈಕ ದೊಡ್ಡ ಕೂಟವಾಗಿ ಹೊರಹೊಮ್ಮಲು ಸಮರ್ಥವಾಗಿದೆ. ಕಳೆದ ವರ್ಷ ಬೆಲ್ಜಿಯಂನಲ್ಲಿ, ವರ್ಕರ್ಸ್ ಪಾರ್ಟಿಯು ಐರೋಪ್ಯ, ರಾಷ್ಟ್ರೀಯ ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಗಮನಾರ್ಹ ಸಾಧನೆ ಮಾಡಿದೆ.

ಭಾರತದಲ್ಲಿ ಕೂಡ, ಎಡಪಕ್ಷಗಳ ಸಾಮರ್ಥ್ಯ ಮುಂದಿನ ದಿನಗಳಲ್ಲಿ ಹೊರಬರಬೇಕಿದೆ. ಹೊಸ ವರ್ಷವು ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸುವ ಏಕೀಕೃತ ಮತ್ತು ಪರಿಣಾಮಕಾರಿ ಎಡ ಶಕ್ತಿ ಹೊರಹೊಮ್ಮುವುದನ್ನು ಕಾಣಬೇಕಿದೆ. ಅದು ಹಿಂದೂತ್ವ-ಕಾರ್ಪೊರೇಟ್ ಆಡಳಿತವನ್ನು ಸೋಲಿಸಲು ಜಾತ್ಯತೀತ-ಪ್ರಜಾಸತ್ತಾತ್ಮಕ ಶಕ್ತಿಗಳು ನಡೆಸುತ್ತಿರುವ ಸಂಘರ್ಷವನ್ನು ಬಲಪಡಿಸಲಿದೆ.

2025ರ ಏಪ್ರಿಲ್‌ನಲ್ಲಿ ತನ್ನ 24ನೇ ಮಹಾಧಿವೇಶನದತ್ತ ಸಿಪಿಐ(ಎಂ) ಮುನ್ನಡೆಯುತ್ತಿದೆ. ಪಕ್ಷದ ಸ್ವತಂತ್ರ ಶಕ್ತಿ ಮತ್ತು ಸಾಮೂಹಿಕ ನೆಲೆಯನ್ನು ನಿರ್ಮಿಸಲು ಅದು ತನ್ನೆಲ್ಲ ಶಕ್ತಿಗಳನ್ನು ಧಾರೆಯೆರೆಯಲಿದೆ. ಅದು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ ರೂಪಿಸುವ ಪ್ರಯತ್ನಗಳನ್ನು ಬಲಪಡಿಸಲಿದೆ.


ಅನು: ವಿಶ್ವ

ಕೇಂದ್ರ ಸರಕಾರ ತಕ್ಷಣ ರೈತ ಸಂಘಟನೆಗಳೊಂದಿಗೆ ಮಾತುಕತೆ ಆರಂಭಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ನವೆಂಬರ್ 26 ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಹಿರಿಯ ರೈತ ಮುಖಂಡ ಶ್ರೀ ಜಗಜಿತ್ ಸಿಂಗ್ ದಲ್ಲೆವಾಲ್ ಅವರ ಆರೋಗ್ಯ ಸ್ಥಿತಿ ಅತ್ಯಂತ ಗಂಭೀರವಾಗಿದೆ. ಅವರ ಈ ಪ್ರತಿಭಟನೆ ರೈತರ ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಗೆ ಒಂದು ಕಾನೂನು ಬೆಂಬಲ ಇರಬೇಕು ಮತ್ತು ಸಾಲಮನ್ನಾ ಮಾಡಬೇಕು ಎಂಬ ರೈತ ಆಂದೋಲನದ ನ್ಯಾಯಸಮ್ಮತ ಆಗ್ರಹಕ್ಕಾಗಿ.

ಈ ಎಲ್ಲಾ ಆಗ್ರಹಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟವುಗಳಾಗಿದ್ದು, ಅದು ಮಧ್ಯಪ್ರವೇಶಿಸಲು ನಿರಾಕರಿಸುತ್ತಿದೆ, ಈ ಮೂಲಕ ಈ ಪರಿಸ್ಥಿತಿಗೆ ಅದು ಸಂಪೂರ್ಣ ಹೊಣೆಯಾಗಿದೆ ಮತ್ತು ದೇಶಾದ್ಯಂತ ರೈತರಲ್ಲಿ ವ್ಯಾಪಕ ಆತಂಕ ಮತ್ತು ಕ್ಷೋಭೆ ಉಂಟಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇಂದ್ರ ಸರಕಾರ ತಕ್ಷಣವೇ ಎಲ್ಲಾ ರೈತ ಸಂಘಟನೆಗಳ ಮತ್ತು ಅವರ ಜಂಟಿ ವೇದಿಕೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆಯನ್ನು ಪ್ರಾರಂಭಿಸಬೇಕು ಎಂದು ಒತ್ತಾಯಿಸಿದೆ.

ಡಾ. ಮನಮೋಹನ್ ಸಿಂಗ್ ಅವರಿಗೆ-ಸಿಪಿಐ(ಎಂ) ಶ್ರದ್ಧಾಂಜಲಿ



ಮಾಜಿ ಪ್ರಧಾನಿ ಮತ್ತು ಖ್ಯಾತ ಅರ್ಥಶಾಸ್ತ್ರಜ್ಞರಾದ ಡಾ. ಮನಮೋಹನ್ ಸಿಂಗ್‌ರವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ದುಃಖ ವ್ಯಕ್ತಪಡಿಸಿದೆ.

ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಹತ್ತು ವರ್ಷಗಳ ಅವಧಿಯಲ್ಲಿ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಗಾಗಿ ದೃಢವಾಗಿ ನಿಂತಿದ್ದರು. ಅವರು ದೇಶದ ಹಿತಾಸಕ್ತಿಗಳಿಗಾಗಿ ಎಂದು ನಂಬಿದ ನೀತಿಗಳನ್ನು ಅಂಗೀಕರಿಸಿದರು. ಅವರು ಪ್ರಶ್ನಾತೀತ ಸಮಗ್ರತೆ ಹೊಂದಿದ್ದ ಒಬ್ಬ ನಾಯಕರಾಗಿದ್ದರು ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ ಅರ್ಪಿಸುತ್ತ, ಅವರ ಪತ್ನಿ ಗುರುಶರಣ್ ಕೌರ್ ಮತ್ತು ಅವರ ಪುತ್ರಿಯರಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

ಸಿಪಿಐ(ಎಂ) 24ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆ


ಕಾಂ. ಎಂ.ಎ. ಬೇಬಿ, ಪೊಲಿಟ್ ಬ್ಯೂರೋ ಸದಸ್ಯರು



ಕಾಂ. ಸೀತಾರಾಮ್ ಯೆಚೂರಿ ವೇದಿಕೆ

ಆರೆಸ್ಸೆಸ್–ಬಿಜೆಪಿಗಳು ಮತೀಯ ನೆಲೆಗಟ್ಟಿನಲ್ಲಿ ದೇಶವನ್ನು ವಿಭಜಿಸುತ್ತಿವೆ–ಎಂ.ಎ. ಬೇಬಿ

ವರದಿ: ಆರ್. ರಾಮಕೃಷ್ಣ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ 24 ನೇ ಕರ್ನಾಟಕ ರಾಜ್ಯ ಸಮ್ಮೇಳನವು ತುಮಕೂರು ನಗರದಲ್ಲಿ ಡಿಸೆಂಬರ್ 29 ರಿಂದ 31, 2024 ರ ವರೆಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಜನರ ಬದುಕಿನ ನಾನಾ ಸಂಕಟಗಳು, ಕೋಮುವಾದ ಜಾತಿ ತಾರತಮ್ಯ, ಜಾಗತೀಕರಣದ ದಾಳಿ ಮುಂತಾದ ವಿಚಾರಗಳ ಬಗೆಗೆ ವಿವರವಾಗಿ ಚರ್ಚಿಸಿದ ಸಮ್ಮೇಳನವು ಜನರ ಬದುಕನ್ನು ಕಾಡುವ ಸಮಸ್ಯೆಗಳು, ಆಳುವ ಸರ್ಕಾರಗಳ ಜನವಿರೋಧಿ ನೀತಿಗಳ ವಿರುದ್ಧ ಪ್ರಬಲ ಜನಾಂದೋಲನವನ್ನು ರೂಪಿಸಲು ನಿರ್ಧರಿಸಿತು.

ಡಿಸೆಂಬರ್ 29 ರಂದು ನಡೆದ ಅತ್ಯಂತ ಉತ್ಸಾಹದ ಮೆರವಣಿಗೆ, ಬಹಿರಂಗ ಸಭೆ, ಆ ನಂತರ ಪ್ರತಿನಿಧಿ ಅಧಿವೇಶನ ಒಳಗೊಂಡಂತೆ ಸಮ್ಮೇಳನದ ವಿವಿಧ ಕಲಾಪಗಳು ಹಾಗೂ ತೀರ್ಮಾನಗಳ ಕುರಿತ ಒಂದು ವರದಿ.

'ಸಮಗ್ರ, ಸಮೃದ್ಧ–ಕರ್ನಾಟಕ' ಎಂಬ ಘೋಷಣೆಯಡಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ 24 ನೇ ಸಮ್ಮೇಳನ ತುಮಕೂರು ಡಿಸೆಂಬರ್ 29 ರಿಂದ 31, 2024 ರವರೆಗೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಈ ಸಮ್ಮೇಳನದ ಅಂಗವಾಗಿ ಡಿಸೆಂಬರ್ 29, 2024 ರಂದು ಬೆಳಿಗ್ಗೆ ಬೃಹತ್ ಮೆರವಣಿಗೆಯು ಸ್ವಾತಂತ್ರ್ಯ ಚೌಕದಿಂದ ಟೌನ್ ಹಾಲ್‌ವರೆಗೆ ನಡೆಯಿತು. ಈ ರ್‍ಯಾಲಿಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಬಿ.ವಿ. ರಾಘವುಲು, ಕೇಂದ್ರ ಸಮಿತಿ ಸದಸ್ಯರಾದ ಕೆ.ಎನ್. ಉಮೇಶ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದಕೆ. ನೀಲಾ, ಚಿಂತಕ ಸಿ. ಯತಿರಾಜು ಅವರು ಚಾಲನೆ ನೀಡಿದರು. ತುಮಕೂರು ನಗರದ ಪ್ರಮುಖ ಬೀದಿಗಳನ್ನು ಹಾದು ಬಂದ ಮೆರವಣಿಗೆಯು ಟೌನ್ ಹಾಲ್ ತಲುಪಿದ ನಂತರ ಟೌನ್ ಹಾಲ್ ಮುಂಭಾಗದ 'ಕಾಂ. ಸೀತಾರಾಮ ಯೆಚೂರಿ ವೇದಿಕೆ'ಯಲ್ಲಿ ಬಹಿರಂಗ ಸಭೆ ನಡೆಯಿತು. ಕೇರಳದ ಮಾಜಿ ಶಿಕ್ಷಣ ಸಚಿವರು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯರೂ ಆದ ಕಾಂ. ಎಂ.ಎ. ಬೇಬಿಯವರು ಬಹಿರಂಗ ಸಭೆಯನ್ನು ಉದ್ಘಾಟಿಸಿದರು.

ಕಾಂ.ಬೇಬಿಯವರು ಮಾತನಾಡಿ ಸಿ.ಪಿ.ಐ.(ಎಂ) ಪ್ರಜಾಪ್ರಭುತ್ವ ತತ್ವವನ್ನು ಪಾಲಿಸುತ್ತದೆ. ಪ್ರತಿಮೂರು ವರ್ಷಕ್ಕೊಮ್ಮೆ ಶಾಖೆಯಿಂದ ರಾಷ್ಟ್ರಮಟ್ಟದವರೆಗೆ, ಸ್ವಯಂ ಟೀಕೆಯೊಂದಿಗೆ ಪ್ರಜಾಸತ್ತಾತ್ಮಕವಾಗಿ ತನ್ನ ನೀತಿಗಳನ್ನು ಚರ್ಚೆ ಮಾಡುತ್ತದೆ. ಹೇಗೆ



ರೈತ–ಕಾರ್ಮಿಕರ, ಕೃಷಿಕೂಲಿಕಾರರ, ವಿದ್ಯಾರ್ಥಿ–ಯುವಜನ ಚಳುವಳಿಯನ್ನು ಬಲಗೊಳಿಸಬಹುದು ಎಂದು ಚರ್ಚಿಸುತ್ತದೆ. ಸಿಪಿಐ(ಎಂ) ಪಕ್ಷ ಇತರ ಪಕ್ಷಗಳಂತಲ್ಲ. ಪ್ರತಿ ಹಂತದಲ್ಲೂ ನಾಯಕತ್ವವನ್ನು ಪ್ರಜಾಸತ್ತಾತ್ಮಕವಾಗಿ ಚುನಾಯಿಸಲಾಗುತ್ತದೆ. ಮೂರು ದಿನಗಳ ಪ್ರತಿನಿಧಿ ಅಧಿವೇಶನದಲ್ಲಿ ರಾಜ್ಯ ಸಮ್ಮೇಳನದಲ್ಲಿ, ಹಾಗೆಯೇ ಮುಂದಿನ ವರ್ಷ ತಮಿಳು ನಾಡಿನ ಮಧುರೈನಲ್ಲಿ ಸಿಪಿಐ(ಎಂ) ಅಖಿಲ ಭಾರತ ಮಹಾಧಿವೇಶನದಲ್ಲಿ ಪ್ರಜಾಸತ್ತಾತ್ಮಕವಾಗಿ ಚರ್ಚೆ ನಡೆಯಲಿದೆ ಎಂದರು.

ಕೊಪ್ಪಳ ಜಿಲ್ಲೆಯ ಮರಕುಂಬಿಯಲ್ಲಿ ನಡೆದ ದಲಿತರ ಮೇಲಿನ ದೌರ್ಜನ್ಯ ಪ್ರಕರಣದ ತೀರ್ಪು ಬಂದಿದೆ. 98 ಜನರಿಗೆ ಜೀವಾವಧಿ ಶಿಕ್ಷೆಯಾಗಿದೆ. ಹತ್ತು ವರ್ಷಗಳ ಹಿಂದೆ ಮನುವಾದಿ, ಜಮೀನ್ದಾರಿ ಶಕ್ತಿಗಳು ಇಡೀ ಗ್ರಾಮದ ಮೇಲೆ ದಾಳಿ ಮಾಡಿ ದಲಿತರ ಮನೆಗಳನ್ನು ನಾಶ ಮಾಡಿದ್ದರು. ಹಲವರ ಮೇಲೆ ಹಲ್ಲೆ ಮಾಡಿದ್ದರು. ವೀರೇಶ ಎಂಬ ಯುವಕನನ್ನು ಕೊಲೆ ಮಾಡಿ ರೈಲ್ವೆ ಹಳಿ ಮೇಲೆ ಬಿಸಾಡಿದ್ದರು. ಆಡಳಿತ ಯಾವುದೇ ಕ್ರಮವಹಿಸಿರಲಿಲ್ಲ. ಕೃಷಿ ಕೂಲಿಕಾರರ ಸಂಘಟನೆ, ಸಿಪಿಐ(ಎಂ)ಗಳ ಹೋರಾಟ, ಅವರು ಬೆನ್ನುಬಿದ್ದಿದ್ದರಿಂದ ಜಿಲ್ಲಾಡಳಿತ ಅನಿವಾರ್ಯವಾಗಿ ಕ್ರಮವಹಿಸಿತು. ಈ ಹೋರಾಟದಲ್ಲಿ ಅಂದಿನ ಕೇರಳದ ಸಚಿವರು, ಸಂಸತ್ತಿನಲ್ಲಿ ಈಗಿನ ಸಿಪಿಐ(ಎಂ)ನ ಮುಖಂಡರೂ ಆದ ಕಾಂ.ರಾಧಾಕೃಷ್ಣ, ನಾನು (ಬೇಬಿ), ಅಂದಿನ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಜಿಲ್ಲಾ ಮುಖಂಡರು ಸೇರಿದಂತೆ ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನೆ ಮಾಡಿದ್ದೆವು. ಈಗ ಜಿಲ್ಲಾ ನ್ಯಾಯಾಲಯ ತೀರ್ಪು ನೀಡಿದೆ. ಕೆಂಪುಬಾವುಟ ಮಾತ್ರವೇ ಶೋಷಿತ ಜನರಿಗೆ ನ್ಯಾಯ ಕೊಡಿಸಲು ಸಾಧ್ಯ ಎಂಬುದು ಸಾಬೀತಾಗಿದೆ ಎಂದರು.

ಬಹುಮತ ಕಳೆದುಕೊಂಡರೂ ಕೋಮುವಾದಿ ಧೋರಣೆ

ನರೇಂದ್ರ ಮೋದಿ, ಆರೆಸ್ಸೆಸ್–ಬಿಜೆಪಿಯವರು ಕಳೆದ ಲೋಕಸಭಾ ಚುನಾವಣೆಯಲ್ಲಿ 400 ಸ್ಥಾನಗಳನ್ನು ಗೆಲ್ಲಲು ಬಯಸಿದ್ದರು. ಭಾರತದ ಸಂವಿಧಾನವನ್ನು ಮೂಲಭೂತವಾಗಿ ಬದಲಾಯಿಸಿ ಭಾರತವನ್ನು ಫ್ಯಾಸಿಸ್ಟ್ ಮಾದರಿಯ ಮನುವಾದಿ ಹಿಂದೂರಾಷ್ಟ್ರವನ್ನಾಗಿ ಮಾಡಲು ಅವರು ಉದ್ದೇಶಿಸಿದ್ದರು. ಜನರು ಈ ಗುರಿಯನ್ನು ಸೋಲಿಸಿ ತೀರ್ಪು ಕೊಟ್ಟರು. ಬಿಜೆಪಿ ಪಕ್ಷಕ್ಕೆ ಬಹುಮತ ನೀಡಲಿಲ್ಲ. ಬಿಜೆಪಿಯು ತೆಲುಗು ದೇಶಂ, ಜೆಡಿ(ಯು) ಪಕ್ಷಗಳ ಬೆಂಬಲದಿಂದ ಮಾತ್ರ ಸರಕಾರ ನಡೆಸಲು ಸಾಧ್ಯ. ಹೀಗಿದ್ದರೂ ಆರೆಸ್ಸೆಸ್ ಮತ್ತು ಬಿಜೆಪಿಯವರು, ಮೋದಿಯವರು ಸಮಾಜವನ್ನು ಮತೀಯ ನೆಲೆಗಟ್ಟಿನಲ್ಲಿ ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ. ಜನರ ಐಕ್ಯತೆಯನ್ನು ಮುರಿಯುತ್ತಿದ್ದಾರೆ. ಕೋಮುಗಲಭೆಗಳನ್ನು ಹುಟ್ಟು ಹಾಕುತ್ತಿದ್ದಾರೆ. ಉತ್ತರ ಪ್ರದೇಶದ ಸಂಭಲ್‌ನಲ್ಲಿ ಕೋಮುಗಲಭೆ ಆಗಿದೆ. ಹಿಂದೂವಾಗಿದ್ದರೂ ದೇಶದ ಐಕ್ಯತೆಯ ಪರವಾಗಿ ಇರುವವರನ್ನು ಕೊಲ್ಲುತ್ತಿದ್ದಾರೆ. ಕರ್ನಾಟಕದಲ್ಲಿ ವಿದ್ವಾಂಸ ಡಾ. ಎಂ.ಎಂ. ಕಲ್ಬುರ್ಗಿಯವರನ್ನು ಕೊಂದರು.

ಇತ್ತೀಚೆಗೆ ಬಾರ್ ಅಸೋಸಿಯೇಷನ್‌ನ ಸಭೆಯೊಂದರಲ್ಲಿ ಹಿರಿಯ ವಕೀಲ ದುಷ್ಯಂತ್ ದುವೆ ಭಾವೋದ್ವೇಗದಿಂದ ಅತ್ತರು. ದೇಶದಲ್ಲಿ ಜನರ ಐಕ್ಯತೆ ನಾಶ ಮಾಡಲಾಗುತ್ತಿದೆ ಎಂದು ಅವರು ನೊಂದಿದ್ದರು. 800 ವರ್ಷಗಳ ↗


ಕೆಂಬಾವುಟಗಳ ಬೃಹತ್ ಮೆರವಣಿಗೆ


ಪುಸ್ತಕಗಳ ಬಿಡುಗಡೆ

ಹಿಂದೆ ಬಸವಣ್ಣ, ಶರಣರು ಕಾಯಕವೇ ಕೈಲಾಸ ಎಂದರು. ವಚನ ಚಳುವಳಿಯ ಪ್ರಗತಿಪರ ಆಶಯಗಳನ್ನು ನಾಶ ಮಾಡುವುದು ಆರೆಸ್ಸೆಸ್ ಮತ್ತು ಬಿಜೆಪಿಗಳ ಗುರಿಯಾಗಿದೆ. ಈ ಕೋಮುವಾದಿ, ಮನುವಾದಿ ಶಕ್ತಿಗಳನ್ನು ಸೋಲಿಸಬೇಕಿದೆ. ಎಡಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಪಡಿಸಬೇಕಿದೆ. ಅದು ಸಾಧ್ಯವಾಗಬೇಕಾದರೆ ಎಡಶಕ್ತಿಗಳ ಶಕ್ತಿ ಹಾಗೂ ಸಿಪಿಐ(ಎಂ)ನ ಸ್ವತಂತ್ರ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಿದೆ ಎಂದರು.

ಕೇರಳದಲ್ಲಿ ಬಡತನ ನಿವಾರಣೆ ಗುರಿ

ಮೋದಿ ಸರಕಾರದ ಅಡಳಿತದಲ್ಲಿ ಜನರ ಬಡತನ ಹೆಚ್ಚಾಗುತ್ತಿದೆ. ಆದರೆ, ನವೆಂಬರ್ 1, 2025 ಹೊತ್ತಿಗೆ ಎಲ್.ಡಿ.ಎಫ್. ಸರಕಾರವು ಕೇರಳ ರಾಜ್ಯದಲ್ಲಿನ ಕಡುಬಡತನವನ್ನು ಸಂಪೂರ್ಣ ನಿವಾರಿಸುವ ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದೆ. ಭಾರತದಲ್ಲಿ ರಾಜ್ಯ ಸರಕಾರಗಳಿಗೆ ಸಂಪನ್ಮೂಲಗಳ ಇತಿ ಮಿತಿ ಇದೆ. ಆದರೂ ಇಂತಹ ಜನಪರ ಗುರಿಯೊಂದಿಗೆ ಎಲ್.ಡಿ.ಎಫ್. ಸರಕಾರವು ಕೆಲಸ ಮಾಡುತ್ತಿದೆ. ಈ ಸರಕಾರದ ಪ್ರಯತ್ನಗಳಿಗೆ ಕರ್ನಾಟಕದ ಜನರ ಸೌಹಾರ್ದ ಬೆಂಬಲ ಬೇಕಿದೆ ಎಂದೂ ಬೇಬಿಯವರು ಬೆಂಬಲ ಕೋರಿದರು.



ಪ್ರತಿನಿಧಿಗಳನ್ನು ಉದ್ದೇಶಿಸಿ ಪಿ.ಬಿ.ಸದಸ್ಯರಾದ ಕಾಂ.ಎ.ವಿಜಯರಾಘವನ್

ಭಾರತ ಹಸಿವಿನ ಗಣರಾಜ್ಯ

–ಎ. ವಿಜಯರಾಘವನ್

ಮಾಜಿ ಸಂಸತ್ ಸದಸ್ಯರು, ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯರೂ ಆದ ಕಾಂ. ಎ.ವಿಜಯರಾಘವನ್ ಅವರು ಮಾತನಾಡಿ ಭಾರತದಲ್ಲಿ ಗಣತಂತ್ರದ 'ಅಮೃತ ಕಾಲ್' ಅನ್ನು, ಸಂವಿಧಾನ ಅಂಗೀಕಾರದ 75 ನೇ ವರ್ಷದ ಆಚರಣೆ ನಡೆಸಲಾಗುತ್ತಿದೆ. ಭಾರತವು ಜಗತ್ತಿನ ಮೂರನೇ ದೊಡ್ಡ ಆರ್ಥಿಕತೆ ಆಗುತ್ತದೆ ಎಂದು ಬಿಂಬಿಸಲು ಪ್ರಯತ್ನಿಸಲಾಗುತ್ತಿದೆ. ವಾಸ್ತವ ಭಿನ್ನವಾಗಿದೆ. ಭಾರತ ಹಸಿವಿನ ಗಣರಾಜ್ಯವಾಗಿದೆ. ಜಗತ್ತಿನಲ್ಲೇ ಅತಿದೊಡ್ಡ ಸಂಖ್ಯೆ ಬಡವರು, ಅತಿಹೆಚ್ಚು ಜನ ಭೂಹೀನರು, ಅತಿಹೆಚ್ಚು ಜನ ಹಸಿದವರು ಭಾರತದಲ್ಲಿ ಇದ್ದಾರೆ. ಭಾರತದಲ್ಲಿ ದಲಿತರ ಮೇಲೆ ಅತಿ ಹೆಚ್ಚು ದೌರ್ಜನ್ಯಗಳಾಗುತ್ತಿವೆ. ಸರಕಾರ ಜನರ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದರು.

ನಮ್ಮದು ಅಸಮಾನತೆಯಿಂದ ಕೂಡಿರುವ ಸಮಾಜ. ಎಲ್ಲ ಪಕ್ಷಗಳೂ ತಾವು ಜನರಿಗಾಗಿಯೇ ಇದ್ದೇವೆ ಎನ್ನುತ್ತಾರೆ. ಬಂಡವಾಳಶಾಹಿ ರಾಜಕೀಯ ಪಕ್ಷಗಳು ಶ್ರೀಮಂತರ ಮತ್ತು ಬಂಡವಾಳಗಾರರ ಆಸ್ತಿ ಹೆಚ್ಚಳ ಮಾಡುವುದಕ್ಕಾಗಿ ಕೆಲಸ ಮಾಡುತ್ತಾರೆ. ಕಮ್ಯೂನಿಸ್ಟ್ ಪಕ್ಷ ಕಾರ್ಮಿಕರ ಪಕ್ಷ. ಕೃಷಿ ಕೂಲಿಕಾರರ ಪಕ್ಷ. ಶೋಷಿತ ದಲಿತರ ಪಕ್ಷ. ಹೋರಾಟ ನಿರತರ ಪಕ್ಷ. ಕೆಲವು ಪಕ್ಷಗಳು ಕುಟುಂಬಗಳ ಹಿಡಿತದಲ್ಲಿರುತ್ತವೆ. ಧುರೀಣರು, ನಂತರ ಅವರ ಮಕ್ಕಳು, ಮೊಮ್ಮಕ್ಕಳು ಆ ಪಕ್ಷದ ನಾಯಕತ್ವವನ್ನು ವಹಿಸಿಕೊಂಡು ಹೋಗುವ ಪಕ್ಷಗಳಾಗಿವೆ. ಸಿಪಿಐ(ಎಂ) ಆ ರೀತಿಯ ಪಕ್ಷವಲ್ಲ.

ಅದಾನಿ, ಅಂಬಾನಿಗಳು ಒಂದು ಲೋಟ ನೀರು ಕೇಳಿದರೆ ಸರಕಾರ ಒಂದು ಬಿಂದಿಗೆ ನೀರು ಕೊಡುತ್ತಿದೆ

ಬಿಜೆಪಿಯು ತನಗೆ ಬಹುಮತ ಇಲ್ಲವಾದರೂ ತನ್ನ ನೀತಿಗಳನ್ನು ಬದಲಿಸಿಕೊಂಡಿಲ್ಲ. ಜನರ ಅವಶ್ಯಕ ವಸ್ತುಗಳ ಬೆಲೆ ಶೇ.20 ರಷ್ಟು ಏರಿಕೆಯಾಗಿದೆ. ಅದರಲ್ಲಿ ಗೋಧಿ ಶೇ. 63, ಅಕ್ಕಿ ಶೇ. 53, ತರಕಾರಿ ಶೇ. 40 ಶೇ. ಹೆಚ್ಚಳ ಆಗಿವೆ. ಜಗತ್ತಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಬಹಳ ಮುಂದುವರಿದಿದೆ. ಯುವಜನರು ಆಧುನಿಕ–ಗುಣಮಟ್ಟದ ಶಿಕ್ಷಣ ಬಯಸುತ್ತಿದ್ದಾರೆ. ಆದರೆ ಜನರಿಗೆ ಸರಕಾರಗಳು ವಂಚನೆ ಎಸಗುತ್ತಿವೆ. ಖಾಸಗಿ ವೈದ್ಯಕೀಯ, ಇಂಜಿನೀಯರಿಂಗ್ ಕಾಲೇಜುಗಳು ಕರ್ನಾಟಕದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿವೆ. ದೇಶದಲ್ಲೀಗ 144 ಕೋಟಿ ಜನರು ಇದ್ದಾರೆ. ಆದರೆ ಈ ದೇಶದ ಸರಕಾರವು ಕೇವಲ ಅದಾನಿ, ಅಂಬಾನಿ, ಟಾಟಾ, ಬಿರ್ಲಾ ಮುಂತಾದ 5 ಕುಟುಂಬಗಳಿಗಾಗಿ ನಡೆಯುತ್ತಿದೆ. ಬಡವರ ಸಮಸ್ಯೆಗಳನ್ನು ಬಗೆಹರಿಸುವುದು ಬಿಟ್ಟು ಬಡವರನ್ನು ಶೋಷಿಸುವ ಶಕ್ತಿಗಳಿಗೆ ರಕ್ಷಣೆ ಕೊಡುವ ವ್ಯವಸ್ಥೆ ನಮ್ಮಲ್ಲಿದೆ. ಅದಾನಿ, ಅಂಬಾನಿಗಳು ಒಂದು ಲೋಟ ನೀರು ಕೇಳಿದರೆ ಸರಕಾರ ಒಂದು ಬಿಂದಿಗೆ ನೀರು ಕೊಡುತ್ತಿದೆ.

ಶೇ.25 ರಷ್ಟು ಬಂದರುಗಳು, ಶೇ.20 ವಿಮಾನ ನಿಲ್ದಾಣಗಳು, ಶೇ.25 ಸಿಮೆಂಟ್ ಕೈಗಾರಿಕೆಗಳು, 'ಏರ್ ಇಂಡಿಯಾ'ದಂತಹ ಬೃಹತ್ ಸಂಸ್ಥೆಗಳು ಎಲ್ಲವನ್ನೂ ಈ ಬಂಡವಾಳಗಾರರಿಗೆ ಕೊಡಲಾಗಿದೆ. ಇಂತಹ ನೀತಿಗಳನ್ನು ಬದಲಿಸಲು ಕೆಂಬಾವುಟ ದೃಢವಾದ ಹೋರಾಟಗಳನ್ನು ನಡೆಸಲಿದೆ. ಎಲ್ಲೆಲ್ಲಿ ಎಡಪಕ್ಷಗಳು ಅಧಿಕಾರವನ್ನು ಗಳಿಸಿ ಕೊಳ್ಳುತ್ತವೋ ಅಲ್ಲಿ ಜನರ ಬದುಕನ್ನು ಉತ್ತಮ ಪಡಿಸಲು ಕೆಲಸ ಮಾಡುತ್ತಿದೆ.

ಕೇರಳದಲ್ಲಿ 'ಉಳುವವರಿಗೆ ಭೂಮಿ'ಯಿಂದ ಅಗಾಧ ಅಭಿವೃದ್ಧಿ

ಕೇರಳದಲ್ಲಿ ಪ್ರಬಲವಾದ ಜಮೀನ್ದಾರಿ ವ್ಯವಸ್ಥೆ ಇತ್ತು. 1957 ರಲ್ಲಿ ಅಧಿಕಾರಕ್ಕೆ ಬಂದ ಇ.ಎಂ.ಎಸ್. ನಂಬೂದರಿಪಾಡ್ ನೇತೃತ್ವದ ಮೊತ್ತಮೊದಲ ಕಮ್ಯೂನಿಸ್ಟ್ ಸರಕಾರದ ಮೊತ್ತ ಮೊದಲ ಆದೇಶವು ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸಬಾರದು ಎಂಬುದಾಗಿತ್ತು. 1967 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಎಡ ನೇತೃತ್ವದ ಸರಕಾರವು 'ಉಳುವವನೇ ಭೂಮಿಯ ಒಡೆಯ' ನೀತಿಯಂತೆ ರೈತರಿಗೆ ಭೂಮಿಯನ್ನು ಹಂಚಿತು. 28 ಲಕ್ಷ ಗೇಣಿದಾರರಿಗೆ ರಕ್ಷಣೆ ನೀಡಿತು. ಕೇರಳದಲ್ಲಿ 1970 ಜನವರಿ 1 ರ ಹೊತ್ತಿಗೆ 32 ಲಕ್ಷ ರೈತರು ಭೂಮಿಯ ಒಡೆಯರಾದರು. ಇಂತಹ ನೀತಿಗಳ ಪರಿಣಾಮವಾಗಿ ಇಡೀ ದೇಶದಲ್ಲಿ ಸಾಕ್ಷರತೆ, ಜೀವಿತಾವಧಿಯಲ್ಲಿ ಕೇರಳವು ಮೊದಲ ಸ್ಥಾನದಲ್ಲಿದೆ. ದೇಶದಲ್ಲೇ ಅತ್ಯುತ್ತಮ ಆರೋಗ್ಯ ವ್ಯವಸ್ಥೆಯನ್ನು ಹೊಂದಿದೆ. ಅತ್ಯಂತ ಹೆಚ್ಚಿನ ಮಹಿಳಾ ಸಾಕ್ಷರತೆ ಇರುವುದು ಕೇರಳದಲ್ಲಿ. ಒಂದು ರಾಜ್ಯ ಸರಕಾರವಾದ ಕೇರಳ ಸರಕಾರ ಸಂವಿಧಾನದ ಮಿತಿಗಳ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕಿದೆ. ಇಷ್ಟಾದರೂ ಪ್ರತಿಯೊಬ್ಬರಿಗೂ ಎರಡು ಕೋಣೆಗಳ ಮನೆ ಸ್ವಂತ ಮನೆ ಕೊಡಲು ಯೋಜನೆ ರೂಪಿಸಿದೆ. ಇಡೀ ದೇಶಕ್ಕೆ ಈ ದೃಷ್ಟಿಕೋನ ಬೇಕು. ಆದರೆ ಮೋದಿ ಸರಕಾರಕ್ಕೆ ದ್ವೇಷ ಹರಡುವುದು ಗುರಿಯಾಗಿದೆ. ಹಣಬಲ ದೇಶದ ರಾಜಕಾರಣದಲ್ಲಿ ಎದ್ದು ಕಾಣುತ್ತಿದೆ. ಬಿಜೆಪಿಯೂ ಹಣಬಲವನ್ನು ದುರ್ಬಳಕೆ ಮಾಡುತ್ತಿದೆ. ಕೋಮುವಾದವೂ ಇದಕ್ಕೆ ಸೇರಿಕೊಂಡಿದೆ. ಇತರ ಪಕ್ಷಗಳೂ ಹಣಬಲ ಬಳಸುತ್ತಿವೆ. ಕರ್ನಾಟಕದಲ್ಲಿಯೂ ಹಣಬಲದ ರಾಜಕೀಯ ವಿಪರೀತ ಹೆಚ್ಚಿದೆ. ಇಲ್ಲಿ ಶಾಸಕರೊಬ್ಬರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದು ಮತ್ತು ಇಂತಹದ್ದೇ ಹಲವು ವಿಚಾರಗಳಿಗಾಗಿ ಆಗಾಗ ಕರ್ನಾಟಕ ದೇಶವ್ಯಾಪಿ ಸುದ್ದಿಯಾಗುತ್ತಿರುತ್ತದೆ.

ಕೋಮುವಾದ, ಜಾತಿವಾದವನ್ನು ದುರ್ಬಳಕೆ ಮಾಡಲಾಗುತ್ತಿದೆ. ಈ ನೀತಿಗಳು ಬದಲಾಗಬೇಕು. ಶ್ರೀಮಂತರ ಪರವಾದ ನೀತಿಗಳಿಗೆ ಪರ್ಯಾಯ ನೀತಿಗಳು ಬರಬೇಕು. ಕಾರ್ಮಿಕರು, ಕೃಷಿಕೂಲಿಕಾರರು, ರೈತರು, ಶೋಷಿತರು ಸೇರಿ ಈ ಸಮಾಜದ ಸ್ವರೂಪವನ್ನು ಬದಲಿಸಬೇಕು. ಎಡಪಕ್ಷಗಳನ್ನು, ಸಿಪಿಐ(ಎಂ) ಅನ್ನು ಬಲಪಡಿಸಬೇಕು. ಮೂರು ದಿನಗಳ ಸಮ್ಮೇಳನವು ಈ ವಿಷಯಗಳನ್ನು ಚರ್ಚಿಸಲಿದೆ ಎಂದು ವಿಜಯ ರಾಘವನ್ ಹೇಳಿದರು.

ತಾತ್ವಿಕ ನೆಲೆಗಟ್ಟಿನ ರಾಜಕೀಯ ಬೇಕು

–ಪ್ರೊ. ದೊರೈರಾಜ್

ಪ್ರಗತಿಪರ ಚಿಂತಕರು ಹಾಗೂ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರೂ ಆದ ಚಿಂತಕ ಪ್ರೊ. ದೊರೈ ರಾಜ್ ಅವರು ಮಾತನಾಡಿ ಕೊಪ್ಪಳ ಜಿಲ್ಲೆಯಲ್ಲಿ ಅಸ್ಪೃಶ್ಯರು, ದಲಿತರ ಮೇಲೆ ನಡೆದ ದೌರ್ಜನ್ಯದ ವಿರುದ್ಧದ ಹೋರಾಟಕ್ಕಾಗಿ ಸಿಪಿಐ(ಎಂ) ಪಕ್ಷವನ್ನು ಅಭಿನಂದಿಸಿದರು. ತಾತ್ವಿಕ ನೆಲೆಗಟ್ಟಿರುವ ರಾಜಕೀಯ ಹೋರಾಟ ಮುಖ್ಯ. ಅಧಿಕಾರ ರಾಜಕಾರಣಕ್ಕಾಗಿ ಆರೆಸ್ಸೆಸ್‌ನಂತಹ ಸಂಘಟನೆ ಜಾತಿ–ಜಾತಿ, ಸಮುದಾಯ–ಸಮುದಾಯಗಳ ನಡುವೆ ದ್ವೇಷವನ್ನು ಹುಟ್ಟು ಹಾಕುತ್ತಿದೆ. ಅದು ವಿನಾಶದ ಸಿದ್ಧಾಂತ. ಆರೆಸ್ಸೆಸ್–ಬಿಜೆಪಿಗಳು ಅಧಿಕಾರ ರಾಜಕಾರಣವನ್ನು ಉದ್ಯಮವನ್ನಾಗಿ ಮಾಡಿಕೊಂಡಿವೆ. ಇಂತಹ ಶಕ್ತಿಗಳಿಗೆ ಅಧಿಕಾರ ಸಿಗದಂತೆ ಜನತೆ ಎಚ್ಚರ ವಹಿಸಬೇಕಾಗಿದೆ ಎಂದರು.

ಶರಣ ಚಳುವಳಿಯ ಆಶಯ ನಾಶ ಮಾಡುವ ಕೆಲಸ

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆ ಕಾಂ.ಕೆ. ನೀಲಾ ಅವರು ಮಾತನಾಡಿ, ತುಮಕೂರು ತೋಂಟದ ಎಡಯಡೆ ಸಿದ್ದಲಿಂಗಸ್ವಾಮಿಯವರ ನೆಲ. 700 ಯತಿಗಳ ಊರು. ಕರ್ನಾಟಕ ರಾಜ್ಯದಲ್ಲಿ ಬರ ಬಂದಾಗ ಹಸಿದ ಜನರಿಗೆ ಅನ್ನವಿನ್ನಿಕ್ಕಿದ ಮಠ ಇಲ್ಲಿದೆ. ಅದು ಸಿದ್ದಗಂಗಾ ಮಠ. ಅನ್ನದಾಸೋಹಕ್ಕೆ ಖ್ಯಾತವಾದ ಮಠ. ಹನ್ನೆರಡನೆಯ ಶತಮಾನದ ಶರಣರ ಚಳುವಳಿಯ ಆಶಯಗಳನ್ನು ನಾಶ ಮಾಡುವ ಕೆಲಸವನ್ನು ಈಗ ಆರೆಸ್ಸೆಸ್ ಬಿಜೆಪಿಗಳು ತೀವ್ರಗೊಳಿಸಿವೆ. ಉತ್ತರ ಕರ್ನಾಟಕದಲ್ಲಿ ಮುಸ್ಲಿಮರು ಯಾರೂ ಇಲ್ಲದ ಊರಿನಲ್ಲೂ ಮೋಹರಂ ಆಚರಿಸುತ್ತಾರೆ. ಜನರಲ್ಲಿ ಅಂತಹ ಸೌಹಾರ್ದತೆ ಇದೆ. ಇಂದು ವಿಚಾರ ಕ್ರಾಂತಿಗೆ ಆಹ್ವಾನ ಮಾಡಿದ ಕುವೆಂಪು ಅವರ ಜನ್ಮದಿನ. 'ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ, ಮತಿಯಿಂದ ದುಡಿಯಿರೈ ಲೋಕಹಿತಕೆ' ಎಂದು, ಹಾಗೆಯೇ 'ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ, ಬಡತನವ ಬುಡಮಟ್ಟ ಕೀಳಲೈತನ್ನಿ' ಎಂದೂ ಕುವೆಂಪು ಅವರು ಕರೆ ನೀಡಿದ್ದರು.

ಆದರೆ ನಮ್ಮ ಆಳುವವರು ಹಸಿವು, ಬಡತನವನ್ನು ಹೆಚ್ಚು ಮಾಡುತ್ತಿದ್ದಾರೆ. ರಾಜ್ಯದಲ್ಲಿ ಬಾಣಂತಿಯರು ಸಾಯುತ್ತಿದ್ದಾರೆ. ನಮ್ಮ ಹೊಲ ನಮ್ಮ ಕೈಯಲ್ಲಿಲ್ಲ. ಕಾರ್ಪೊರೇಟ್ ಕಂಪನಿಗಳ ಕೈಗೆ ಹೋಗುತ್ತಿದೆ. ಎಡಪಕ್ಷಗಳ ಹೋರಾಟದಿಂದ ದೇಶದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬಂತು. ಅದು ನಗರಕ್ಕೂ ಅಗತ್ಯವಿದೆ.

ಮನುವಾದಿ ಆರೆಸ್ಸೆಸ್ ಬಿಜೆಪಿಯವರು ರಾಜ್ಯದಲ್ಲಿ ಅಸಮಾನತೆ, ಜಾತಿ ತಾರತಮ್ಯದ ವಿರುದ್ಧದ ವಚನ ಚಳುವಳಿ ನಡೆದೇ ಇಲ್ಲ ಎನ್ನುತ್ತಿದ್ದಾರೆ. ಸರ್ವರ ಹಿತವನ್ನು ಕಾಯುವ, ಹಸಿವನ್ನು ನಿವಾರಿಸುವ ಚಳುವಳಿ, ವಚನ ಚಳುವಳಿ. 'ವಚನ– ನಿಜ ದರ್ಶನ' ಪುಸ್ತಕವನ್ನು ಓದಿ, ಪ್ರಸಾರ ಮಾಡುವ ಮೂಲಕ ಸತ್ಯವನ್ನು ಹೇಳುವ ಕೆಲಸ ಮಾಡೋಣ ಎಂದರು.

ಜನರ ನಿರೀಕ್ಷೆ ಹುಸಿಗೊಳಿಸಿದ ಕಾಂಗ್ರೆಸ್ ಸರಕಾರ– ಯು. ಬಸವರಾಜ್

ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ. ಯು. ಬಸವರಾಜ್ ಅವರು ಮಾತನಾಡಿ, ಕೋಮುವಾದಿ, ಜನ ವಿರೋಧಿ ನೀತಿಗಳ ಬಿಜೆಪಿ ಸರಕಾರವನ್ನು ಸೋಲಿಸಿ ನಾವು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತಂದೆವು. ಆದರೆ ಕಾಂಗ್ರೆಸ್ ಸರಕಾರ ಜನರ ನಿರೀಕ್ಷೆಯಂತೆ ಕೆಲಸ ಮಾಡದೇ ಜನವಿರೋಧಿ ದಾರಿಯಲ್ಲಿ ಹೋಗುತ್ತಿದೆ. ತನ್ನದೇ ಸರಕಾರದ ಗ್ಯಾರಂಟಿ ಯೋಜನೆಗಳ ದುರ್ಬಲಗೊಳಿಸುತ್ತಿದೆ. ಅಂಗನವಾಡಿಗಳನ್ನು ಖಾಸಗೀಕರಿಸಲು ಪ್ರಯತ್ನಿಸಲಾಗುತ್ತಿದೆ. ಐ.ಟಿ. ರಂಗದಲ್ಲಿ ದಿನಕ್ಕೆ 14 ಗಂಟೆಗಳ ಕೆಲಸದ ನೀತಿಯ ಜಾರಿಗೆ ಹೊರಟಿದೆ, ಇಂತಹ ನೀತಿಗಳ ವಿರುದ್ಧ ಸಿಪಿಐ(ಎಂ) ಹೋರಾಟ ರೂಪಿಸಲಿದೆ ಎಂದರು.

ಬಹಿರಂಗ ಸಭೆಯ ಆರಂಭದಲ್ಲಿ ಪ್ರಸ್ತಾವಿಕ ಮಾತನಾಡಿದ ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯ ಸೈಯದ್ ಮುಜೀಬ್ ಅವರು ತುಮಕೂರಿನಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಬೀಡಿ ಕಾರ್ಮಿಕರ ಚಳುವಳಿ, ಮುನಿಸಿಪಲ್ ಕಾರ್ಮಿಕರು, ರೈತ ಚಳುವಳಿ ಆರಂಭವಾಗಿದೆ. ಬ್ರಿಟೀಷ್ ಪೋಲಿಸ್ ಗೋಲಿಬಾರ್‌ನಲ್ಲಿ ಮೂರು ಜನ ಹೋರಾಟಗಾರರು ತೀರಿಕೊಂಡ ಸ್ವಾತಂತ್ರ್ಯ ಚೌಕದಿಂದ ಮೆರವಣಿಗೆ ಮಾಡಿದ್ದೇವೆ. ಜಿಲ್ಲೆಯಲ್ಲಿ ಕೆ.ಆರ್. ನಾಯಕ್, ಹಾಗಲವಾಡಿ ಚೆನ್ನಪ್ಪ, ಕೃಷ್ಣಸ್ವಾಮಿ, ಮಹಮದ್ ದಸ್ತಗೀರ್ ಮುಂತಾದ ಕಮ್ಯೂನಿಸ್ಟ್ ಹೋರಾಟಗಾರರ ಹೋರಾಟದ ಪರಂಪರೆ ಇದೆ. ಆದರೆ ಈಗ ತೆಂಗು, ಅಡಿಕೆ, ಶೇಂಗಾ ಬೆಳೆ ರೈತರು ಕಷ್ಟದಲ್ಲಿದ್ದಾರೆ. ಜಿಲ್ಲೆಯ ಹಾಗೂ ರಾಜ್ಯದ ಜನರ ಸಂಕಷ್ಟಗಳ ಪರಿಹಾರದ ದೃಷ್ಟಿಯಿಂದ ಹೋರಾಟಗಳನ್ನು ರೂಪಿಸಲು ಸಮ್ಮೇಳನ ನಡೆಯುತ್ತಿದ್ದು, ತುಮಕೂರಿನ ಜನರ ಸಹಕಾರದಿಂದ ಸಮ್ಮೇಳನ ಯಶಸ್ವಿಯಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ತುಮಕೂರಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾಂ. ಟಿ.ಆರ್. ರೇವಣ್ಣ ಅವರನ್ನು ಎ.ವಿಜಯ ರಾಘವನ್ ಅವರು ಸನ್ಮಾನಿಸಿದರು. ರೇವಣ್ಣ ಅವರು ಮಾತನಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ತುಮಕೂರಿನ ಸ್ವಾತಂತ್ರ್ಯ ಚೌಕದಲ್ಲಿ ಬ್ರಿಟೀಷ್ ಸರಕಾರದ ಗೋಲಿಬಾರ್‌ನಲ್ಲಿ ಮೂವರು ಹೋರಾಟಗಾರರು ತೀರಿಕೊಂಡರು. ನಾನು ಆ ಜಾಗದಲ್ಲಿದ್ದೆ. ದೊರೆಸ್ವಾಮಿ ಅಯ್ಯಂಗಾರ್ ಅವರ ಮಗನನ್ನು ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋಗಿದ್ದೆ. ಸಿಪಿಐ(ಎಂ) ಪ್ರತಿದಿನವೂ ಜನರ ಸಮಸ್ಯೆಗಳನ್ನು ತೆಗೆದುಕೊಂಡು ಹೋರಾಟ ಮಾಡುತ್ತಿದೆ. ಸಿಪಿಐ(ಎಂ) ಪಕ್ಷವನ್ನು ಬಲಪಡಿಸಿ ಎಂದು ಕರೆ ನೀಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಪ್ರಕಾಶ್‌ರವರು ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು. ರಾಜ್ಯ ಕಮ್ಯೂನಿಸ್ಟ್ ಚಳುವಳಿಯ ಹಿರಿಯ

ಪುಟ 15 ಕ್ಕೆ



ಕರಡು ವರದಿ ಮಂಡನೆ ಕಾಂ.ಯು.ಬಸವರಾಜ್ ಅವರಿಂದ

ಐಟಿ/ಐಟಿಇಎಸ್ ವಲಯಕ್ಕೆ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ಕಾಯಿದೆಯ ವಿನಾಯಿತಿಯನ್ನು ಕೊನೆಗೊಳಿಸಬೇಕು ಮತ್ತು ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕು

ಮಾಹಿತಿ ತಂತ್ರಜ್ಞಾನ ಮತ್ತು ಅದರ ಮೇಲೆ ಆಧಾರಿತ ಸೇವೆಗಳು ಹಾಗೂ ವಹಿವಾಟು ಪ್ರಕ್ರಿಯೆ ನಿರ್ವಹಣೆಗಳ (IT/ITeS & BPM) ಉದ್ಯಮವು ಕರ್ನಾಟಕದ ಒಟ್ಟು ರಾಜ್ಯ ಉತ್ಪನ್ನಕ್ಕೆ (ಜಿ.ಎಸ್.ಡಿ.ಪಿ ಗೆ) 24% ರಷ್ಟು ಕೊಡುಗೆ ನೀಡುತ್ತದೆ. ಈ ವಲಯದಲ್ಲಿ 22 ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಉದ್ಯಮವು ದೊಡ್ಡ ಆದಾಯವನ್ನು ಗಳಿಸಿದರೂ, ಈ ವಲಯದ ಉದ್ಯೋಗಿಗಳು ಕ್ರೂರ ಶೋಷಣೆಗೆ ಒಳಗಾಗಿದ್ದಾರೆ. ಕಾರ್ಮಿಕರಿಂದ ಉತ್ಪತ್ತಿಯಾಗುವ ಪ್ರತಿ ಒಂದು ರೂಪಾಯಿಗೆ, ಅವರ ಪಾಲು 8 ಪೈಸೆಗಿಂತಲೂ (0.083). ಉದ್ಯಮದ ಪ್ರವೇಶ ಹಂತದ ಉದ್ಯೋಗಿಗಳ ಸರಾಸರಿ ವೇತನವು ದಶಕಗಳಿಂದ ಏರಿಕೆ ಕಂಡಿಲ್ಲ, ಅಂದರೆ ಇದೇ ಅವಧಿಯಲ್ಲಿ ಏರುತ್ತಿರುವ ಜೀವನ ವೆಚ್ಚಕ್ಕೆ ಪರಿಗಣಿಸಿದರೆ ನೈಜ ವೇತನದಲ್ಲಿ ಒಟ್ಟಾರೆ ಇಳಿಕೆಯಾಗಿದೆ.

ಕೆಲಸ–ಜೀವನದ ಸಮತೋಲನದ ಪರಿಕಲ್ಪನೆಯು ಐಟಿ/ಐಟಿಇಎಸ್ ವಲಯದಲ್ಲಿ ಅಸ್ತಿತ್ವದಲ್ಲಿಲ್ಲ. ಯಾವುದೇ ಹೆಚ್ಚುವರಿ ವೇತನವಿಲ್ಲದೆ ವಾರಾಂತ್ಯ ಸೇರಿದಂತೆ ಅಧಿಕೃತ ಸಮಯವನ್ನು ಮೀರಿ ಕೆಲಸ ಮಾಡಲು ಒತ್ತಾಯಿಸಲ್ಪಡುವ ಉದ್ಯೋಗಿಗಳಲ್ಲಿ 8–9 ಗಂಟೆಗಳ ಕೆಲಸದ ದಿನವೆಂಬುದು ಮರೀಚಿಕೆಯಾಗಿದೆ. ಉದ್ಯೋಗಿಗಳು ಕೆಲಸದ ಸಮಯದ ನಂತರವೂ ಯಾವಾಗಲೂ ಕೆಲಸಕ್ಕೆ ಲಭ್ಯವಿರಬೇಕು ಎಂದು ನಿರೀಕ್ಷಿಸಲಾಗುತ್ತಿದೆ. ಅಧಿಕೃತ ಕೆಲಸದ ಮತ್ತು ವೈಯಕ್ತಿಕ ಸಮಯ ನಡುವಿನ ರೇಖೆಯನ್ನು ಮಸುಕುಗೊಳಿಸಲಾಗುತ್ತಿದೆ. ಉದ್ಯೋಗದಾತರಿಂದ ಈ ನಿರಂತರ ಒತ್ತಡವು ಗಂಭೀರ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ, ಈ ಉದ್ಯಮದಲ್ಲಿ 45% ಕ್ಕಿಂತ ಹೆಚ್ಚು ಉದ್ಯೋಗಿಗಳು ಖಿನ್ನತೆ, ಆತಂಕ, ನಿದ್ರಾಹೀನತೆ ಮುಂತಾದ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದಾರೆ, ಆದರೆ 55% ರಷ್ಟು ತೀವ್ರ ದೈಹಿಕ ಆರೋಗ್ಯದ ಪರಿಣಾಮಗಳನ್ನು ಅನುಭವಿಸುತ್ತಿದ್ದಾರೆ. ಕರ್ನಾಟಕದಲ್ಲಿ ಅಂಗಾಂಗ ವೈಫಲ್ಯದಿಂದ ಅಂಗಾಂಗ ಕಸಿಗಾಗಿ ಕಾಯುತ್ತಿರುವವರಲ್ಲಿ ಶೇ.20ರಷ್ಟು ಮಂದಿ ಐಟಿ ಉದ್ಯೋಗಿಗಳಾಗಿದ್ದಾರೆ ಎಂಬುದು ಗಮನಿಸಬೇಕಾದ ಅಂಶ.

ಈ ಉದ್ಯಮದಲ್ಲಿ ಈಗಾಗಲೇ ಇರುವ ಕೆಟ್ಟ ಕೆಲಸದ ಪರಿಸ್ಥಿತಿಗಳ ನಡುವೆ, ಕರ್ನಾಟಕ ಸರ್ಕಾರವು ಐಟಿ/ಐಟಿಇಎಸ್ ವಲಯದಲ್ಲಿ ಕೆಲಸದ ಸಮಯವನ್ನು ದಿನಕ್ಕೆ 14 ಗಂಟೆಗಳವರೆಗೆ ಹೆಚ್ಚಿಸಲು ತಿದ್ದುಪಡಿಯನ್ನು ಪ್ರಸ್ತಾಪಿಸಿದೆ. ಯೂನಿಯನಿನ ತ್ವರಿತ ಹಸ್ತಕ್ಷೇಪ ಮತ್ತು ಆಂದೋಲನದಿಂದಾಗಿ, ಸರ್ಕಾರವು ಈ ಪ್ರಸ್ತಾಪವನ್ನು ಸ್ಥಗಿತಗೊಳಿಸಬೇಕಾಯಿತು. ಆದರೂ ಈ ಪ್ರಸ್ತಾಪವನ್ನು ಹಿಂತೆಗೆದುಕೊಂಡಿಲ್ಲ.

ಕರ್ನಾಟಕ ಸರ್ಕಾರವು ಐಟಿ/ಐಟಿಇಎಸ್ ವಲಯಕ್ಕೆ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯಿದೆಯ ನಿಬಂಧನೆಗಳಿಂದ ವಿನಾಯಿತಿ ನೀಡಿದೆ. ಈ ವಿನಾಯಿತಿಯು ಕಳೆದ 25 ವರ್ಷಗಳಿಂದ ಜಾರಿಯಲ್ಲಿದೆ ಮತ್ತು ಸರ್ಕಾರವು ಈ ವರ್ಷ ಅದನ್ನು ಮತ್ತೆ ಐದು ವರ್ಷಗಳವರೆಗೆ ವಿಸ್ತರಿಸಿದೆ. ಯಾವುದೇ ಉದ್ಯಮದಲ್ಲಿ ಉದ್ಯೋಗ ನಿಯಮಗಳು, ಉದ್ಯೋಗ ಭದ್ರತೆ, ಶಿಸ್ತಿನ ಕಾರ್ಯವಿಧಾನಗಳು, ಕುಂದುಕೊರತೆ ಪರಿಹಾರ ಮತ್ತು ಕಾನೂನು ನೆರವು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕಾನೂನು ಪ್ರಮಾಣಿತ ನಿಯಮಗಳನ್ನು ಒದಗಿಸುವ ಮೂಲಕ ಕಾರ್ಮಿಕರಿಗೆ ರಕ್ಷಣೆ ಕೊಡುವ ಕಾನೂನಿನಿಂದ ಈ ವಿನಾಯಿತಿಯು ಐಟಿ/ಐಟಿಇಎಸ್ ಉದ್ಯಮದಲ್ಲಿನ ಕಾರ್ಮಿಕರಿಗೆ ಯಾವುದೇ ರಕ್ಷಣೆಯ ಅಭಾವ, ಕ್ರೂರ ಶೋಷಣೆ ಮತ್ತು ಅರಾಕತೆಗೆ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಇತರ ಕಾರ್ಮಿಕ ಕಾನೂನುಗಳು ಐಟಿ/ಐಟಿಇಎಸ್ ವಲಯಕ್ಕೆ ಅನ್ವಯಿಸುತ್ತವೆ. ಆದರೆ ಬಹುತೇಕ ಎಲ್ಲೆಡೆ ಇವನ್ನು ಉಲ್ಲಂಘಿಸಲಾಗುತ್ತಿದೆ. ಈ ಕಾನೂನುಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಜಾರಿಗೊಳಿಸುವಲ್ಲಿ ಸರ್ಕಾರದ ಸಂಪೂರ್ಣ ನಿರಾಸಕ್ತಿಯು ಅನಿಯಂತ್ರಿತ ಕೆಲಸದ ಸಂಸ್ಕೃತಿಗೆ ಕಾರಣವಾಗಿದೆ, ಈ ಉದ್ಯಮದ ಕಂಪನಿಗಳು ಕಾರ್ಮಿಕರನ್ನುಶೋಷಿಸಲು ಮುಕ್ತ ಅವಕಾಶವನ್ನು ನೀಡುತ್ತವೆ ಮತ್ತು ಅವರ ಯೋಗಕ್ಷೇಮ ಮತ್ತು ಮೂಲಭೂತ ಹಕ್ಕುಗಳನ್ನು ನಿರ್ಲಕ್ಷಿಸುತ್ತವೆ.



ಸಿಪಿಐ(ಎಂ) 24ನೇ ಕರ್ನಾಟಕ ರಾಜ್ಯ ಸಮ್ಮೇಳನವು ಈ ವಲಯದ ಉದ್ಯೋಗಿಗಳಿಗೆ ಮತ್ತು ಅವರ ಟ್ರೇಡ್ ಯೂನಿಯನ್‌ಗೆ ಮತ್ತು ಐಟಿ ಕಾರ್ಮಿಕ ಹಕ್ಕುಗಳನ್ನು ರಕ್ಷಿಸುವ ಅವರ ಹೋರಾಟಗಳಿಗೆ ಸೌಹಾರ್ದ ಬೆಂಬಲವನ್ನು ನೀಡುತ್ತದೆ.

ಸಿಪಿಐ(ಎಂ) 24ನೇ ಕರ್ನಾಟಕ ರಾಜ್ಯ ಸಮ್ಮೇಳನವು ಕರ್ನಾಟಕ ರಾಜ್ಯ ಸರಕಾರವನ್ನು ಈ ಮೂರು ಕ್ರಮಗಳನ್ನು ತೆಗೆದುಕೊಳ್ಳಲು ಬಲವಾಗಿ ಒತ್ತಾಯಿಸಲು ನಿರ್ಧರಿಸಿದೆ:

1. ಐಟಿ/ಐಟಿಇಎಸ್ ವಲಯಕ್ಕೆ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶ) ಕಾಯಿದೆಯ ವಿನಾಯತಿಯನ್ನು ಕೊನೆಗೊಳಿಸಬೇಕು ಮತ್ತು ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
2. ಐಟಿ/ಐಟಿಇಎಸ್ ವಲಯದಲ್ಲಿ ಕೈಗಾರಿಕಾ ಕೆಲಸದ ಸಮಯವನ್ನು ದಿನಕ್ಕೆ 14 ಗಂಟೆಗಳವರೆಗೆ ಹೆಚ್ಚಿಸುವ ತಿದ್ದುಪಡಿಯ ಪ್ರಸ್ತಾಪವನ್ನು ಪೂರ್ಣವಾಗಿ ಹಿಂತೆಗೆಯಬೇಕು.
3. ಐಟಿ/ಐಟಿಇಎಸ್ ವಲಯದಲ್ಲಿ. ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸುವ ಯಾವುದೇ ಕಂಪನಿಯ ವಿರುದ್ಧ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ನಿರ್ಣಯ ಮಂಡನೆ: **ಸೂರಜ್**
ಅನುಮೋದನೆ: **ವಸಂತ್‌ರಾಜ್ ಎನ್.ಕೆ.**

ನಿರ್ಣಯಗಳ ಅಂಗೀಕಾರ

ಸಮಾಜದ ಸೌಹಾರ್ದ ಸಂಸ್ಕೃತಿ, ಸಹಬಾಳ್ವೆ ಸಂರಕ್ಷಿಸುವ ಸಂಕಲ್ಪ

2025 ಜನವರಿ 30 ರಂದು ಸೌಹಾರ್ದ ಸಂಕಲ್ಪ ದಿನದ ಯಶಸ್ವಿಗೆ ಕರೆಗೆ ನಿರ್ಣಯ

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಸ್ವಂತವಾಗಿ ಬಹುಮತ ಗಳಿಸಲು ಸಾಧ್ಯವಾಗದೇ ಕುಸಿದರೂ, ಕರ್ನಾಟಕದಲ್ಲಿ ಬಿಜೆಪಿ ರಾಜ್ಯ ಸರಕಾರದ ದುರಾಡಳಿತ–ಕೋಮುವಾದಗಳ ವಿರುದ್ಧ ಜನ ಸ್ಪಷ್ಟ ತೀರ್ಪು ಕೊಟ್ಟಿರುವಾಗಲೂ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಭಾರತವನ್ನು ಫ್ಯಾಶಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವನ್ನಾಗಿಸುವ ಸಂಘ ಪರಿವಾರದ ಹುನ್ನಾರಕ್ಕೆ ಪೂರಕವಾದ ಕೋಮುವಾದಿ ಚಟುವಟಿಕೆಗಳನ್ನು ಅವ್ಯಾಹತವಾಗಿ ಮುಂದುವರಿಯುತ್ತಿರುವುದರ ಬಗ್ಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 24ನೆಯ ರಾಜ್ಯ ಸಮ್ಮೇಳನವು ಆತಂಕವನ್ನು ವ್ಯಕ್ತಪಡಿಸುತ್ತದೆ.

'ಐತಿಹಾಸಿಕ ಸತ್ಯ' ಮತ್ತು'ನಾಗರೀಕತೆಯ ನ್ಯಾಯ' ಹುಡುಕುವ ಹೋರಾಟ ಸಾರಿರುವುದಾಗಿ ಹೇಳಿಕೊಳ್ಳುತ್ತಿರುವ ಆರ್.ಎಸ್.ಎಸ್. ಮುಸ್ಲಿಮರ ಗಣೇಶ ವಿಸರ್ಜನೆಯ ನೆಪದಲ್ಲಿ ಹುಟ್ಟುಹಾಕಲಾದ ಗಲಭೆಯ ಹಿಂದೆಯೂ ಇಂತಹದ್ದೇ ಪಿತೂರಿ ಕಾಣಬಹುದು. ನಮ್ಮ ಭಾಷೆ, ಜನ ಸಂಸ್ಕೃತಿ, ನಾಡಿನ ಅಸ್ಮಿತತೆ, ಒಕ್ಕೂಟದ ಸ್ವರೂಪದ ಮೇಲೂ ಧಾಳಿಗಳು ಹೆಚ್ಚುತ್ತಿವೆ. ಸಮಾಜದ ಶಾಂತಿ ಕದಡುವ ಈ ಹಳೆಯ ತಂತ್ರವನ್ನು ಇತ್ತೀಚೆಗೆ ರಾಜ್ಯದಲ್ಲಿ ತೀವ್ರಗೊಳಿಸಲಾಗಿದೆ.

'ವಚನಗಳ ಸಾರವು ಉಪನಿಷತ್ತುಗಳ ವಿಚಾರಗಳ ಮುಂದುವರಿಕೆ, ವಚನ ಚಳುವಳಿಯು ಒಂದು ಅಧ್ಯಾತ್ಮಿಕ ಚಳುವಳಿ, ಪಾಶ್ಚಿಮಾತ್ಯ ಸ್ತ್ರೀವಾದಿ ದೃಷ್ಟಿಯಿಂದ ವಚನ ಚಳುವಳಿಯನ್ನು ನೋಡಬಾರದು, ಕಮ್ಯೂನಿಸ್ಟರಿಗೂ ವಚನ ಚಳುವಳಿಗೂ ಸಂಬಂಧವೇ ಇಲ್ಲ, ಇರಬೇಕಿಲ್ಲ.." ಮುಂತಾದ ವಾದದೊಂದಿಗೆ 'ವಚನ ದರ್ಶನ' ಎಂಬ ಪುಸ್ತಕ ರಚಿಸಿ, ಸಂಘಪರಿವಾರದ ಜಾತಿವಾದಿ–ಕೋಮುವಾದಿ ಶಕ್ತಿಗಳು ರಾಜ್ಯದಾದ್ಯಂತ ಜನರನ್ನು ವಿಶೇಷವಾಗಿ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕದ ಲಿಂಗಾಯತ ಸಮುದಾಯದ ಜನರು ಮತ್ತು ವಿದ್ಯಾರ್ಥಿಗಳನ್ನು ಸೆಳೆದು ಹಾದಿ ತಪ್ಪಿಸುವ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ 100 ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಗುಲ್ಬರ್ಗಾದಲ್ಲಿ 'ಭಾರತೀಯ ಸಂಸ್ಕೃತಿ ಉತ್ಸವ' ಎಂಬ ಬೃಹತ್ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದೆ. ಈ ಹೆಸರಿನಲ್ಲಿ ಭಾರತದ ಬಹುತ್ವ ಸಂಸ್ಕೃತಿಗೆ ವಿರೋಧವಾಗಿ ಹಿಂದುತ್ವದ ಮತಾಂಧ ವಿಚಾರಗಳನ್ನು ಹರಡಲು ವಾಹಕವನ್ನಾಗಿಯೂ ಈ ಕಾರ್ಯಕ್ರಮವನ್ನು ಬಳಸಿಕೊಳ್ಳುವ ಪ್ರಯತ್ನಗಳನ್ನು ಸಿಪಿಐ(ಎಂ) ಸಮ್ಮೇಳನವು ವಿರೋಧಿಸುತ್ತದೆ.

ಧಾರ್ಮಿಕ ಸ್ಥಳಗಳನ್ನು ಪ್ರಮುಖ ಗುರಿಯಾಗಿಸಿದೆ. ವಿವಾದಗಳ ತಾಣಗಳನ್ನಾಗಿಸಲು ಬಾಬಾ ಬುಡನ್‌ಗಿರಿ, ಬೀದರ್‌ನ ಲಾಡ್ಲೆ ಮಶಾಕ್ ದರ್ಗಾದಂತಹ ಬಹುತ್ವದ ಸೌಹಾರ್ದತೆಯ ಕೇಂದ್ರಗಳನ್ನೂ ಬಿಡದ ಸಂಘಪರಿವಾರ ದಕ್ಷಿಣ ಕರ್ನಾಟಕಕ್ಕೂ ಲಗ್ಗೆ ಇಟ್ಟಿದೆ.ಈ ವಿಷಯದಲ್ಲಿ ಸಮಾಜದಲ್ಲಿ ಗೊಂದಲ ಮೂಡಿಸಿ ಗಲಭೆಗಳನ್ನೆಬ್ಬಿಸುವ ಪ್ರಚೋದನಾಕಾರಿ ಕೆಲಸವನ್ನು ಹಿಂದುತ್ವವಾದಿ ಶಕ್ತಿಗಳು ಅತ್ಯಂತ ವ್ಯವಸ್ಥಿತವಾಗಿ ನಡೆಸುತ್ತಿವೆ.

ದ್ವೇಷ ಭಾಷಣಗಳನ್ನು ನಿಷೇಧಿಸಿ ಸುಪ್ರಿಂ ಕೋರ್ಟ್ ನಿರ್ದೇಶನವಿದ್ದರೂ ದೇಶದಾದ್ಯಂತ ದ್ವೇಷ ಭಾಷಣಗಳು ಎಗ್ಗಿಲ್ಲದೆ ನಡೆಯುತ್ತಿವೆ. ಸುಪ್ರಿಂ ಕೋರ್ಟ್‌ನ ಈ ತೀರ್ಪಿನ ವಿರುದ್ಧ ಕೋಮುವಾದಿ ಶಕ್ತಿಗಳು ಕಳ್ಳಮಾರ್ಗಗಳನ್ನು ಹುಡುಕುವುದು ಮುಂದುವರೆಯುವುದು ನಿಶ್ಚಿತ.

ಕರ್ನಾಟಕದಲ್ಲಿ ವಿಭಿನ್ನ ಪ್ರಶ್ನೆಗಳನ್ನೆತ್ತಿ ವಿವಾದವಾಗಿಸಿ ಗಲಭೆ ಸೃಷ್ಟಿಸುವ ಪ್ರಯತ್ನಗಳು ನಿಂತಿಲ್ಲ. ಅದರಲ್ಲೂ ದಕ್ಷಿಣ ಕರ್ನಾಟಕವನ್ನು ತನ್ನ ನೆಲೆಯಾಗಿಸಿಕೊಳ್ಳಬೇಕು ಎಂಬ ಅದರ ಪ್ರಯತ್ನಗಳೀಗ ಹೊಸ ರಾಜಕೀಯ ಸಂಯೋಜನೆಯಿಂದ ಮತ್ತಷ್ಟೂ ಹುರುಪು ಪಡೆಯುತ್ತಿವೆ. ಜೆಡಿ(ಎಸ್) ಪಕ್ಷದ ಬೆನ್ನೇರಿ ಒಕ್ಕಲಿಗ ಪ್ರಾಬಲ್ಯದ ದಕ್ಷಿಣ ಕರ್ನಾಟಕದಲ್ಲಿ ಬೇರು ಇಳಿಸುವ ಬಿಜೆಪಿ ಮತ್ತು ಮತ್ತು ಸಂಘ ಪರಿವಾರದ ಪ್ರಯತ್ನಕ್ಕೆ ಜೆಡಿ(ಎಸ್) ಪಕ್ಷದ ರಾಜಕೀಯ ಮೈತ್ರಿ ಅವಕಾಶ ಮಾಡಿಕೊಟ್ಟಿದೆ. ಆಗ ಕೆರಗೋಡು ಹನುಮಧ್ವಜ ವಿವಾದ, ಈಗ ಶ್ರೀರಂಗಪಟ್ಟಣದ ಜಾಮಾ ಮಸೀದಿ ಮುಂತಾದ ವಿವಾದಗಳನ್ನು ಬಡಿದೆಬ್ಬಿಸುವುದರಲ್ಲಿ ಸಂಘ ಪರಿವಾರ ನಿರತವಾಗಿದೆ. ಇತ್ತೀಚೆಗೆ ನಾಗಮಂಗಲದಲ್ಲಿ

ಅಸಹಿಷ್ಣುತೆ, ದ್ವೇಷ, ವಿಭಜನೆ ತರಲು ಬಹುತ್ವದ ನಮ್ಮ ನಾಡಿನ ಜನ ಸಂಸ್ಕೃತಿಯನ್ನು ನಾಶ ಮಾಡಿ ಫ್ಯಾಶಿಸ್ಟ್ ಮಾದರಿಯ ಹಿಂದುತ್ವದ ಮತೀಯ ಏಕ ಸಂಸ್ಕೃತಿಯನ್ನು ಹೇರುವ ಮತ್ತು ಜನತೆಯ ಐಕ್ಯತೆಯನ್ನು ಒಡೆಯುವ ಯತ್ನಗಳುನಡೆದಿವೆ. ಇಂತಹ ಪರಿಸ್ಥಿತಿಯಲ್ಲಿ ದೇಶಪ್ರೇಮಿಗಳಾದ ನಾವು ನಮ್ಮ ಸಮಾಜದ ಬಹುತ್ವ ಪರಂಪರೆಯನ್ನು, ಸಹಿಷ್ಣುತೆ, ಸಹಬಾಳ್ವೆಯ ಸಂಸ್ಕೃತಿಯನ್ನು, ಪ್ರಜಾಪ್ರಭುತ್ವ, ಮತನಿರಪೇಕ್ಷತೆ, ಸಮಾಜದಲ್ಲಿನ ಶಾಂತಿ ಹಾಗೂ ದೇಶದ ಐಕ್ಯತೆಯನ್ನು ಯಾವುದೇ ಬೆಲೆ ತೆತ್ತಾದರೂ ರಕ್ಷಿಸುವ ಪಣ ತೊಡುತ್ತೇವೆ. ಎಲ್ಲಾ ಬಗೆಯ ಕೋಮುವಾದ, ಮತೀಯ ಮೂಲಭೂತವಾದ, ಭಯೋತ್ಪಾದನೆಯನ್ನು ಎದುರಿಸಿ ಪ್ರತಿರೋಧಿಸುತ್ತೇವೆ.

ಈ ನಿಟ್ಟಿನಲ್ಲಿ ಮಹಾತ್ಮಾ ಗಾಂಧೀಜಿಯವರು ಮತಾಂಧರ ಗುಂಡಿಗೆ ಬಲಿಯಾಗಿ ಹುತಾತ್ಮರಾದ ಜನವರಿ 30 ರಂದು (2025) ಬೆಂಗಳೂರಿನಲ್ಲಿ ಮತ್ತು ರಾಜ್ಯದ ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ವಿವಿಧ ಪ್ರಗತಿಪರ ಸಂಘ ಸಂಸ್ಥೆಗಳೊಡಗೂಡಿದ 'ಸೌಹಾರ್ದ ಕರ್ನಾಟಕ'ವು ಸಂಘಟಿಸಲಿರುವ 'ಸೌಹಾರ್ದ ಸಂಕಲ್ಪ ದಿನ'ವನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಲು ಸಮ್ಮೇಳನವು ನಿರ್ಣಯಿಸುತ್ತದೆ.

ಅಂದು ಸಂಜೆ ಎಲ್ಲಾ ಕಡೆಗಳಲ್ಲಿಯೂ ಸಭೆ ಸೇರುವುದು, ಸೌಹಾರ್ದತೆ–ಸಮಾನತೆಯ ➚

ಜನವರಿ 17–19, 2025 ಕಲ್ಬುರ್ಗಿ ಯಲ್ಲಿ ಬೃಹತ್ ಸಮಾವೇಶ

ಸೌಹಾರ್ದ ಸಂಸ್ಕೃತಿ ಉತ್ಸವ ಯಶಸ್ವಿಗೊಳಿಸಲು ನಿರ್ಣಯ

ದೇಶದಲ್ಲಿ ಆರ್.ಎಸ್.ಎಸ್. ಕೋಮುವಾದವು ನವ ಉದಾರವಾದಿಯೊಂದಿಗೆ ಹೆಜ್ಜೆ ಹಾಕುತ್ತಿದೆ. ತೀವ್ರತರವಾದ ಆರ್ಥಿಕ ಬಿಕ್ಕಟ್ಟು ಸೃಷ್ಟಿಸುತ, ನಿರುದ್ಯೋಗ ಬಡತನ ಮತ್ತು ಎಲ್ಲ ರೀತಿಯ ತಾರತಮ್ಯವನ್ನು ಹೆಚ್ಚುಗೊಳಿಸುತ ಮತ್ತು ಪ್ರಜಾಪ್ರಭುತ್ವೀಯ ಸಂಸ್ಥೆಗಳನ್ನು ನಾಶಗೊಳಿಸುತ, ಬಹುಸಾಂಸ್ಕೃತಿಕ ಪರಂಪರೆಯ ಮೇಲೆ ಸಂಘತಿವಾಗಿ ದಾಳಿ ಮಾಡಲು ಯೋಜನೆ ಹೆಣೆದಿದೆ. ಇದು ಫ್ಯಾಸಿಸಮ್ಮಿನ ಲಕ್ಷಣಗಳನ್ನು ಹೊಂದಿದೆ.

ಆರ್‌ಎಸ್‌ಎಸ್ ಸಂಘವಾಗಿ ಆರಂಭವಾಗಿ 2025ಕ್ಕೆ ನೂರು ವರ್ಷವಾಗುತ್ತದೆ. ಭಾರತವನ್ನು ಹಿಂದೂ ರಾಷ್ಟ್ರವನ್ನಾಗಿ ಘೋಷಿಸಲು ಅನೇಕ ಹುನ್ನಾರಗಳನ್ನು ಒಳಸುಳಿಗಳನ್ನು ಸೃಷ್ಟಿ ಮಾಡಿದೆ. ಇದರ ಭಾಗವಾಗಿ ಮೂರು ವರ್ಷಗಳ ಹಿಂದೆ ಕಲಬುರಗಿಯಲ್ಲಿ ಆರ್ ಎಸ್ ಎಸ್ ನ ದಕ್ಷಿಣ ಭಾರತದ ರಾಜ್ಯಗಳ ವಿಭಾಗೀಯ ಬೈಠಕ್ ನಡೆಸಲಾಗಿತ್ತು. ಬೈಠಕ್ ನಡೆದದ್ದು ಕರ್ನಾಟಕ ರಾಜ್ಯದ ಹೈದರಬಾದ ಕರ್ನಾಟಕದ ಕಲಬುರಗಿಯಲ್ಲಿ ಬೈಠಕ್ ನಡೆಸಲಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಹಿಂದೂತ್ವ ಬಲಪಡಿಸಲು ಕರ್ನಾಟಕವನ್ನು ಹೆಬ್ಬಾಗಲನ್ನಾಗಿ ಮಾಡಿಕೊಂಡು ಹೈದರಾಬಾದ ಕರ್ನಾಟಕದ ಕಲಬುರಗಿಯ ಮೂಲಕ ಪ್ರವೇಶಿಸಲು ಅದು ಯೋಜನೆ ಮಾಡಿದೆ. ಆರ್‌ಎಸ್‌ಎಸ್ ಏಕಕಾಲಕ್ಕೆ ಅನೇಕ ಬಹುತ್ವದ ಹಕ್ಕಿಗಳನ್ನು ಹೊಡೆದುರುಳಿಸುವ ಯೋಜನೆ ಹೊಂದಿದೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕೋಮು ಭಾವನೆ ಹಬ್ಬಿಸಲು ಮತ್ತು ಸಾಂಸ್ಥಿಕರಣಗೊಳಿಸಲು ಭಾಗಶಃ ಯಶಸ್ವಿಯಾಗಿದೆ. ಈಗ ಅದರ ಗುರಿಯು ಹೈದರಾಬಾದ ಕರ್ನಾಟಕವಾಗಿದೆ. ಕೋಮುವಾದಿ ಪ್ರತಿಗಾಮಿ ತತ್ವ ಬೆಳೆಯಲು ಬಹುದೊಡ್ಡ ಅಡ್ಡಿ ಇರುವುದು ಹೈದರಾಬಾದ ಕರ್ನಾಟಕದ ಬಹುತ್ವ ಸಂಸ್ಕೃತಿ. ಶರಣ ಸೂಫಿ ಸಂತ ಅವಧೂತ ಆರೂಢ ಪರಂಪರೆಯು ಸನಾತನಿ–ವೈದಿಕ ವಿರೋಧಿ ಧೋರಣೆ ಹೊಂದಿವೆ. ಇದು ಆರ್ ಎಸ್ ಎಸ್ ಗೆ ಸವಾಲಾಗಿದೆ. ಕಳೆದ ಅನೇಕ ವರ್ಷಗಳಿಂದ ಅವರು ಮತೀಯ ಸಂಶೋಧಕರ ಮೂಲಕ ವಚನ ಚಳುವಳಿಯ ಮೂಲ ತಾತ್ವಿಕ ಅಂಶಗಳ ಮೇಲೆ ದಾಳಿ ಮಾಡಿ ಚಳುವಳಿಯೇ ನಡೆದಿಲ್ಲ ಎಂದು ಸಾಬೀತು ಪಡಿಸಲು ಪ್ರಯತ್ನಿಸಿತು. ಆದರೆ ಅದು ಸಾಧ್ಯವಾಗದೇ ಇದ್ದಾಗ, ಲಿಂಗಾಯತ ಪ್ರತ್ಯೇಕ ಧರ್ಮಕ್ಕಾಗಿ ಕೂಗು ಮತ್ತು ಶರಣ ಪರಂಪರೆಯ ತಾತ್ವಿಕ ಮುನ್ನಡೆ ಮುಂಚೂಣಿಗೆ ಬಂದಾಗ ಆರ್‌ಎಸ್‌ಎಸ್ ತನ್ನ ತಂತ್ರಗಾರಿಕೆ ಬದಲಾಯಿಸಿತು. ವಚನ ಚಳುವಳಿಯು ವೈದಿಕ ಧಾರೆಯ ಮುಂದುವರಿಕೆಯಾಗಿದೆ. ಹಿಂದೂ ಸಂಸ್ಕೃತಿಯ ಕಣ್ಣೋಟದಲ್ಲಿ ವಚನಗಳನ್ನು ಅರ್ಥೈಸಿಕೊಳ್ಳಬೇಕು ಎಂಬ ವಾದ ಮುಂದಿಟ್ಟು ಬಹುತ್ವದ ಪರಂಪರೆಯನ್ನೂ ಮತ್ತು ಅವೈದಿಕ ವಿಚಾರಧಾರೆಗಳನ್ನೂ ಏಕಕಲಕ್ಕೆ ಹಿಂದಿಕ್ಕುವ ಹುನ್ನಾರ ಮಾಡಿತು. ಅದಕ್ಕಾಗಿ ಅದು ಇತಿಹಾಸ ತಿರುಚುವ ಪುಸ್ತಕ ವಚನ–ದರ್ಶನ ಬರೆಯಿಸಿ ದೇಶದೆಲ್ಲೆಡೆ ಬಿಡುಗಡೆ ಮಾಡಲು ಕೋಟಿಗಟ್ಟಲೆ ಹಣ ಹೂಡಿತು. ಬಿಜೆಪಿಯ ಮುಖಂಡರೇ ಅದರ ಬಿಡುಗಡೆಗೆ ಮುಂದಾದರು. ಲಿಂಗಾಯತ ಪ್ರಣೀತ ಮಠಗಳ ಕೆಲವು ಸ್ವಾಮಿಗಳನ್ನು ತಮ್ಮ ಕೋಮುವಾದಿ ವಾದ ಮಂಡಿಲು ಬಳಸಿಕೊಳ್ಳುತ್ತಿದ್ದಾರೆ.

ಆರ್‌ಎಸ್‌ಎಸ್ ನ ಈ ವಾದವನ್ನು ಡಾ.ಎಂ. ಎಂ.ಕಲಬುರ್ಗಿಯವರು ಲಿಂಗಾಯತರು ಹಿಂದೂಗಳಲ್ಲ ಎಂಬ ಅಂಶಕ್ಕೆ ಬಲವಾದ ಪುರಾವೆಗಳನ್ನು ಒದಗಿಸಿದ್ದರು. ಅದಕ್ಕೆಂದೇ ಅವರನ್ನು ಬಲಿ ಪಡೆಯಲಾಯಿತು. ಪ್ರತಿರೋಧವೂ ಆರ್‌ಎಸ್‌ಎಸ್ ಎದುರಿಸಬೇಕಾಯಿತು. ಈ ಸಂಘರ್ಷವು ಮುಂದುವರೆದಿದೆ.

2025 ಜನವರಿ 29 ರಿಂದ ಫೆಬ್ರವರಿ 6 ವರೆಗೆ ಭಾರತೀಯ ಸಂಸ್ಕೃತಿ ಉತ್ಸವ–7 ಎಂಬ ಹೆಸರಿನಲ್ಲಿ ಕಲಬುರಗಿಯಲ್ಲಿ 240 ಎಕರೆ ಜಾಗದಲ್ಲಿ ದೇಶದಾದ್ಯಂತ ಸುಮಾರು ಲಕ್ಷಗಟ್ಟಲೆ ಜನರನ್ನು ಸಂಘಟಿಸುತ್ತಿದ್ದಾರೆ. ಇದಕ್ಕಾಗಿ ಅವರು ಅನೇಕ ತಂತ್ರಗಾರಿಕೆಯನ್ನು ಬಳಸಿದ್ದಾರೆ. ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿರುವ ಕೊತ್ತಲ ಬಸವೇಶ್ವರ ಶಿಕ್ಷಣ ಸಂಸ್ಥೆಯ 50ನೇ ವಾರ್ಷಿಕೋತ್ಸವದ ನೆಪದಲ್ಲಿ ನಡೆಸಲಾಗುತ್ತಿದೆ. ಒಂಬತ್ತೂ ದಿನಗಳ ಆಮಂತ್ರಣ ಪತ್ರಿಕೆಯಲ್ಲಿ ಸಂಪೂರ್ಣ ಕೋಮುವಾದ ಚಿಂತನೆಗಳಿಗೆ ಪೂರಕವಾದ ಕಾರ್ಯಯೋಜನೆ ಇದೆ. ಅವರ ತಂತ್ರಗಾರಿಕೆಯಂತೆ ರಾಜ್ಯ ಕಾಂಗ್ರೆಸ್ ಸರಕಾರದಲ್ಲಿರುವ ಮುಖ್ಯ ಮಂತ್ರಿ ಮತ್ತು ಅನೇಕ ಮಂತ್ರಿಗಳ ಹೆಸರುಗಳನ್ನು ಹಾಕಿಕೊಂಡಿದ್ದಾರೆ. ಹಾಗೆಯೇ ಅನೇಕ ಶರಣಸಂಸ್ಕೃತಿ ಪ್ರಣೀತ ಮಠಗಳ ಸ್ವಾಮಿಗಳನ್ನು ಸೇರಿಸಿಕೊಂಡಿದ್ದಾರೆ. ಭಾರತೀಯ ಸಂಸ್ಕೃತಿ ಎಂಬ ಹೆಸರಿನಲ್ಲಿ ಹಿಂದೂತ್ವ ಸಂಸ್ಕೃತಿಯ ಉತ್ಸವ ನಡೆಯುತ್ತಿರುವುದನ್ನು ಸಮ್ಮೇಳನವು ಗಂಭೀರವಾಗಿ ಪರಿಗಣಿಸಬೇಕು. ಮತ್ತು ತೀವ್ರವಾಗಿ ಖಂಡಿಸಬೇಕು. ಇದನ್ನು ಹಿಮ್ಮೆಟ್ಟಿಸಲು ಯೋಜನಾಬದ್ಧವಾದ ಕಾರ್ಯಯೋಜನೆ ರೂಪಿಸಬೇಕು.

ಶರಣ–ಸೂಫಿ–ಸಂತ ಪರಂಪರೆಯನ್ನು, ಬಹುತ್ವ ಸಾಂಸ್ಕೃತಿಕ ಪರಂಪರೆಯನ್ನು ಮುನ್ನೆಲೆಗೆ ತರಲು 2025 ಜನವರಿ 17, 18 ಮತ್ತು 19 ರಂದು ಮೂರು ದಿನಗಳ ಕಾಲ ಸೌಹಾರ್ದ ಕರ್ನಾಟಕ ವೇದಿಕೆಯ ಮೂಲಕ ಸೌಹಾರ್ದನ ಸಂಸ್ಕೃತಿ ಉತ್ಸವ ನಡೆಸಲಾಗುತ್ತಿದೆ. ರಾಜ್ಯದ ನಾಲ್ಕೂ ವಿಭಾಗಗಳಲ್ಲಿ ಸಭೆ ಸಮಾವೇಶ ನಡೆಸಿ 'ಸೌಹಾರ್ದ ಸಂಸ್ಕೃತಿ ಉತ್ಸವಕ್ಕಾಗಿ ಚಲೋ ಕಲಬುರ್ಗಿ' ನಡೆಸಬೇಕಾದ ಅಗತ್ಯವಿದೆ. ಹಾಗೂ ಪಕ್ಷದ ಸಮಿತಿಗಳು ಈ ವಿಶಾಲ ವೇದಿಕೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಪೂರ್ಣ ಬೆಂಬಲ ನೀಡಬೇಕೆಂದು ಪಕ್ಷದ 24ನೇ ರಾಜ್ಯ ಸಮ್ಮೇಳನವು ಕರೆ ನೀಡುತ್ತದೆ.

ನಿರ್ಣಯ ಮಂಡನೆ: **ಪ್ರಭು ಖಾನಾಪುರೆ**

ಅನುಮೋದನೆ: **ಜಗದೀಶ್ ಸೂರ್ಯ**

ಗೀತೆಗಳ ಗಾಯನ, ದಿನದ ಹಾಗೂ ಕಾರ್ಯಕ್ರಮದ ಮಹತ್ವದ ಕುರಿತು ಕೆಲವು ಮಾತುಗಳು, ಸಂಕಲ್ಪದ ಪ್ರತಿಜ್ಞೆ ಇತ್ಯಾದಿ ಇರಲಿವೆ. ಸೌಹಾರ್ದತೆಯ ಆಶಯವುಳ್ಳ ಎಲ್ಲರನ್ನೂ ಈ ವೇದಿಕೆಯಲ್ಲಿ ತೊಡಗಿಸುವುದು, ಒಳಗೊಳ್ಳುವಿಕೆ ಅತೀ ಅಗತ್ಯ. ಇಂತಹ ಚಟುವಟಿಕೆಗಳನ್ನು ವರ್ಷಪೂರ್ತಿ ನಡೆಸುವುದು, ನಿರಂತರತೆ ಕಾಯುವುದು, ವಿಶಿಷ್ಟ ಬೆಳವಣಿಗೆಗಳಲ್ಲಿ ಮಧ್ಯಪ್ರವೇಶಿಸಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವುದು ಮಹತ್ವದ್ದಾಗಿದೆ. ಅದಕ್ಕಾಗಿ ಸೌಹಾರ್ದ ಕರ್ನಾಟಕ ವೇದಿಕೆಯನ್ನು ಎಲ್ಲಾ ಜಿಲ್ಲೆ, ತಾಲೂಕುಗಳಲ್ಲಿ ಬಲಿಷ್ಟವಾಗಿ ಕಟ್ಟುವುದು ಅಗತ್ಯ. ಅದರತ್ತ ಎಲ್ಲರೂ ಶ್ರಮಿಸಬೇಕೆಂದು ಸಮ್ಮೇಳನವು ಕರೆ ನೀಡುತ್ತದೆ.

ಜನವರಿ 30, 2025 ರ 'ಸೌಹಾರ್ದ ಸಂಕಲ್ಪ ದಿನ'ವನ್ನು ಅಭೂತಪೂರ್ವ ರೀತಿಯಲ್ಲಿ ಯಶಸ್ವಿಗೊಳಿಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 24 ನೇ ರಾಜ್ಯ ಸಮ್ಮೇಳನವು ಕರೆ ನೀಡುತ್ತದೆ.

ನಿರ್ಣಯ ಮಂಡನೆ: **ಎಸ್.ವೈ.ಗುರುಶಾಂತ್**

ಅನುಮೋದನೆ: **ಪುಟ್ಟಮಾದು**



ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ವಿರುದ್ಧ ನಿರ್ಣಯ

ಭಾರತ ಸರ್ಕಾರವು ಕಳೆದ ಮೂರು ದಶಕಗಳಲ್ಲಿ ಅನುಸರಿಸಿಕೊಂಡು ಬಂದಿರುವ ಉದಾರೀಕರಣ – ಜಾಗತೀಕರಣ – ಖಾಸಗೀಕರಣದ ನೀತಿಗಳು ಜನವಿರೋಧಿಯಾಗಿವೆ. ಈ ನೀತಿಗಳ ಭಾಗವಾಗಿ ಸಾರ್ವಜನಿಕ ಉದ್ಯಮಗಳ ಬಂಡವಾಳ ಮಾರಾಟ, ಜಮೀನಿನ ಮಾರಾಟ / ನಗದೀಕರಣ, ಇತ್ಯಾದಿ ವಿಧಾನಗಳ ಮೂಲಕ ತನ್ನ ಖರ್ಚಿಗೆ ಸರ್ಕಾರ ಜನತೆಯ ಉದ್ಯಮಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ.

ಬೆಂಗಳೂರು ನಗರವು ಸಾರ್ವಜನಿಕ ವಲಯದ ಕೇಂದ್ರೋದ್ಯಮಗಳ ಕೇಂದ್ರ. ಇಲ್ಲಿರುವ ಬಿಇಎಲ್, ಎಚ್‌ಎಎಲ್ ಮತ್ತು ಬೆಮೆಲ್ ಸಂಸ್ಥೆಗಳು ಭಾರತ ಸರ್ಕಾರಕ್ಕೆ ಅಪಾರ ಪ್ರಮಾಣದ ಲಾಭಾಂಶ ಮತ್ತು ತೆರಿಗೆಗಳನ್ನು ಪಾವತಿಸುತ್ತಿವೆ. ಐಟಿಐ ಮತ್ತು ಎಚ್‌ಎಂಟಿ ಸಂಸ್ಥೆಗಳನ್ನು ಕೇಂದ್ರ ಸರ್ಕಾರ ಸರ್ವನಾಶ ಮಾಡಿ, ಈಗ ಅವುಗಳ ಜಮೀನನ್ನು ನುಂಗಿ ಹಾಕಲು ಯೊಜನೆ ರೂಪಿಸಿದೆ. ಬಿಎಇಲ್ ಸಂಸ್ಥೆಯ ಬಹುತೇಕ 49ರಷ್ಟು ಷೇರು ಬಂಡವಾಳವು ಈಗಾಗಲೇ ಖಾಸಗಿಯವರ ಪಾಲಾಗಿದೆ. ಎಚ್‌ಎಎಲ್ ಮತ್ತು ಬೆಮೆಲ್ ಸಂಸ್ಥೆಗಳ ಪರಿಸ್ಥಿತಿಯೂ ವಿಭಿನ್ನವಾಗಿಲ್ಲ. ಬೆಮೆಲ್ ಸಂಸ್ಥೆಯನ್ನು ಖಾಸಗಿ ಪಾಲುದಾರನಿಗೆ ಇಡಿಯಾಗಿ ಮಾರಿಬಿಡುವ ಪ್ರಕ್ರಿಯೆ ಈಗ ಜಾರಿಯಲ್ಲಿದೆ. ಅಲ್ಲದೆ ಈ ಸಂಸ್ಥೆಗಳಲ್ಲಿ ಬಹಳಷ್ಟು ಕೆಲಸಗಳನ್ನು ಖಾಸಗೀಯವರಿಗೇ ನೀಡಿ ಮಾಡಿಸಬೇಕೆಂದು ರಕ್ಷಣಾ ಇಲಾಖೆಯ ಕಾರ್ಯದೇಶದಲ್ಲಿಯೇ ಶರತ್ತು ವಿಧಿಸಲಾಗುತ್ತಿದೆ. ಉದಾಹರಣೆಗೆ, ಬಿಇಎಲ್‌ನ ಅನೇಕ ಉಪಕರಣಗಳಲ್ಲಿ ಎಲ್ ಆ್ಯಂಡ್ ಟಿ, ಮಹಿಂದ್ರ, ಟಾಟಾ ಕಂಪನಿಯ ಉಪಕರಣಗಳು ಕಡ್ಡಾಯವಾಗಿ ಖರೀದಿಸುವಂತೆ ಶರತ್ತು ವಿಧಿಸಲಾಗಿದೆ.

ಎಲ್ಲ ಸಾರ್ವಜನಿಕ ಉದ್ಯಮಗಳಿಗೆ ಜಮೀನು ಉಚಿತವಾಗಿ ನೀಡಿರುವುದು ಆಯಾಯ ರಾಜ್ಯ ಸರ್ಕಾರಗಳು. ಭಾರತ ಸರ್ಕಾರ ಲ್ಯಾಂಡ್ ಮೊನಟೈಸೇಷನ್ ಕಾರ್ಪೋರೇಷನ್ (ಎನ್‌ಎಲ್‌ಎಂಸಿ – ಜಮೀನು ನಗದೀಕರಣ ನಿಗಮ) ಎಂಬ ಸಂಸ್ಥೆ ಸ್ಥಾಪಿಸಿ, ಎಲ್ಲಾ ಸಾರ್ವಜನಿಕ ಉದ್ಯಮಗಳ ಜಮೀನಿನ ಲೆಕ್ಕ ತೆಗೆದುಕೊಂಡಿದೆ. ಇದನು ಖಚಿತ ಪಡಿಸಿಕೊಳ್ಳಲು ಡ್ರೋನ್ ಮೂಲಕ್ ಸರ್ವೇ ಮಾಡಿಸಿದೆ. ಬಳಕೆಯಾಗದ ನೆಲವನ್ನು ಜಮೀನು ನಗದೀಕರಣ ನಿಗಮಕ್ಕೆ ಹಸ್ತಾಂತರಿಸುವಂತೆ ಸೂಚಿಸಲಾಗಿದೆ. ಬಳಕೆಯಾಗದ ಜಮೀನನ್ನು ಲೀಸ್ / ಮಾರಾಟ / ಅಡಮಾನ ಮಾಡಿ, ಅದರಿಂದ ಬರುವ ವರಮಾನವನ್ನು ಸರ್ಕಾರ ಬಳಸಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಈ ಕಾರ್ಯವನ್ನು ಕೈಗೊಳ್ಳಲು ಅಂತಾರಾಷ್ಟ್ರೀಯ ರಿಯಲ್ ಎಸ್ಟೇಟ್ ಸಂಸ್ಥೆಗಳನ್ನು ಗುರುತು ಮಾಡುವ ಕೆಲಸ ಈಗ ನಡೆಯುತ್ತಿದೆ. ಇದರ ಭಾಗವಾಗಿ ಐಟಿಐ ಸಂಸ್ಥೆಯ ಸುಮಾರು 40 ಎಕರೆ ಜಮೀನನ್ನು (ಕೃಷ್ಣರಾಜಪುರ ರೈಲ್ವೇ ನಿಲ್ದಾಣದ ಬಳಿ) ಈ ನಗದೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಇದೇ ಬಗೆಯಲ್ಲಿ ಎಲ್ಲಾ ಸಾರ್ವಜನಿಕ ವಲಯದ ಜಮೀನನ್ನು ವಶಕ್ಕೆ ಪಡೆದು, ಖಾಸಗೀಯವರಿಗೆ ಹಸ್ತಾಂತರಿಸಲಾಗುವುದು ಸರ್ಕಾರದ ಯೋಜನೆಯಾಗಿದೆ.

ಈ ಎಲ್ಲಾ ಸಾರ್ವಜನಿಕ ಉದ್ಯಮಗಳ ಶ್ರಮಿಕರ ಪರಿಸ್ಥಿತಿ ಹೀನಾಯವಾಗಿದೆ. ಗುತ್ತಿಗೆ ಶ್ರಮ ಪದ್ಧತಿ ಕಾನೂನುಬಾಹಿರವಾಗಿ ಅನುಸರಿಸಲಾಗುತ್ತಿದೆ. ಕನಿಷ್ಟ ಕೂಲಿಗೆ ಕೌಶಲಯುತ ಕೆಲಸಗಾರರನ್ನು ಖಾಯಂ ಕೆಲಸಗಳಿಗೂ ಗುತ್ತಿಗೆ ಆಧಾರದಲ್ಲಿ ದುಡಿಸಿಕೊಳ್ಳಲಾಗುತ್ತಿದೆ. ಖಾಯಂ ಕಾರ್ಮಿಕರಿಗೆ ನೀಡಬೇಕಾದ ಲಾಭಾಂಶದ ಪಾಲನ್ನು ನೀಡುತ್ತಿಲ್ಲ. ಗುತ್ತಿಗೆ ಕಾರ್ಮಿಕರ ಪೈಕಿ ಒಂದು ದೊಡ್ಡ ವಿಭಾಗವು ಇಎಸ್‌ಐ ಮತ್ತು ಬೋನಸ್ ಕಾಯ್ದೆಯ ಮಿತಿಯನ್ನು ದಾಟಿರುವ ಕಾರಣ, ಈ ಕಾರ್ಮಿಕರಿಗೆ ವೈದ್ಯಕೀಯ ಸೌಲಭ್ಯವೂ ಇಲ್ಲ, ಲಾಭಾಂಶದಲ್ಲಿ ಕನಿಷ್ಠ ಬೋನಸ್ ಸಹ ನೀಡದೆ ಶೋಷಿಸಲಾಗುತ್ತಿದೆ. ಎಲ್ಲ ಲಾಭದ ಪಾಲನ್ನು ಅಧಿಕಾರಿಗಳು ತಾವೇ ಹಂಚಿಕೊಂಡು ಕಾರ್ಮಿಕರು ಸೃಷ್ಟಿಸಿದ ಸಂಪತ್ತನ್ನು ಲಪಟಾಯಿಸುತ್ತಿದ್ದಾರೆ. ಮಾತ್ರವಲ್ಲ, ಕಟ್ಟಡ ನಿರ್ಮಾಣ, ಕಾರ್ಖಾನೆಯ ನವೀಕರಣ, ಸಿಎಸ್‌ಆರ್ ಇತ್ಯಾದಿಗಳ ಖರ್ಚಿನಲ್ಲಿ ಕಲ್ಪನಾತೀತ ಭ್ರಷ್ಟಾಚಾರ ನಡೆದಿದೆ.

ಸಂಗ್ರಹದಲ್ಲಿ, ಕೇಂದ್ರ – ರಾಜ್ಯ ಸರ್ಕಾರಗಳು ಜನತೆಯ ಆಸ್ತಿಯಾಗಿರುವ ಸಾರ್ವಜನಿಕ ಉದ್ಯಮಗಳ ಬಂಡವಾಳ ಮಾರಿಕೊಳ್ಳುವುದು, ಇಲ್ಲವೇ ಅವುಗಳನ್ನು ದಿವಾಳಿ ಅಂಚಿಗೆ ತಳ್ಳಿ ಅವುಗಳ ಆಸ್ತಿ ಮಾರಿಕೊಳ್ಳುವ ಘನ–ಘೋರ ಮಹಾವಂಚನೆಯಲ್ಲಿ ತೊಡಗಿ, ಸಂವಿಧಾನ ವಿರೋಧಿ ದುಷ್ಕೃತ್ಯದಲ್ಲಿ ತೊಡಗಿವೆ.

ಸಿಪಿಐ(ಎಂ) 24ನೇ ರಾಜ್ಯ ಸಮ್ಮೇಳವು ಕೇಂದ್ರ–ರಾಜ್ಯ ಸರ್ಕಾರಗಳ ಸಾರ್ವಜನಿಕ ಉದ್ಯಮೆಗಳ ಖಾಸಗೀಕರಣದ ನೀತಿಗಳನ್ನು ವಿರೋಧಿಸುತ್ತದೆ. ಈ ಭೀಕರ ಅನ್ಯಾಯವನ್ನು ಕೊನೆಗಾಣಿಸಲು ವ್ಯಾಪಕ ಜನಜಾಗೃತಿ ಮೂಡಿಸಬೇಕು ಹಾಗು ನಮ್ಮ ರಾಷ್ಟ್ರೀಯ ವಿಮೋಚನಾ ಚಳುವಳಿಯ ಆಶಯದ ಸಾಕ್ಷಾತ್ಕಾರಕ್ಕೆ ಜನ್ಮತಾಳಿದ ಸಾರ್ವಜನಿಕ ವಲಯದ ಉದ್ಯಮಗಳನ್ನು ಜನಸಾಮಾನ್ಯರ ಆಸ್ತಿಯಾಗಿಯೇ ಸಂರಕ್ಷಿಸಲು, ವಿಶಾಲ ಜನಾಂದೋಳನ ರೂಪಿಸಬೇಕೆಂದು ಕರೆ ನೀಡುತ್ತಿದೆ.

ನಿರ್ಣಯ ಮಂಡನೆ: **ಪ್ರತಾಪ್ ಸಿಂಹ್**

ಅನುಮೋದನೆ: **ಆನಂದ(ಕೆಜಿಎಫ್)**

ಮಹಿಳೆಯರ ವಿರುದ್ಧದ ಎಲ್ಲ ರೀತಿಯ ದೌರ್ಜನ್ಯ ನಿರ್ಮೂಲನೆಗೆ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಿ ನಿರ್ಣಯ

ಗರ್ಭದಿಂದ ಗೋರಿಯವರೆಗೆ ಪುರುಷ ಪ್ರಧಾನ ಪಾಳೆಯಗಾರಿ ಮೌಲ್ಯಗಳಿಗೆ ಮಹಿಳೆ ಬಲಿಯಾಗುತ್ತಲೇ ಇದ್ದಾಳೆ. ಮನುಸಿದ್ದಾಂತ ಮತ್ತು ಮೂಲಭೂತವಾದೀ ಪ್ರತಿಪಾದನೆಗಳ ಜೊತೆ ಸೇರಿದ ನವ ಉದಾರವಾದೀ ನೀತಿಗಳು ಮಹಿಳೆಯರ ವಿರುದ್ಧದ ಅಪರಾಧಗಳನ್ನು ಇಮ್ಮಡಿಗೊಳಿಸಿವೆ. ಧರ್ಮ ಜಾತಿ ವರ್ಗಗಳ ಬೇಧವಿಲ್ಲದೆಯೇ ನಡೆಯುವ ದೌರ್ಜನ್ಯಗಳು ಒಂದೆಡೆಯಾದರೆ, ತಳಸ್ತರಕ್ಕೆ ತಳ್ಳಲ್ಪಟ್ಟ ಸಮುದಾಯದ ಮಹಿಳೆಯರ ಮೇಲೆ ಇದು ಇನ್ನಷ್ಟು ಘೋರವಾಗಿ ನಡೆಯುತ್ತಿವೆ.

ಎನ್.ಸಿ.ಆರ್.ಬಿ ವರದಿಯ ಪ್ರಕಾರ 2022 ರಲ್ಲಿ 4,45,256, ಎಂದರೆ ಘಂಟೆಯೊಂದಕ್ಕೆ 51 ಮಹಿಳೆಯರ ವಿರುದ್ಧದ ಅಪರಾಧದ ಪ್ರಕರಣಗಳು ದಾಖಲಾಗಿವೆ. ದಿನವೊಂದಕ್ಕೆ 86–90 ಅತ್ಯಾಚಾರಗಳು ನಡೆಯುತ್ತಿದೆ. ನಡೆದ ಎಲ್ಲ ಪ್ರಕರಣಗಳೂ ವರದಿಯಾಗುವುದಿಲ್ಲ.

ರಾಷ್ಟ್ರೀಯ ಕುಟುಂಬ ಆರೋಗ್ಯ ವರದಿ (2019–2021) ಯಂತೆ 18 ರಿಂದ 49ರ ವಯೋಮಾನದ 30% ವಿವಾಹಿತ ಮಹಿಳೆಯರು ಕೌಟುಂಬಿಕ ದೈಹಿಕ ಹಿಂಸೆ ಮತ್ತು ಲೈಂಗಿಕ ಹಿಂಸೆಗಳನ್ನು ಅನುಭವಿಸುತ್ತಾರೆ. ಇವುಗಳನ್ನು ಎದುರಿಸುವ 87% ವಿವಾಹಿತ ಮಹಿಳೆಯರು ಅದರ ವಿರುದ್ಧ ಯಾವುದೇ ರೀತಿಯ ಸಹಾಯಕ್ಕಾಗಿ ಕೇಳುವುದಿಲ್ಲ. ರಾಷ್ಟ್ರೀಯ ಮಹಿಳಾ ಆಯೋಗದ ಪ್ರಕಾರ 20–21 ರಲ್ಲಿ ಇಂತಹ ದೌರ್ಜನ್ಯಗಳಲ್ಲಿ 25.09% ಏರಿಕೆಯಾಗಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಕೌಟುಂಬಿಕ ದೌರ್ಜನ್ಯಗಳು ನಡೆದಿವೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳದ ಪ್ರಮಾಣದಲ್ಲಿ 40.4% ಹೆಚ್ಚಳವಾಗಿದೆ. 2022 ರಲ್ಲಿ ಕರ್ನಾಟಕದಲ್ಲಿ ಕೇವಲ 43 ಪ್ರಕರಣಗಳು ದಾಖಲಾಗಿವೆ. ಸಮಾಜದ, ಸಹೋದ್ಯೋಗಿಗಳ, ಕುಟುಂಬದ ಎದುರು ಅವಮಾನಗೊಳ್ಳುವ ಭಯದಲ್ಲಿ ದೂರು ದಾಖಲಾಗುವ ಪ್ರಮಾಣ ಬಹಳ ಕಡಿಮೆಯೇ ಇರುತ್ತದೆ. ಕರ್ನಾಟಕದಲ್ಲಿ 2023ರಲ್ಲಿ 176 ಅತ್ಯಾಚಾರದ ಪ್ರಕರಣಗಳು, 1135 ಮಾನಭಂಗ ಪ್ರಯತ್ನ, ಮಹಿಳೆಯರ ಘನತೆಗೆ ಕುಂದುಂಟು ಮಾಡುವ 60 ಕೃತ್ಯಗಳು, 25 ವರದಕ್ಷಿಣೆ ಕಾರಣದ ಸಾವುಗಳು, 696 ಗಂಡ ಮತ್ತು ಆತನ ಕುಟುಂಬದವರಿಂದ ಹಿಂಸೆ, 161 ಕಾನೂನುಬಾಹಿರ ಸಾಗಾಣಿಕೆ, 1007 ವರದಕ್ಷಿಣೆ ನಿಷೇಧ ಕಾಯ್ದೆಯನ್ವಯದ ದೂರುಗಳು ದಾಖಲಾಗಿವೆ.

2023ರಲ್ಲಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ 3260 ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳ ಪ್ರಕರಣಗಳು ದಾಖಲಾಗಿವೆ. ದಾಖಲಾದ 631 ಪ್ರಕರಣಗಳಲ್ಲಿ 560 ಪೋಕ್ಸೋ ಅಡಿಯಲ್ಲಿ ದಾಖಲಾಗಿವೆ, 2024ರ ಸೆಪ್ಟೆಂಬರ್ ವರೆಗೆ ಬೆಂಗಳೂರಿನಲ್ಲಿ ಮಾತ್ರವೇ 131 ಅತ್ಯಾಚಾರದ ಪ್ರಕರಣಗಳು ದಾಖಲಾಗಿವೆ ಎನ್ನುತ್ತವೆ ಪೋಲೀಸ್ ಮೂಲಗಳು. ಶಿಕ್ಷೆಯ ಪ್ರಮಾಣದಲ್ಲಿ ಯಾವುದೇ ರೀತಿಯ ಸುಧಾರಣೆ ಕಂಡು ಬರುತ್ತಿಲ್ಲ. ಅತ್ಯಾಚಾರದಂಥಹ ಹೀನ್ಯಕೃತ್ಯಗಳಲ್ಲಿಯೂ ಇದು ಕೇವಲ 2.56% ಇದೆ ಎಂದು ಎನ್.ಸಿ.ಆರ್.ಬಿ. ದಾಖಲಿಸಿದೆ.



ಕರ್ನಾಟಕದಲ್ಲಿ 2022ರಲ್ಲಿ ದಾಖಲಾದ 1624 ಪ್ರಕರಣಗಳಲ್ಲಿ ಕೇವಲ 6ರಲ್ಲಿ ಶಿಕ್ಷೆ, 74ರಲ್ಲಿ ಬಿಡುಗಡೆ, 298 ಪ್ರಕರಣಗಳು ತನಿಖೆಯಲ್ಲಿ, 1037 ನ್ಯಾಯಾಲಯದಲ್ಲಿ ಇವೆ. ರಾಜ್ಯ ಅಪರಾಧಗಳ ಬ್ಯೂರೋ ಪ್ರಕಾರ ಜನವರಿ 2024ರಿಂದ ಸೆಪ್ಟೆಂಬರ್ ವರೆಗೆ ದಾಖಲಾದ ಪ್ರಕರಣಗಳಲ್ಲಿ 300 ಪ್ರಕರಣಗಳಲ್ಲಿ ಅಪರಾಧಿಗಳು ನೊಂದವರ ಪರಿಚಯಸ್ಥರೇ. ಮಹಿಳೆಯರು ಏಕಕಾಲದಲ್ಲಿ ದೈಹಿಕ, ಮಾನಸಿಕ, ಭಾವನಾತ್ಮಕವಾಗಿ, ಲಿಂಗ,ಜಾತಿ ಧರ್ಮ ಕೋಮುಗಳ ನೆಲೆಯಲ್ಲಿ ದೌರ್ಜನ್ಯಗಳನ್ನು ಎದುರಿಸುತ್ತಾರೆ. ಬೆಳಕಿಗೆ ಬರುವ ಪ್ರಕರಣಗಳಿಗಿಂತ ಮೌನ ಗರ್ಭದಲ್ಲಿ ಹುಗಿದು ಹೋಗುವ ಪ್ರಕರಣಗಳೇ ಹೆಚ್ಚು. ಸಮಾಜದಲ್ಲಿ ಆಳವಾಗಿ ಬೇರೂರಿರುವ ಮಹಿಳಾ ಸಮಾನತೆಯ ಕಲ್ಪನೆಯನ್ನೇ ನಿರಾಕರಿಸುವ ಪಿತೃಪ್ರಧಾನ ಮೌಲ್ಯಗಳು, ಪುರುಷ ಶ್ರೇಷ್ಠತೆಯನ್ನು ಬಿಂಬಿಸುವ ಮನುವಾದೀ ಸಿದ್ಧಾಂತದ ಮೇಲುಗೈ, ಆರ್ಥಿಕ ಅವಲಂಬನೆ, ಬದುಕಿನ ಅಭದ್ರತೆ, ಸಮಾಜದ ಕಟ್ಟುಪಾಡುಗಳು, ಇವು ಮೊದಲ ಕಾರಣಗಳು.

ಇನ್ನು ವ್ಯವಸ್ಥೆಯ ಭಾಗವಾಗಿ ನಿಧಾನ ಮತ್ತು ನಿರ್ಲಕ್ಷ್ಯದ ತನಿಖಾ ವ್ಯವಸ್ಥೆ, ಕಾರ್ಯಾಂಗ, ಶಾಸಕಾಂಗಗಳ ಜೊತೆ ನ್ಯಾಯಾಂಗದಲ್ಲಿಯೂ ಎದ್ದು ಕಾಣುತ್ತಿರುವ ರೋಗಗ್ರಸ್ಥ ಮನಃಸ್ಥಿತಿ, ಬಲಾಢ್ಯರು, ಅಧಿಕಾರ ಕೇಂದ್ರಗಳಲ್ಲಿ ಇರುವವರು ತಮ್ಮ ಸ್ಥಾನಬಲದಿಂದಲೇ ಒಡ್ಡುವ ಬೆದರಿಕೆಗಳು ಒಂದೆಡೆಯಾದರೆ, ಅಗತ್ಯ ಸಿಬ್ಬಂದಿಗಳ ಕೊರತೆ, ಇರುವವರಿಗೆ ಲಿಂಗಸಂವೇದನೆಯನ್ನು ಮೂಡಿಸುವ ತರಬೇತಿಗಳಿಲ್ಲದ ಕೊರತೆಗಳನ್ನು ಗುರುತಿಸಬೇಕು. ಇವೆಲ್ಲವುಗಳನ್ನು ಸಮಗ್ರವಾಗಿ ಪರಿಶೀಲಿಸಿ ದೀರ್ಘಕಾಲಿಕ ಮತ್ತು ತಕ್ಷಣದ ಕ್ರಮಗಳಿಗಾಗಿ ಡಿಸೆಂಬರ್ 29–31ರ ವರೆಗೆ ನಡೆದ ಸಿ.ಪಿ.ಐ.(ಎಂ) ರಾಜ್ಯ 24ನೇ ಸಮ್ಮೇಳನವು ಒತ್ತಾಯಿಸುತ್ತದೆ.

ನಿರ್ಮೂಲನೋಪಾಯಗಳು:

- ಹೋರಾಟಗಳ ಮೂಲಕ ಪಡೆದ ಎಲ್ಲ ಮಹಿಳಾ ಪರ ಕಾನೂನುಗಳ ಸಮರ್ಪಕ ಜಾರಿಗೆ ಕಟ್ಟು ನಿಟ್ಟಿನ ಕ್ರಮ.
- ನ್ಯಾಯದಾನದ ದಾರಿಯಲ್ಲಿನ ಅಡ್ಡಿ ಆತಂಕಗಳನ್ನು ನಿವಾರಿಸಲು ಎಲ್ಲ ಹಂತಗಳಲ್ಲಿ ಲಿಂಗ ಸಂವೇದನಾ ತರಬೇತಿಗಳು.
- ನ್ಯಾಯಮೂರ್ತಿ ವರ್ಮಾ ಸಮಿತಿಯ ಶಿಫಾರಸುಗಳ ಜಾರಿ ಹಾಗೂ ಉಗ್ರಪ್ಪ ಸಮಿತಿಯ ವರದಿಯ ಅಂಗೀಕಾರ.
- ನ್ಯಾಯಾಲಯಗಳು, ಪೋಲೀಸ್ ಇಲಾಖೆ, ಮತ್ತು ಇತರ ಮಹಿಳಾಪರ ಕಾನೂನುಗಳ ಜಾರಿಗೆ ಅಗತ್ಯವಾದ ಸಿಬ್ಬಂದಿ ನೇಮಕ, ಸುವ್ಯವಸ್ಥಿತ ಸೌಲಭ್ಯಗಳ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಬಾರದು.
- ವಿವಾಹ ಸಂಬಂಧದಲ್ಲಿಯೂ ನಡೆಯುವ ಅತ್ಯಾಚಾರವನ್ನು ಅಪರಾಧವನ್ನಾಗಿ ಪರಿಗಣಿಸಬೇಕು.
- ಲಿಂಗ ಪತ್ತೆ ಭ್ರೂಣಹತ್ಯೆ, ಬಾಲ್ಯ ವಿವಾಹ, ವರದಕ್ಷಿಣೆ ಪದ್ಧತಿಗಳನ್ನು ನಿಷೇಧಿಸುವ ಕಾನೂನುಗಳ ಸಮರ್ಪಕ ಜಾರಿ.
- ಕುಟುಂಬದ ಪ್ರಜಾಪ್ರಭುತ್ವೀಕರಣದತ್ತ ಒತ್ತು ನೀಡುತ್ತ ಸಮಾನತೆಯ ಕಲ್ಪನೆಯನ್ನು ಬಿತ್ತುವ ಕ್ರಮಗಳು.
- ಮಹಿಳಾ ಶಿಕ್ಷಣಕ್ಕೆ ಪ್ರಾಶಸ್ತ್ಯ, ಎಲ್ಲ ಕಡೆಗೂ ಸಮಾನ ಅವಕಾಶಗಳ ಮೂಲಕ ಸಮಾನತೆಯ ಕಲ್ಪನೆಯನ್ನು ಸಾಕಾರಗೊಳಿಸುವುದು.
- ಲೈಂಗಿಕ ಕಿರುಕುಳ ತಡೆ ಸಮಿತಿಗಳ ರಚನೆ ಮತ್ತು ಸಮರ್ಪಕ ಕಾರ್ಯನಿರ್ವಹಣೆಗೆ ಒತ್ತು.
- ಸಾಕ್ಷಿರಕ್ಷಣೆ ಕಾನೂನು ರಚಿಸಲು ಒತ್ತಾಯಿಸಿ ಸಾಕ್ಷಿಗಳಿಗೆ ಸೂಕ್ತ ರಕ್ಷಣೆ ಮತ್ತು ಸಾಕ್ಷಿ ನಾಶ ಮಾಡುವವರಿಗೆ ಉಗ್ರಶಿಕ್ಷೆಗೆ ಒತ್ತಾಯಿಸುವುದು.

ನಿರ್ಣಯ ಮಂಡನೆ: **ಮೀನಾಕ್ಷಿ ಬಾಳಿ**
ಅನುಮೋದನೆ: **ಕೆ.ಜಿ. ವೀರೇಶ್**

ಕನ್ನಡ ವಿಶ್ವ ವಿದ್ಯಾಲಯದ ಉಳಿವಿಗಾಗಿ, ಆರ್ಥಿಕ ಸಂಪನ್ಮೂಲದ ನೆರವು ನೀಡಬೇಕೆಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ಸಿಪಿಐ(ಎಂ) 24 ನೇ ರಾಜ್ಯ ಸಮ್ಮೇಳನದ ಒತ್ತಾಯ ಮತ್ತು ಅದಕ್ಕಾಗಿ ನಡೆಯಲಿರುವ ಹೋರಾಟಕ್ಕೆ ಬೆಂಬಲಿಸಿ ನಿರ್ಣಯ

ಕನ್ನಡ ವಿಶ್ವವಿದ್ಯಾಯವು ಕರ್ನಾಟಕದ, ಕನ್ನಡಿಗರ ಮತ್ತು ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಯ ಕೀರ್ತಿಯ ಮುಕುಟ. ದೇಶದಲ್ಲೇ ಅಪರೂಪವಾದ ಸಂಶೋಧನಾ ವಿಶ್ವವಿದ್ಯಾಲಯ ಕನ್ನಡ ವಿಶ್ವವಿದ್ಯಾಲಯವಾಗಿದೆ. ಕನ್ನಡಿಗರ ಪ್ರಜ್ಞೆಯನ್ನು, ವಿಶ್ವ ಪ್ರಜ್ಞೆಯಾಗಿಸುವತ್ತ, ತನ್ನ ಸತ್ವದೊಡನೆ ವಿಶ್ವ ಪ್ರಜ್ಞೆಯಾಗಿ ಆಡಳಿತ ನಡೆಸಬೇಕೆಂಬ ಮಹತ್ವದ ಗುರಿಗಾಗಿ ಕನ್ನಡ ವಿಶ್ವ ವಿದ್ಯಾಲಯ ಸ್ಥಾಪಿತವಾಯಿತು.

ಏಳು ನೂರು ಎಕರೆಗಳಷ್ಟು ವಿಸ್ತಾರವಾದ ಹಸಿರು ಪರಿಸರದ ನಡುವೆ ಈ ವಿಶ್ವವಿದ್ಯಾಲಯ ಸ್ಥಾಪಿತವಾಗಿದೆ. ಇದಕ್ಕೆ ಹೊಂದಿಕೊಂಡೇ ವಿಶ್ವ ವಿಖ್ಯಾತ ಐತಿಹಾಸಿಕ ಸ್ಥಳ ಹಂಪಿ ಇದೆ. ಜ್ಞಾನವನ್ನು ಹಂಚುವುದರ ಜೊತೆಗೆ ಪ್ರಧಾನವಾಗಿ ಜ್ಞಾನವನ್ನು ಸೃಷ್ಟಿಸುವ ಮಹತ್ವದ ಗುರಿಯೊಂದಿಗೆ ಕಳೆದ 32 ವರ್ಷಗಳಿಂದ ತನ್ನ ಮಹತ್ತರ ಸಾಧನೆಗಾಗಿಯೇ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಕಾಯಕ ನಿರ್ವಹಿಸುತ್ತಿದೆ. ಕನ್ನಡ ವಿಶ್ವವಿದ್ಯಾಲಯವನ್ನು ನೋಡದೆ, ಕನ್ನಡ ನಾಡಿನ ಯಾತ್ರೆ ಪೂರ್ಣವಾಗದು ಎಂಬಂತೆ ರೂಪಗೊಳ್ಳುತ್ತಿರುವ ಮತ್ತು ರೂಪಗೊಳ್ಳಬೇಕಾದ ಸಂಸ್ಥೆ ಕನ್ನಡ ವಿಶ್ವವಿದ್ಯಾಲಯ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಸಾವಿರಾರು ವಿದ್ಯಾರ್ಥಿಗಳು ಸಹ ಈಗಾಗಲೇ ಕನ್ನಡ ವಿಶ್ವ ವಿದ್ಯಾಲಯದಲ್ಲಿ ಅಧ್ಯಯನ ಮಾಡಿದ್ದಾರೆ ಮತ್ತು ಈಗಲೂ ಮಾಡುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ದಿನಾಂಕ 29.09.1992 ರಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್.ಬಂಗಾರಪ್ಪ ಇವರು, ಅಂದಿನ ಕುಲಪತಿಗಳಾಗಿದ್ದ ಪ್ರೊ.ಚಂದ್ರಶೇಖರ ಕಂಬಾರ ಇವರ ಅಧ್ಯಕ್ಷತೆಯಲ್ಲಿ ಶಿಲಾನ್ಯಾಸ ನೆರವೇರಿಸಿದ್ದರು. ಮತ್ತು ಕನ್ನಡ, ಕನ್ನಡಿಗರ ಪ್ರಜ್ಞೆಯು ವಿಶ್ವ ಪ್ರಜ್ಞೆಯಾಗಿ ಬೆಳೆಯಲಿ ಎಂದು ಹಾರೈಸಿದ್ದರು.

ಅಕ್ರಮ ಗಣಿಗಾರಿಕೆಯ ಧೂಳು ಕನ್ನಡ ವಿಶ್ವವಿದ್ಯಾಲಯ ಭೂಮಿಯನ್ನು ಕಬಳಿಸಲು ಪ್ರಯತ್ನಿಸಿ ವಿಫಲವಾದ ನಂತರ, ಕನ್ನಡ ವಿಶ್ವವಿದ್ಯಾಲಯವನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳುವ ಮೂಲಕ ಮತ್ತೆ ಕಬಳಿಸುವ ಪ್ರಯತ್ನವು ಕಳೆದ 10–12 ವರ್ಷಗಳಿಂದ ಯೋಜನಾಬದ್ಧವಾಗಿ ನಡೆದಿದೆ.

ಇದರ ಫಲವಾಗಿ ಕನ್ನಡ ವಿಶ್ವವಿದ್ಯಾಲಯವು ಇಂದು ಅನೇಕ ರೀತಿಯ ಆರ್ಥಿಕ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಎದುರಿಸುತ್ತಿದೆ. ತಾತ್ಕಾಲಿಕ ಬೋಧಕ ನೌಕರರಿಗೆ, ಬೋಧಕೇತರ ಹಾಗೂ ಹೊರಗುತ್ತಿಗೆ ಕಾರ್ಮಿಕರಿಗೆ ಕಳೆದ 8 ತಿಂಗಳಿಂದ ವೇತನವನ್ನು ನೀಡಿಲ್ಲ. ಬಹುತೇಕ ಅಧ್ಯಯನ ವಿಭಾಗಗಳಲ್ಲಿ ನಿವೃತ್ತಿ ಬಳಿಕ ನೇಮಕಾತಿ ಇಲ್ಲದೇ ಅಧ್ಯಾಪಕರು, ಸಿಬ್ಬಂದಿಗಳ ಕೊರತೆಯಿಂದ ದುಃಸ್ಥಿತಿ ಎದುರಿಸುತ್ತಿದೆ. ಕಮಲಾಪುರ ಪುರಸಭೆಗೆ ತೆರಿಗೆ ಕಟ್ಟದೇ ಕುಡಿಯುವ ನೀರಿನ ಸಮರ್ಪಕ ಸರಬರಾಜು ಇಲ್ಲದಂತಾಗಿದೆ. ವಿದ್ಯುತ್ ಬಿಲ್ ಕಟ್ಟದೇ ಮಾನ ಹರಾಜು ಮಾಡಿಕೊಳ್ಳುವ ಪರಿಸ್ಥಿತಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಿದೆ.

2024 ಅಕ್ಟೋಬರ್ ತಿಂಗಳಲ್ಲಿ 47 ಜನ ಹೊರಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ಹೊರಹಾಕಲಾಗಿತ್ತು. ಕಳೆದ 15–20 ತಿಂಗಳಿಂದ ಹೊರಗುತ್ತಿಗೆಯಲ್ಲಿ ದುಡಿಯುತ್ತಿದ್ದ ಈ ಕಾರ್ಮಿಕರ ಪರವಾಗಿ ನಾವು ಹೋರಾಟ ಮಾಡಿದ ಕಾರಣಕ್ಕಾಗಿ ಇವರನ್ನು ಮತ್ತೆ ಮುಂದುವರಿಸಲಾಗಿದೆ.

ಕನ್ನಡ ವಿಶ್ವ ವಿದ್ಯಾಲಯವನ್ನು ಮುಚ್ಚುವ ಷಡ್ಯಂತ್ರದ ಫಲವಾಗಿ ಇಂದು ಆರ್ಥಿಕ ಸಂಕಷ್ಟವನ್ನು ಕನ್ನಡ ವಿಶ್ವವಿದ್ಯಾಲಯ ಎದುರಿಸುವಂತಾಗಿದೆ ಎಂಬುದು ಸಿಪಿಐ(ಎಂ) ಅಭಿಪ್ರಾಯವಾಗಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಉಳಿಸುವ, ಸಂರಕ್ಷಿಸುವ ಜವಾಬ್ದಾರಿ ಕರ್ನಾಟಕ ರಾಜ್ಯ ಸರಕಾರದ ಕರ್ತವ್ಯವಾಗಿದೆ. ಅದು ನಮ್ಮ ಕನ್ನಡದ ಅಸ್ಮಿತೆ. ಕೂಡಲೇ ರಾಜ್ಯ ಸರಕಾರ ಕನ್ನಡ ವಿಶ್ವವಿದ್ಯಾಲಯದ ಅಗತ್ಯಕ್ಕೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಬೇಕೆಂದು ತುಮಕೂರಿನಲ್ಲಿ ನಡೆಯುತ್ತಿರುವ ಸಿಪಿಐ(ಎ) 24 ನೇ ರಾಜ್ಯ ಸಮ್ಮೇಳನವು ಆಗ್ರಹಿಸುತ್ತದೆ. ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನೂರಾರು ಕೋಟಿ ನೀಡುವ ಸರ್ಕಾರ ಕನ್ನಡ ವಿ.ವಿ.ಗೆ ಕನಿಷ್ಠ 10 ಕೋಟಿಯಾದರೂ ತಕ್ಷಣ ನೀಡಬೇಕೆಂದು ಒತ್ತಾಯಿಸುತ್ತದೆ.

ಇದಕ್ಕಾಗಿ ಬಜೆಟ್ ಪೂರ್ವದಲ್ಲಿ ರಾಜ್ಯದಲ್ಲಿ ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾಹಿತಿಗಳು, ಸಾಮಾಜಿಕ ಕ್ರಿಯಾಶೀಲರು ನಡೆಸಲಿರುವ ಹೋರಾಟವನ್ನು ಸಿಪಿಐ(ಎಂ) ಬೆಂಬಲಿಸುತ್ತದೆ.

ಮಂಡನೆ: **ಎಂ.ಜಂಬಯ್ಯ ನಾಯಕ್**
ಅನುಮೋದನೆ: **ಕಮಲ ತುಮಕೂರು**

ಬಿಜೆಪಿಗೆ ಲಾಡ್‌ಕೀ–ಲಾಡ್‌ಲೀ ಯೋಜನೆಗಳು ಓಕೆಯಾದರೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಯಾಕೆ ಬೇಡ?

ಎಲ್ಲ ಫ್ಯಾಸಿಸ್ಟ್ ತೆರನ ಸರ್ಕಾರಗಳ ಗುರಿಯೂ ಜನರ ನಿಶ್ಶಕ್ತೀಕರಣವೇ ಆಗಿರುತ್ತದೆ. ಮೋದಿ ಸರ್ಕಾರವೂ ಇದಕ್ಕೆ ಹೊರತಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗ–MGNREGA) ಯೋಜನೆಯು ಪ್ರತಿ ಗ್ರಾಮೀಣ ಕುಟುಂಬದ ಒಬ್ಬ ಸದಸ್ಯನಿಗೆ ವರ್ಷಕ್ಕೆ ಗರಿಷ್ಠ 100 ದಿನಗಳ ಉದ್ಯೋಗ ನೀಡುವ ಭರವಸೆಯಿಂದ ಕೂಡಿದ ಒಂದು ಬೇಡಿಕೆ–ಚಾಲಿತ ಯೋಜನೆ. ಒಂದು ಸೀಮಿತ ಅರ್ಥದಲ್ಲಿ ಅದು ಜನರಿಗೆ ಉದ್ಯೋಗದ ಹಕ್ಕನ್ನು ನೀಡಿದೆ. ಎಲ್ಲರಿಗೂ ಅಲ್ಲದಿದ್ದರೂ ಮತ್ತು ಒಬ್ಬ ವ್ಯಕ್ತಿಯು ಬಯಸಿದಷ್ಟು ದಿನಗಳವರೆಗೆ ಅಲ್ಲದಿದ್ದರೂ, ಅದು ಒಂದು ಹಕ್ಕು ಎಂಬುದಂತೂ ಹೌದು. ಈ ಹಕ್ಕು ನವ ಉದಾರವಾದದ ತರ್ಕಕ್ಕೆ ವಿರುದ್ಧವಾಗಿದ್ದರೂ ಸಹ, ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಯುಪಿಎ ಸರ್ಕಾರವು ಎಡ ಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದ ಅವಧಿಯಲ್ಲಿ ಎಡ ಪಕ್ಷಗಳ ಒತ್ತಡದಿಂದಾಗಿ ಜಾರಿಗೆ ಬಂತು. ಆದಾಗ್ಯೂ, ಅಂದಿನಿಂದಲೂ ಒಂದಲ್ಲ ಒಂದು ನೆಪದಲ್ಲಿ ಈ ಯೋಜನೆಯನ್ನು ಬುಡಮೇಲು ಮಾಡುವ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ಪ್ರಸ್ತುತ ಬಿಜೆಪಿಯ ಫ್ಯಾಸಿಸ್ಟ್ ತೆರನ ಸರ್ಕಾರದ ಅಡಿಯಲ್ಲಿ ಈ ಪ್ರಯತ್ನವು ಒಂದು ಪರಾಕಾಷ್ಠೆಯನ್ನು ತಲುಪಿದೆ. ಈ ಯೋಜನೆಗೆ ವಿರೋಧವನ್ನು ಸ್ವತಃ ಪ್ರಧಾನ ಮಂತ್ರಿಯೇ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯೂ ಇತರ ರಾಜಕೀಯ ಪಕ್ಷಗಳಂತೆಯೇ ಮಹಿಳೆಯರ ಮತಗಳನ್ನು ಪಡೆಯಲು ಅವರಿಗೆ ನಗದು ವರ್ಗಾವಣೆ ಮಾಡಲು ಸಿದ್ಧವಾಗಿಯೇ ಇದೆ. ವಾಸ್ತವವಾಗಿ ಈ ವರ್ಗಾವಣೆಗಳು ಇತ್ತೀಚಿನ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟದ ಗೆಲುವನ್ನು ಖಾತ್ರಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಭಾವಿಸಲಾಗಿದೆ. ಆದಾಗ್ಯೂ, ಅದು ಉದ್ಯೋಗ ಖಾತ್ರಿ ಯೋಜನೆಯನ್ನು ನಿರ್ನಾಮ ಮಾಡಲು ಪ್ರಯತ್ನಿಸುತ್ತಿದೆ. ಈ ಎರಡು ಯೋಜನೆಗಳ ನಡುವಿನ ಮೂಲಭೂತ ವ್ಯತ್ಯಾಸವೆಂದರೆ, ನಗದು ವರ್ಗಾವಣೆಯು ಒಂದು ರೀತಿಯ ದಾನವಾಗಿದ್ದು, ಅದನ್ನು ಸ್ವೀಕರಿಸಿದವರು ಕೃತಜ್ಞರಾಗಿರಬೇಕು ಎಂದು ಭಾವಿಸಲಾಗುತ್ತದೆ. ಆದರೆ ಉದ್ಯೋಗ ಖಾತ್ರಿ ಯೋಜನೆಯು ಅದರ ಫಲಾನುಭವಿಗೆ ಒಂದು ರೀತಿಯ ಉದ್ಯೋಗದ ಹಕ್ಕನ್ನು ನೀಡುತ್ತದೆ. ಯೋಜನೆಯ ಫಲಾನುಭವಿಯು ತಾನು ಮಾಡಿದ ಕೆಲಸಕ್ಕೆ ಪ್ರತಿಯಾಗಿ ಕೂಲಿ ಪಡೆಯುತ್ತಾನೆ. ಇಲ್ಲಿ ಉಪಕಾರ–ಕೃತಜ್ಞತೆಯ ಪ್ರಶ್ನೆಯೇ ಇಲ್ಲ. ಫಲಾನುಭವಿಗೆ ಲಭಿಸುವ ಉದ್ಯೋಗದ ಈ ಹಕ್ಕು, ಅವನ ಪೌರತ್ವಕ್ಕೆ ಒಂದು ಘನತೆಯನ್ನು ಒದಗಿಸುತ್ತದೆ. ಈ ಅಂಶವು ಬಿಜೆಪಿಯನ್ನು ಕೆರಳಿಸುತ್ತದೆ. ಉದ್ಯೋಗ ಖಾತ್ರಿ ಯೋಜನೆಯು ಸಬಲೀಕರಣದ ಒಂದು ರೂಪವಾಗಿದೆ. ನಗದು ವರ್ಗಾವಣೆಯ ಕ್ರಮವು ಫಲಾನುಭವಿಗೆ ಉಪಯುಕ್ತವಾಗಿದ್ದರೂ, ಸರ್ಕಾರ ಬಯಸಿದಲ್ಲಿ ಅದನ್ನು ಯಾವುದೇ ಕ್ಷಣದಲ್ಲಿ ನಿಲ್ಲಿಸಬಹುದು. ಫ್ಯಾಸಿಸ್ಟ್ ತೆರನ ಸಂಘಟನೆಗಳು ಜನರನ್ನು ನಿಶ್ಶಕ್ತಗೊಳಿಸಲು ಸದಾ ಪ್ರಯತ್ನಿಸುತ್ತವೆ. ಹಾಗಾಗಿಯೇ ಉದ್ಯೋಗ ಖಾತ್ರಿ ಯೋಜನೆಯ ದಾಳಿಗೆ ಗುರಿಯಾಗುತ್ತದೆ.

ಯುಪಿಎ–1 ಸರಕಾರದ ಮನರೇಗ ಯೋಜನೆಯನ್ನು ಬಿಜೆಪಿ ಮತ್ತು ಸ್ವತಃ ಪ್ರಧಾನ ಮಂತ್ರಿಗಳೇ ವಿರೋಧಿಸಿದ್ದರು, ಆದ್ದರಿಂದ ಅದನ್ನು ನಿರ್ನಾಮಗೊಳಿಸಲು ಒಂದಿಲ್ಲೊಂದು ರೀತಿಯಲ್ಲಿ ಪ್ರಯತ್ನಿಸಲಾಗುತ್ತಿದೆ. ಆದರೆ ಅದೇ ಬಿಜೆಪಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ಚುನಾವಣೆಗಳಲ್ಲಿ ಮಹಿಳೆಯರ ಮತ ಪಡೆಯಲು ಲಾಡ್ಲೀ ಬಹನಾ–ಲಾಡ್ಕೀ ಬಹೀಣ್ ಯೋಜನೆಯಂತಹ ನಗದು ವರ್ಗಾವಣೆ ಯೋಜನೆಗಳನ್ನು ಪ್ರಕಟಿಸಿತು, ಅದರ ಪ್ರಯೋಜನವನ್ನೂ ಪಡೆಯಿತು. ಏಕೆ? ಏಕೆಂದರೆ ನಗದು ವರ್ಗಾವಣೆ ಯೋಜನೆಗಳು ಉಪಕಾರ ರೂಪದಲ್ಲಿದ್ದು, ಪ್ರತಿಯಾಗಿ ಅದಕ್ಕೆ ಫಲಾನುಭವಿಗಳಿಂದ ಕೃತಜ್ಞತೆ ಬಯಸುತ್ತವೆ. ಮತ್ತು ಸರಕಾರ ಅವನ್ನು ಯಾವಾಗ ಬೇಕಾದರೂ ನಿಲ್ಲಿಸಬಹುದು, ಆದರೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ 'ಮನರೇಗ' ಹಾಗಲ್ಲ, ಅದು ಜನರಿಗೆ ಒಂದು ಹಕ್ಕು ನೀಡುವ ಸಬಲೀಕರಣ ಯೋಜನೆ. ಫ್ಯಾಸಿಸ್ಟ್ ತೆರನ ಮನೋಭಾವದವರಿಗೆ ಇದು ರುಚಿಸುವುದಿಲ್ಲ, ನಗದು ವರ್ಗಾವಣೆಯ ಕೃಪೆಗಾಗಿ ಕೈಯ್ಯೊಡ್ಡುವಂತೆ ಜನರನ್ನು ಬಲವಂತಪಡಿಸುತ್ತಾರೆ. ಏಕೆಂದರೆ ಅವರು ಸದಾ ಜನರನ್ನು ನಿಶ್ಶಕ್ತಗೊಳಿಸಲು ಪ್ರಯತ್ನಿಸುವವರು.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್


ಐದು ವಿಧಗಳಲ್ಲಿ ದಾಳಿ

ಈ ದಾಳಿಯನ್ನು ಐದು ನಿಶ್ಚಿತ ಮಾರ್ಗಗಳಲ್ಲಿ ನಡೆಸಲಾಗುತ್ತಿದೆ. ಮೊದಲನೆಯದು, ನ್ಯಾಷನಲ್ ಮೊಬೈಲ್ ಮಾನಿಟರಿಂಗ್(ರಾಷ್ಟ್ರೀಯ ಸಂಚಾರಿ ಉಸ್ತುವಾರಿ) ವ್ಯವಸ್ಥೆಯ ಮೂಲಕ ಕೆಲಸಗಾರರು ತಾವು ಮಾಡುತ್ತಿರುವ ಕೆಲಸದ ಫೋಟೋಗಳನ್ನು ಅಪ್‌ಲೋಡ್ ಮಾಡಬೇಕು ಮತ್ತು ತಾವು ಕೆಲಸದ ಸ್ಥಳದಲ್ಲಿ ಹಾಜರಿರುವುದನ್ನು ಮತ್ತು ತಮಗೆ ವಹಿಸಿದ ಕೆಲಸವನ್ನು ಮಾಡಲಾಗಿದೆ ಎಂಬುದನ್ನು ಸಾಬೀತುಪಡಿಸಬೇಕು. ಜೊತೆಗೆ, ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯಲ್ಲಿ ತಮ್ಮ ಬ್ಯಾಂಕ್ ಖಾತೆಗಳನ್ನು ತಮ್ಮ ಆಧಾರ್ ಕಾರ್ಡ್‌ಗಳಿಗೆ ಜೋಡಣೆ ಮಾಡುವುದು ಅಗತ್ಯವಾಗುತ್ತದೆ. ಈ ಅವಶ್ಯಕತೆಗಳನ್ನು ಪೂರೈಸುವುದು ಕಾರ್ಮಿಕರಿಗೆ ತುಂಬಾ ಕಷ್ಟಕರವಾಗಿದೆ. ಅದಕ್ಕೆ ಒಂದು ಪ್ರಮುಖ ಕಾರಣವೆಂದರೆ ಗ್ರಾಮೀಣ ಭಾರತದ ಹೆಚ್ಚಿನ ಭಾಗಗಳಲ್ಲಿ ಅಂತರ್ಜಾಲ (ಇಂಟರ್ನೆಟ್) ಲಭ್ಯವಿಲ್ಲದಿರುವುದು. ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯ ಪರಿಣಾಮವಾಗಿ, ಹೆಚ್ಚಿನ ಸಂಖ್ಯೆಯ ನಿರುದ್ಯೋಗಿಗಳು ಉದ್ಯೋಗ ಖಾತ್ರಿ ಯೋಜನೆಯ



ಅಡಿಯಲ್ಲಿ ಕೆಲಸ ಪಡೆಯಲು ಅನರ್ಹರಾಗುತ್ತಾರೆ. ನ್ಯೂಸ್‌ಕ್ಲಿಕ್ ಪತ್ರಿಕೆಯ ವರದಿಯ ಪ್ರಕಾರ, ಆಧಾರ್ ಜೋಡಣೆಯಾಗದ ಕಾರಣದಿಂದಾಗಿ 6.7 ಕೋಟಿ ಕಾರ್ಮಿಕರು ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಪಡೆಯಲು ಅನರ್ಹರಾಗಿದ್ದಾರೆ ಎಂಬುದನ್ನು ಒಂದು ಎನ್‌ಜಿಒ (LibTech India) ಅಂದಾಜು ಮಾಡಿದೆ.

ಎರಡನೆಯ ಮಾರ್ಗವೆಂದರೆ, ಉದ್ಯೋಗ ಖಾತ್ರಿ ಯೋಜನೆಗಾಗಿ ರಾಜ್ಯಗಳಿಗೆ, ವಿಶೇಷವಾಗಿ ವಿರೋಧ ಪಕ್ಷಗಳ ಸರ್ಕಾರಗಳು ಅಧಿಕಾರದಲ್ಲಿರುವ



ರಾಜ್ಯಗಳಿಗೆ, ಯೋಜನೆಯ ಅನುಷ್ಠಾನದಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಮೇಲೆ ಹಣ ಬಿಡುಗಡೆ ಮಾಡುತ್ತಿಲ್ಲ. ಭ್ರಷ್ಟಾಚಾರದ ಆರೋಪದ ಮೇಲೆ ಕಿರುಕುಳ ಅನುಭವಿಸುವ ರಾಜ್ಯಗಳ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ ಮೊದಲ ಸ್ಥಾನದಲ್ಲಿದೆ. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಲು ಸಾಮಾಜಿಕ ಲೆಕ್ಕಪರಿಶೋಧನೆಯ ಒಂದು ವ್ಯವಸ್ಥೆಯೇ ಇದೆ. ರಾಜ್ಯಗಳು ಸಾಮಾಜಿಕ ಲೆಕ್ಕಪರಿಶೋಧನೆಯನ್ನು ನಡೆಸುತ್ತಿಲ್ಲ ಎಂದು ಕೇಂದ್ರ ಸರ್ಕಾರ ಆರೋಪಿಸುತ್ತದೆ. ಆದರೆ ಈ ಸಾಮಾಜಿಕ ಲೆಕ್ಕ ಪರಿಶೋಧನಾ ಘಟಕಗಳಿಗೆ ತಗಲುವ ವೆಚ್ಚವನ್ನು/ಸಂಭಾವನೆಯನ್ನು ಪಾವತಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದ್ದರೂ ಸಹ, ಬಹಳ ದಿನಗಳಿಂದಲೂ ಅದಕ್ಕಾಗಿ ಬೇಕಾಗುವ ಹಣವನ್ನೇ ಬಿಡುಗಡೆ ಮಾಡಿಲ್ಲ. ಅದಲ್ಲದೆ, ರಾಜ್ಯ ಸರ್ಕಾರವು ಒಂದು ವೇಳೆ ತಪ್ಪು ಮಾಡಿದೆ ಎಂದು ಭಾವಿಸಿದರೂ ಸಹ, ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಹಣ ಒದಗಿಸಬೇಕಾದ ಒಂದು ಯೋಜನೆಗೆ ಅದೇ ಕೇಂದ್ರ ಸರ್ಕಾರವೇ ಹಣ ನಿರಾಕರಿಸುವ ಕ್ರಮವು, ರಾಜ್ಯ ಸರ್ಕಾರ ಮಾಡಿದ ಪಾಪಗಳಿಗೆ ಬಡ ಜನರನ್ನು ಶಿಕ್ಷಿಸಿದಂತಾಗುತ್ತದೆ. ಹಾಗಾಗಿ, ಕೇಂದ್ರ ಸರ್ಕಾರವು ಈ ಯೋಜನೆಯನ್ನು ನಿಲ್ಲಿಸಲು ಭ್ರಷ್ಟಾಚಾರವನ್ನು ಒಂದು ನೆಪವಾಗಿ ಬಳಸಿಕೊಳ್ಳುತ್ತಿದೆ.

ಈ ಯೋಜನೆಯನ್ನು ಸ್ಥಗಿತಗೊಳಿಸಲು ಬಳಸಿಕೊಳ್ಳುತ್ತಿರುವ ಮೂರನೇ ಮಾರ್ಗವೆಂದರೆ, ಕೂಲಿ ಕೆಲಸಮಾಡಿದವರಿಗೆ ಕೊಡಬೇಕಾದ ಕೂಲಿಯ ಹಣವನ್ನು ಬಾಕಿ ಉಳಿಸಿಕೊಳ್ಳುವುದು. ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರು ಇತ್ತೀಚೆಗೆ ದೆಹಲಿಯಲ್ಲಿ ಹಮ್ಮಿಕೊಂಡಿದ್ದ ಒಂದು ಪ್ರತಿಭಟನೆಯ ಸಂದರ್ಭದಲ್ಲಿ, ತಾವು ಮಾಡಿದ ಕೆಲಸಕ್ಕೆ ಮೂರು ವರ್ಷಗಳ ನಂತರ ತಮ್ಮ ವೇತನದ ಬಾಕಿಯನ್ನು



ಪಾವತಿಸಲಾಗಿದೆ ಎಂದು ಅನೇಕ ಮಂದಿ ತಮ್ಮ ಅಳಲನ್ನು ತೋಡಿಕೊಂಡರು! ಈ ಉದ್ಯೋಗ ಖಾತ್ರಿ ಕಾಯ್ದೆಯ ನಿಯಮಾಳಿಗಳ ಪ್ರಕಾರ, ಯೋಜನೆಯಡಿಯಲ್ಲಿ ಒಂದು ವೇಳೆ ಕೆಲಸ ಒದಗಿಸದಿದ್ದಲ್ಲಿ ನಿರುದ್ಯೋಗ ಭತ್ಯೆ ನೀಡಬೇಕು ಎಂಬ ನಿಯಮದಂತೆಯೇ ಕೆಲಸ ಮಾಡಿದವರಿಗೆ ಕೊಡಬೇಕಾದ ಕೂಲಿಯನ್ನು ಪಾವತಿಸುವಲ್ಲಿ ವಿಳಂಬವಾದರೆ ಅವರಿಗೆ ಪರಿಹಾರ ನೀಡಬೇಕಾಗುತ್ತದೆ. ಆದರೆ, ನಿರುದ್ಯೋಗ ಭತ್ಯೆಯನ್ನೂ ನೀಡದ ಹಾಗೂ ಕೂಲಿ ಪಾವತಿ ವಿಳಂಬದ ಪರಿಹಾರವನ್ನೂ ಕೊಡದ ಹಲವಾರು ಪ್ರಕರಣಗಳಿವೆ. ಇದು ಕಾನೂನಿನ ಘೋರ ಉಲ್ಲಂಘನೆಯಾಗುತ್ತದೆ. ಆದಾಗ್ಯೂ, ಇಂಥಹ ಉಲ್ಲಂಘನೆಗಳಿಗಾಗಿ ಯಾರಿಗೂ ಈ ವರೆಗೂ ಶಿಕ್ಷೆಯಾಗಿಲ್ಲ. ಹಾಗಾಗಿ, ಕೂಲಿ ಪಾವತಿಯ ವಿಳಂಬ ಮತ್ತು ಪರಿಹಾರದ ನಿರಾಕರಣೆಯ ಪ್ರಕರಣಗಳು ಯೋಜನೆಯಡಿಯಲ್ಲಿ ಕೆಲಸ ಕೇಳುವವರನ್ನು ನಿರುತ್ಸಾಹಗೊಳಿಸುತ್ತವೆ ಮಾತ್ರವಲ್ಲ, ಯೋಜನೆಯನ್ನೂ ದುರ್ಬಲಗೊಳಿಸುತ್ತವೆ.

ಅಸಮರ್ಪಕ ಬಜೆಟ್ ಹಂಚಿಕೆ

ಯೋಜನೆಯನ್ನು ಹಾಳುಗೆಡವುವ ನಾಲ್ಕನೇ ಮಾರ್ಗವೆಂದರೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ಅದಕ್ಕಾಗಿ ಮಾಡುತ್ತಿರುವ ಅಸಮರ್ಪಕ ಹಂಚಿಕೆಗಳೇ. ಪ್ರಾಸಂಗಿಕವಾಗಿ ಹೇಳುವುದಾದರೆ ಕೂಲಿ ಪಾವತಿಯು ತಡವಾಗುತ್ತಿರುವುದಕ್ಕೆ ಅಸಮರ್ಪಕ ಹಂಚಿಕೆಯೇ ಮುಖ್ಯವಾದ ಕಾರಣವಾಗಿದೆ. ಈ ಪ್ರವೃತ್ತಿಯು ಯುಪಿಎ–2 ಸರಕಾರದ ಅವಧಿಯಲ್ಲೂ ಇತ್ತು. ಆಗ ಹಣಕಾಸು ಸಚಿವರಾಗಿದ್ದ ಪಿ. ಚಿದಂಬರಂ ಅವರು ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಗೆ ವರ್ಷ ವರ್ಷವೂ ಕಡಿಮೆ ಅನುದಾನವನ್ನು ನೀಡುತ್ತಿದ್ದರು ಮತ್ತು ಆ ಬಗ್ಗೆ ಕೇಳಿದರೆ, ಇದೊಂದು ಬೇಡಿಕೆ–ಚಾಲಿತ ಯೋಜನೆಯಾಗಿರುವುದರಿಂದ ಅಗತ್ಯವಿದ್ದಲ್ಲಿ ಅದಕ್ಕೆ ಸಾಕಷ್ಟು ಹಣ ಒದಗಿಸಲಾಗುವುದು ಎಂದು ಹೇಳುತ್ತಿದ್ದರು. ಸಮಸ್ಯೆಯೆಂದರೆ, ಅಗತ್ಯ ಉದ್ಭವಿಸಿದಾಗ, ಹಣ ಒದಗಿಸುವ ಪ್ರಕ್ರಿಯೆಯಲ್ಲಿ ಸಾಕಷ್ಟು ಸಮಯ ಕಳೆದುಹೋಗುತ್ತದೆ. ನಂತರ ಅದು ವೇತನ ಪಾವತಿಯಲ್ಲಿ ವಿಳಂಬಕ್ಕೆ ಕಾರಣವಾಗುತ್ತದೆ. ಪ್ರತಿಯಾಗಿ ಇದು ಸೃಷ್ಟಿಸುವ "ನಿರುತ್ಸಾಹಗೊಂಡ ಕೆಲಸಗಾರ ಪರಿಣಾಮ"ವು ಯೋಜನೆಯಡಿಯಲ್ಲಿ ಕೆಲಸಕ್ಕೆ ಬೇಡಿಕೆಯನ್ನು ಕಡಿಮೆ ಮಾಡುತ್ತದೆ. ಬಿಜೆಪಿ ಸರ್ಕಾರವು ಇದನ್ನು ವಿಪರೀತ ಮಟ್ಟಕ್ಕೆ ಕೊಂಡೊಯ್ದಿದೆ.

ಉದ್ಯೋಗ ಖಾತ್ರಿ ಯೋಜನೆಗಾಗಿ 2024–25ರ ಬಜೆಟ್‌ನಲ್ಲಿ 86,000 ಕೋಟಿ ರೂಗಳಷ್ಟು ಹಣವನ್ನು ಒದಗಿಸಲಾಗಿದೆ. ಅದರಲ್ಲಿ ಹಿಂದಿನ ಕೂಲಿಯ ಬಾಕಿಯನ್ನು ಕಳೆದ ನಂತರ ಈ ಮೊತ್ತವು ಸುಮಾರು 60,000 ಕೋಟಿ ರೂ. ಗಳಿಗೆ ಇಳಿಯುತ್ತದೆ. ಇದು ತೀರಾ ಕಡಿಮೆ ಇರುವುದರಿಂದ ವೇತನದ ಬಾಕಿ ಮತ್ತಷ್ಟು ಹೆಚ್ಚುತ್ತದೆ. ಹಾಗಾಗಿ, ನಿರಂತರವಾಗಿ ಮತ್ತು ಶಾಶ್ವತವಾಗಿ ಹೆಚ್ಚುತ್ತಾ ಹೋಗುವ ಪುಟ 15 ಕ್ಕೆ

ಪೆಬ್ರವರಿ 10, 2025 ರಂದು ಹಮ್ಮಿಕೊಂಡಿರುವ ರೈತ–ಕೂಲಿಕಾರರ ಬೃಹತ್ ಪಾದಯಾತ್ರೆ ಹಾಗೂ ಅನಿರ್ದಿಷ್ಟಾವಧಿ ಧರಣಿ ಹೋರಾಟ ಯಶಸ್ವಿಗೊಳಿಸಲು

ಸಿಪಿಐ(ಎಂ) 24 ನೇ ರಾಜ್ಯ ಸಮ್ಮೇಳನದ ಕರೆ

ಮನೆ–ನಿವೇಶನ, ಬಗರ್ ಹುಕುಂ–ಅರಣ್ಯ ಸಾಗುವಳಿ ರೈತ–ಕೂಲಿಕಾರರ ಹಕ್ಕು ರಕ್ಷಣೆಗಾಗಿ, ಬಲವಂತದ ಭೂ ಸ್ವಾಧೀನ ಹಾಗೂ ಭೂ ಸಂಪತ್ತಿನ ಕಾರ್ಪೋರೇಟ್ ಲೂಟಿ ಹಿಮ್ಮೆಟ್ಟಿಸಲು, ಜನ ವಿರೋಧಿ ಕರಾಳ ರಾಜ್ಯ ಕೃಷಿ ಹಾಗೂ ಕಂದಾಯ ಕಾಯ್ದೆಗಳ ರದ್ದತಿಗಾಗಿ ಆಗ್ರಹಿಸಿ ಪೆಬ್ರವರಿ 10, 2025 ರಂದು ಹಮ್ಮಿಕೊಂಡಿರುವ ರೈತ–ಕೂಲಿಕಾರರ ಬೆಂಗಳೂರು ಬೃಹತ್ ಪಾದಯಾತ್ರೆ ಹಾಗೂ ಅನಿರ್ದಿಷ್ಟಾವಧಿ ಧರಣಿ ಹೋರಾಟ ಯಶಸ್ವಿಗೊಳಿಸಲು ಸಿಪಿಐಎಂ 24 ನೇ ರಾಜ್ಯ ಸಮ್ಮೇಳನವು ಕರೆ ನೀಡಿದೆ.

ಭೂಮಿ, ಶ್ರಮ ಮತ್ತು ಬಂಡವಾಳ ಕ್ಷೇತ್ರಗಳಲ್ಲಿ ಮುಂದಿನ ಹಂತದ ನವ ಉದಾರೀಕರಣ ಧೋರಣೆಗಳಿಗೆ ಅನುಸಾರವಾಗಿ ಸಂರಚನಾ ಸುಧಾರಣೆಗಳನ್ನು ದೊಡ್ಡ ಪ್ರಮಾಣದಲ್ಲಿ ಜಾರಿ ಮಾಡುತ್ತಿರುವ ಸ್ವತಂತ್ರ ಭಾರತದ ಅತಿದೊಡ್ಡ ಕಾರ್ಪೊರೇಟ್ ಪರ ಸರ್ಕಾರವಾಗಿರುವ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಅಣತಿಯಂತೆ, ಅತ್ಯಂತ ವೇಗವಾಗಿ ಇಡೀ ದೇಶದಲ್ಲೇ ಕರ್ನಾಟಕವು, ಕಾರ್ಪೊರೇಟ್ ಲೂಟಿಗೆ ಅವಕಾಶ ಮಾಡಿಕೊಡುತ್ತಿದೆ. ಮೇಲಿಂದ ಮೇಲೆ ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶಗಳನ್ನು ಹಮ್ಮಿಕೊಂಡು ರಾಜ್ಯದ ರೈತ–ಕೂಲಿಕಾರರ ಭೂಮಿ ಹಕ್ಕಿಗೆ ಗಂಭೀರ ಧಕ್ಕೆ ಉಂಟುಮಾಡುತ್ತಿದೆ. ಕಾರ್ಪೊರೇಟ್ ಭೂ ಕಬಳಿಕೆಗೆ ಸಂಪೂರ್ಣ ಬೆಂಬಲ ನೀಡುವಂತಹ ಭೂ ಸ್ವಾಧೀನ ಕಾಯ್ದೆಗಳನ್ನು, ಕರಾಳ ರಾಜ್ಯ ಕೃಷಿ ಕಾಯ್ದೆಗಳನ್ನು ಮುಂದುವರೆಸುತ್ತಿದೆ ಮತ್ತು ಕೃಷಿ ಭೂಮಿಯನ್ನು ಸುಲಭವಾಗಿ ಕಾರ್ಪೊರೇಟ್ ಉದ್ಯಮಿಗಳ ವಶಕ್ಕೆ ನೀಡಲು ಭೂ ಕಂದಾಯ ಕಾಯ್ದೆಗಳನ್ನು ಜಾರಿಗೊಳಿಸಲಾಗುತ್ತಿದೆ. ಪ್ರಗತಿಪರ ಭೂ ಸುಧಾರಣಾ ಕಾನೂನು ಜಾರಿಗೆ ದೇಶದಲ್ಲೇ ಹೆಸರಾಗಿದ್ದ ಕರ್ನಾಟಕವು,ಕೇಂದ್ರ ಸರ್ಕಾರದ ಕಾರ್ಪೊರೇಟ್ ಪರ ಭೂ ಸುಧಾರಣಾ ಕ್ರಮಗಳನ್ನು ಜಾರಿ ಮಾಡುವುದರಲ್ಲಿ ಮುಂಚೂಣಿಯಲ್ಲಿರುವುದು ಆತಂಕದ ವಿಷಯವಾಗಿದೆ.

ರಾಜ್ಯ ಸರ್ಕಾರದ ಇಂತಹ ರೈತ–ಕೂಲಿಕಾರರ ವಿರೋಧಿ ಧೋರಣೆಗಳನ್ನು ಹಿಮ್ಮೆಟ್ಟಿಸಲು, ಕರ್ನಾಟಕ ಪ್ರಾಂತ ರೈತ ಸಂಘ (**KPRS**) ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(AIAWU) ರಾಜ್ಯ ಸಮಿತಿಗಳು ಜಂಟಿಯಾಗಿ ಪೆಬ್ರವರಿ 10, 2025 ರಂದು ಆರಂಭಿಸುವ ಬೃಹತ್ ರೈತ–ಕೃಷಿಕೂಲಿಕಾರರ ಪಾದಯಾತ್ರೆಯನ್ನು ಐತಿಹಾಸಿಕ ಹೋರಾಟವಾಗಿ ಪರಿವರ್ತಿಸಲು ಅಗತ್ಯವಾದ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳುವುದಾಗಿ ಸಿಪಿಐ(ಎಂ) 24 ನೇ ರಾಜ್ಯ ಸಮ್ಮೇಳನ ಅತ್ಯಂತ ಕಾಳಜಿಯ ಬದ್ಧತೆಯನ್ನು ವ್ಯಕ್ತಪಡಿಸುತ್ತದೆ.

1991ರ ನಂತರ ಅನುಸರಿಸಿಕೊಂಡು ಬಂದಿರುವ ನವ ಉದಾರವಾದಿ ಆರ್ಥಿಕ ಧೋರಣೆಗಳು ಮತ್ತು ಕೃಷಿ ನೀತಿಗಳ ಫಲವಾಗಿ ಸುಧಾರಣಾ ಪದದ ಅರ್ಥ ಮತ್ತು ವ್ಯಾಖ್ಯಾನವೇ ಪಲ್ಲಟಗೊಂಡಿದೆ. ಭೂ ಹೀನರಿಗೆ, ಕೃಷಿ ಕೂಲಿಕಾರರಿಗೆ, ಬಡರೈತರಿಗೆ ಭೂಮಿ ನೀಡುವುದು ಎಂಬ ಅರ್ಥ ಹಾಗೂ ಪರಿಭಾಷೆಯಾಗಿದ್ದ ಸುಧಾರಣೆ ಎಂಬ ಪದ ಈಗ ಭೂಮಿಯನ್ನು ಕಾರ್ಪೊರೇಟ್ ಸಂಸ್ಥೆಗಳ ಒಡೆತನಕ್ಕೆ ಹಸ್ತಾಂತರಿಸುವುದು ಎಂಬ ಅರ್ಥವನ್ನು ಪಡೆದುಕೊಂಡಿದೆ.

ಈ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು, ಮೋದಿ ಸರ್ಕಾರದ ಕರಾಳ ಕೃಷಿ ಕಾಯ್ದೆಗಳನ್ನು ರಾಜ್ಯದಲ್ಲಿ ಜಾರಿಗೆ ತರಲು ಅನುಕೂಲ ವಾಗುವಂತಹ ಕರ್ನಾಟಕ ರಾಜ್ಯ ಭೂ ಸುಧಾರಣಾ ತಿದ್ದುಪಡಿ ಕಾನೂನು 2020, ಕರ್ನಾಟಕ ಎಪಿಎಂಸಿ ತಿದ್ದುಪಡಿ ಕಾನೂನು 2020 ಹಾಗೂ ಕರ್ನಾಟಕ ಭೂ ಸ್ವಾಧೀನ ಕಾಯ್ದೆ 2019 ಅನ್ನು ರೈತರ ಪ್ರಬಲ ವಿರೋಧದ ನಡುವೆಯೂ ಜಾರಿಗೆ ತಂದಿತ್ತು. ಈ ಮೂಲಕ ಅದೊಂದು ಕಾರ್ಪೊರೇಟ್– ಹಿಂದುತ್ವ ಆಳ್ವಿಕೆಯ ಡಬಲ್ ಇಂಜಿನ್ ಸರ್ಕಾರವೆಂಬುದನ್ನು ತೋರ್ಪಡಿಸಿತು. ಇದಕ್ಕೂ ಮೊದಲು ಪ್ರಗತಿಪರ ಭೂ ಸುಧಾರಣಾ ಕಾಯ್ದೆಗಳನ್ನು ದುರ್ಬಲಗೊಳಿಸಲು ಕರ್ನಾಟಕ ಭೂ ಕಂದಾಯ ತಿದ್ದುಪಡಿ ಕಾಯ್ದೆ 2015, ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಕಾನೂನು 2015, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ 2012 ಕಾನೂನುಗಳನ್ನು ಅಂಗೀಕರಿಸಿತ್ತು. ಇದಲ್ಲದೇ ಲ್ಯಾಂಡ್ ಬ್ಯಾಂಕ್ ಹೆಸರಿನಲ್ಲಿ ರೈತರಿಂದ ಭೂಮಿ ಕಿತ್ತುಕೊಂಡು ಇಟ್ಟುಕೊಳ್ಳುವ ಬೆಳವಣಿಗೆಯೂ ಕೂಡ ನಡೆದಿತ್ತು.



ಇದಲ್ಲದೇ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಕೊಳ್ಳುವುದನ್ನು ಮತ್ತಷ್ಟು ಸರಳ–ಸುಲಭಗೊಳಿಸುವ ಕ್ರಮಗಳನ್ನು ಮೇಲಿಂದ ಮೇಲೆ ಅನುಸರಿಸುತ್ತಾ ಬರಲಾಗಿದೆ. ಕೃಷಿ ವ್ಯಾಖ್ಯಾನವನ್ನು ಕೃಷಿ ಆಧಾರಿತ ಕೈಗಾರಿಕೆಗಳಿಗೆ, ಕಟಾವು ನಂತರದ ಸಂಸ್ಕರಣ ಉದ್ದಿಮೆಗಳಿಗೆ ಅನ್ವಯಿಸಲಾಗಿದೆ. ಭೂ ಮಿತಿ ವಿಸ್ತೀರ್ಣ ಹಾಗೂ ಕೃಷಿ ಭೂಮಿ ಖರೀದಿಯ ಕೃಷಿಯೇತರ ಆದಾಯವನ್ನು ಹೆಚ್ಚಿಸಿದೆ. ಕೃಷಿಕರಲ್ಲದೇ ಇರುವವರು ಕೂಡ ಕೃಷಿ ಭೂಮಿ ಹೊಂದುವ ಅವಕಾಶವನ್ನು ಕಲ್ಪಿಸಲಾಗಿದೆ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ, ಕೇಂದ್ರದ ಜನ ವಿರೋಧಿ ಕಾರ್ಪೊರೇಟ್–ಹಿಂದುತ್ವ ಆಳ್ವಿಕೆಗೆ ಪೂರಕವಾಗಿ ಕೆಲಸ ಮಾಡುತ್ತಿದ್ದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವನ್ನು ಜನ ಅಧಿಕಾರದಿಂದ ಕೆಳಗಿಳಿಸಿದರು. ಆದರೆ ಈಗಿನ ಕಾಂಗ್ರೆಸ್ ಸರ್ಕಾರದಲ್ಲೂ ಅದೇ ಕಾರ್ಪೊರೇಟ್ ಪರ ಭೂ ನೀತಿಯನ್ನು ಅನುಸರಿಸಲಾಗುತ್ತಿದೆ. ಹಿಂದಿನ ಬಿಜೆಪಿ ಸರ್ಕಾರದ ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ರದ್ದುಪಡಿಸಲು ಹಿಂದೇಟು ಹಾಕುತ್ತಿದೆ. ಹೀಗೆ ಕರ್ನಾಟಕವು ಇಡೀ ದೇಶದಲ್ಲೇ ಕಾರ್ಪೊರೇಟ್ ಭೂ ಕಬಳಿಕೆಗೆ ಕೆಂಪು ಹಾಸಿನ ಸ್ವಾಗತ ಕೋರುವ ಮುಂಚೂಣಿ ರಾಜ್ಯವಾಗಿ ಕುಖ್ಯಾತಿ ಗಳಿಸುತ್ತಿದೆ ಎಂದು ನಿರ್ಣಯ ಹೇಳಿದೆ.

ರಾಜ್ಯದಾದ್ಯಂತ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚು ಬಡ ರೈತರು, ಪಾರಂ ನಂ. 50, 53 ಹಾಗೂ 57 ರಲ್ಲಿ ತಮ್ಮ ಬಗರ್ ಹುಕುಂ ಸಾಗುವಳಿ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಸುಮಾರು ಇಪ್ಪತ್ತು ಲಕ್ಷ ಎಕರೆಯಲ್ಲಿ ಈ ಬಡವರು ಸಾಗುವಳಿ ಮಾಡಿಕೊಂಡು ಅತ್ಯಂತ ಕಷ್ಟದ ಜೀವನ ಸಾಗಿಸುತ್ತಿದ್ದಾರೆ. ಈ ರೈತರ ಭೂಮಿ ಹಕ್ಕನ್ನು ಖಾತರಿಗೊಳಿಸಬೇಕಿದ್ದ ಸರ್ಕಾರ, ವಿವಿಧ ರೀತಿಯ ನೆಪಗಳನ್ನು ಮುಂದು ಮಾಡಿ ರಾಜ್ಯದಾದ್ಯಂತ ದೊಡ್ಡ ಪ್ರಮಾಣದಲ್ಲಿ ಒಕ್ಕಲೆಬ್ಬಿಸುತ್ತಿದೆ. ಇಡೀ ರಾಜ್ಯದ ಎಲ್ಲಿಯೂ ಸಕ್ರಮಾತಿ ಸಮಿತಿಗಳನ್ನು ರಚಿಸಿಲ್ಲ. ಆದರೆ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಅರ್ಹ ಮತ್ತು ಅನರ್ಹ ಎಂದು ವಿಂಗಡಿಸಿ ತಹಶಿಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳ, ಜಿಲ್ಲಾಧಿಕಾರಿಗಳ ಹಂತದಲ್ಲೇ, ಬಹುತೇಕ ಸಾಗುವಳಿದಾರರ ಸಕ್ರಮ ಕೋರಿಕೆ ಅರ್ಜಿಗಳನ್ನು ತಿರಸ್ಕರಿಸುವಂತೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ. ಸಕ್ರಮಾತಿ ಸಮಿತಿ ಅಧಿಕಾರವನ್ನು ಕಂದಾಯ ಇಲಾಖೆ ಅಧಿಕಾರಿಗಳು ಚಲಾಯಿಸಿ ಬಗರ್ ಹುಕುಂ ಸಾಗುವಳಿ ಸಕ್ರಮ ಅರ್ಜಿಗಳನ್ನು ಅನರ್ಹ ಎಂದು ತಿರಸ್ಕರಿಸುವುದು ಕರ್ನಾಟಕ ಭೂ ಕಂದಾಯ ಕಾಯ್ದೆಯ 94(ಎ) ಮತ್ತು 94(ಬಿ) ಕಲಂಗಳ ಸ್ಪಷ್ಟ ಉಲ್ಲಂಘನೆಯಾಗಿದೆ ಮತ್ತು ಕಾನೂನು ಬಾಹಿರವಾಗಿದೆ. ಈ ರೀತಿ ಈಗಾಗಲೇ ಸುಮಾರು 2.23 ಲಕ್ಷ ಬಗರ್ ಹುಕುಂ ಸಾಗುವಳಿದಾರರ ಅರ್ಜಿಯನ್ನು ಕಾನೂನುಬಾಹಿರವಾಗಿ ತಿರಸ್ಕರಿಸಲಾಗಿದೆ ಎಂದು ಸ್ವತಃ ಕಂದಾಯ ಸಚಿವರೇ ಇತ್ತೀಚಿನ ವಿಧಾನ ಸಭಾ ಅಧಿವೇಶನದಲ್ಲಿ ಪ್ರಕಟಿಸಿದ್ದಾರೆ.

ಇದರ ಜೊತೆಗೆ ಪಟ್ಟಣ, ಪುರ, ನಗರ, ಮಹಾನಗರ ವ್ಯಾಪ್ತಿಯ ಗಡಿಯಿಂದ ಇಂತಿಷ್ಟು ದೂರ ಬಗರ್ ಹುಕುಂ ಸಾಗುವಳಿದಾರರ ಅರ್ಜಿಯನ್ನು ಮತ್ತು ಸಾಗುವಳಿ ಹಕ್ಕನ್ನು ಪರಿಗಣಿಸಬಾರದು ಎಂಬ ನಿರ್ಬಂಧ, ಗೋಮಾಳ ಮತ್ತಿತರ ವಿಧದ ಸರ್ಕಾರಿ ಭೂಮಿಗಳನ್ನು ಮಂಜೂರು ಮಾಡಲು ಇರುವ ಹಲವು ನಿರ್ಬಂಧಗಳು ಮುಂದುವರೆದಿರುವ ಕಾರಣದಿಂದ ಬಹುತೇಕ ಬಗರ್ ಹುಕುಂ ಸಾಗುವಳಿದಾರರು ಹಕ್ಕು ಪಡೆಯಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ತಂದೊಡ್ಡಲಾಗಿದೆ ಎಂದು ವಿವರಿಸಿದೆ.

ಅಲ್ಲದೇ, ಬಗರ್ ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸಲು ಅರಣ್ಯ ಇಲಾಖೆಯನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ರಾಜ್ಯದಾದ್ಯಂತ ಇರುವ ಲಕ್ಷಾಂತರ ಎಕರೆ ಸರ್ಕಾರಿ ಕಂದಾಯ ಭೂಮಿಗಳನ್ನು ಪರಿಭಾವಿಸಲ್ಪಟ್ಟ ಅರಣ್ಯ ವ್ಯಾಪ್ತಿಗೆ ವರ್ಗಾಯಿಸಲಾಗಿದೆ. ಈ ರೀತಿ ವರ್ಗಾಯಿಸಲ್ಪಟ್ಟ ಭೂಮಿಗಳನ್ನು ಅರಣ್ಯ ಇಲಾಖೆಯೂ ತನ್ನ ಹೆಸರಿಗೆ ಇಂಡೀಕರಣ ಮಾಡಿಸಿಕೊಂಡು ಪೊಲೀಸ್ ರಕ್ಷಣೆಯಲ್ಲಿ ಒಕ್ಕಲೆಬ್ಬಿಸುತ್ತಿರುವುದು ತೀವ್ರ ಗತಿಯಲ್ಲಿ ನಡೆಯುತ್ತಿದೆ. ಇಂತಹ ಯಾವುದೇ ಸಂದರ್ಭದಲ್ಲೂ ರೈತರ ಬಗರ್ ಹುಕುಂ ಸಾಗುವಳಿ ಸಕ್ರಮ ಕೋರಿರುವ ಅರ್ಜಿಗಳನ್ನಾಗಲಿ ಅಥವಾ ಈಗಾಗಲೇ ಮಂಜೂರಾಗಿ ನಮೂದಾಗಿರುವ ಹಕ್ಕು ದಾಖಲೆಗಳ ಕಂದಾಯ ದಾಖಲೆಗಳನ್ನಾಗಲಿ ಪರಿಗಣನೆಗೆ ತೆಗೆದುಕೊಳ್ಳದೇ ರಾತ್ರೋ ರಾತ್ರಿ ಬೃಹತ್ ಜೆಸಿಬಿ ಯಂತ್ರಗಳ ಮೂಲಕ ಫಸಲು ನಾಶ ಪಡಿಸಲಾಗುತ್ತಿದೆ. ಕೋರ್ಟ್ ತೀರ್ಪು, ಅರಣ್ಯ ಕಾಯ್ದೆಗಳ ಕಡೆ ಬೆರಳು ತೋರಿ ಅರಣ್ಯ ಇಲಾಖೆಯ ರೈತ ವಿರೋಧಿ ಕ್ರಮಗಳನ್ನು ಬೆಂಬಲಿಸುತ್ತಿದ್ದಾರೆ.

ರಾಜ್ಯದಾದ್ಯಂತ ಬಗರ್ ಹುಕುಂ ಸಾಗುವಳಿ ರೀತಿಯಲ್ಲೇ ಅರಣ್ಯ ಹಕ್ಕು ಕಾಯ್ದೆ 2006 ರ ಅಡಿಯ ಅರ್ಜಿಗಳು ಕೂಡ ಸುಮಾರು ಎರಡುವರೆ ಲಕ್ಷ ಸಂಖ್ಯೆಯಲ್ಲಿ ಪೆಂಡಿಂಗ್ ಇವೆ. ಬಹಳಷ್ಟು ಅರ್ಜಿಗಳನ್ನು ಅನ್ಯಾಯವಾಗಿ ತಿರಸ್ಕಾರ ಮಾಡಲಾಗಿದೆ. ಗ್ರಾಮ ಅರಣ್ಯ ಸಮಿತಿಗಳಿಂದ ಅನುಮೋದನೆ ಆದ ನಂತರವೂ ಸಹಸ್ರಾರು ಅರ್ಜಿಗಳು ಉಪವಿಭಾಗಾಧಿಕಾರಿಗಳ ಹಂತದಲ್ಲಿ ತಿರಸ್ಕಾರಗೊಂಡಿವೆ. ಸುದೀರ್ಘ ಹೋರಾಟದ ಫಲವಾಗಿ ಈ ಕಾಯ್ದೆ ಜಾರಿಗೆ ಬಂದು ಸುಮಾರು 20 ವರ್ಷಗಳಾಗುತ್ತಿದ್ದರೂ ಈ ಕಾಯ್ದೆಯಡಿಯಲ್ಲಿ ಸ್ವೀಕೃತಿಯಾದ ಶೇ. 1 ರಷ್ಟು ಪ್ರಕರಣದಲ್ಲೂ ಭೂಮಿ ಸಿಕ್ಕಿಲ್ಲ ಮತ್ತು ಇತ್ತೀಚಿನ ಅರಣ್ಯ ಸಂರಕ್ಷಣಾ ತಿದ್ದುಪಡಿ ಕಾಯ್ದೆ 2023 ರಲ್ಲಿ ಈ ಕಾಯ್ದೆಯನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸಲಾಗಿದೆ.

KIADB ಭೂ ಸ್ವಾಧೀನ ಆಗಿ 12 ವರ್ಷ ಕಳೆದರೂ ಯಾವುದೇ ಕೈಗಾರಿಕೆ ಸ್ಥಾಪನೆ ಮಾಡಿಲ್ಲದ ಕಾರಣ ತಮ್ಮ ಭೂಮಿ ವಾಪಸ್ಸು ಕೊಡುವಂತೆ ಹಾಗೂ ಅನ್ಯಾಯದ ಮತ್ತು ಮೋಸದ ಭೂ ಬೆಲೆ ಸರಿಪಡಿಸಲು ಆಗ್ರಹಿಸಿ ಬಳ್ಳಾರಿ ಜಿಲ್ಲೆಯ ಕುಡಿತಿನಿ ಮತ್ತಿತರ ರೈತರ ಧರಣಿ ಸುಮಾರು 800 ದಿನಕ್ಕೆ ಕಾಲಿಟ್ಟಿದೆ. ಅದೇ ರೀತಿ ಈಗಾಗಲೇ ಸಾಕಷ್ಟು ಭೂಮಿ ಲಭ್ಯ ಇದ್ದರೂ ಫಲವತ್ತಾದ ಕೃಷಿ ಭೂಮಿ ಕಬಳಿಕೆಯ ಭೂ ಸ್ವಾಧೀನ ರದ್ದುಪಡಿಸುವಂತೆ ಆಗ್ರಹಿಸಿ ನಡೆಯುತ್ತಿರುವ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ರೈತರ ಅನಿರ್ದಿಷ್ಟಾವಧಿ ಧರಣಿ 1000 ದಿನ ದಾಟಿ ಮುನ್ನಡೆಯುತ್ತಿದೆ .

ಬಲವಂತದ ಭೂ ಸ್ವಾಧೀನದ ಪ್ರಶ್ನೆ ಕರ್ನಾಟಕದ ಪ್ರಮುಖ ಭೂಮಿ ಪ್ರಶ್ನೆಗಳಲ್ಲಿ ಒಂದಾಗಿದ್ದು, ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದಲ್ಲ ಒಂದು ರೀತಿಯ ಭೂ ಸ್ವಾಧೀನದ ಪ್ರಯತ್ನಗಳು ಇದ್ದೇ ಇವೆ. ಇದಲ್ಲದೇ ನೈಸ್ ನಂತಹ ಖಾಸಗಿ ಕಂಪನಿಗಳು ಕೂಡ ಏಖಂಆಃ ಜೊತೆ ಅಕ್ರಮ ಕೂಟ ರಚಿಸಿಕೊಂಡು ಭೂ ಕಬಳಿಕೆಯಲ್ಲಿ ನಿರತವಾಗಿವೆ. ನೈಸ್ ಸಂಸ್ಥೆಯ ಭೂ ಕಬಳಿಕೆ ಸಹಸ್ರಾರು ಕೋಟಿ ರೂಗಳ ಬಹಳ ದೊಡ್ಡ ಹಗರಣವಾಗಿದೆ. ಬಿಎಂಐಸಿ ಹೆದ್ದಾರಿ ಹಾಗೂ ಟೌನ್ ಶಿಪ್ ನಿರ್ಮಾಣದ ಹೆಸರಿನಲ್ಲಿ ಸುಮಾರು 1,75,000 ಎಕರೆ ಭೂ ಕಬಳಿಕೆಗೆ ಪ್ರಯತ್ನ ನಡೆಸುತ್ತಿದೆ.

ಟಿ.ಬಿ. ಜಯಚಂದ್ರ ನೇತೃತ್ವದ ಸದನ ಸಮಿತಿ ಹಾಗೂ ಹಲವು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳಲ್ಲಿ ನೈಸ್ ಸಂಸ್ಥೆಯ ಕರಾಳ ಭೂ ಕಬಳಿಕೆ ಬಯಲಾಗಿದ್ದರೂ ಈ ಸರ್ಕಾರದ ಉಪ ಮುಖ್ಯಮಂತ್ರಿಗಳು ಬಹಿರಂಗವಾಗಿ ನೈಸ್ ಭೂ ಕಬಳಿಕೆ ಹಗರಣವನ್ನು ಹೇಳಿಕೆ ನೀಡಿದ್ದಾರೆ.

ಇದಲ್ಲದೇ,

ಬೆಂಗಳೂರು ಸುತ್ತಮುತ್ತ ಸುಮಾರು ನೂರು ಕಿ.ಮೀ ವ್ಯಾಪ್ತಿಯಲ್ಲಿ ಹಲವಾರು ಹೆಸರುಗಳಲ್ಲಿ ವ್ಯಾಪಕವಾದ ಭೂ ಸ್ವಾಧೀನ ಅಧಿಸೂಚನೆಗಳನ್ನು ಹೊರಡಿಸಲಾಗುತ್ತಿದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಅತ್ಯಂತ ಅಪ್ರಜಾಸತ್ತಾತ್ಮಕವಾಗಿ, ವಸಾಹತುಶಾಹಿ ಆಳ್ವಿಕೆ ಮಾದರಿಯಲ್ಲಿ ನಡೆಸಲಾಗುತ್ತಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಯ ಬಹುತೇಕ ತಾಲ್ಲೂಕುಗಳಲ್ಲಿ ಹೊಸ ಹೊಸ ಭೂ ಸ್ವಾಧೀನ ಪ್ರಕಟಣೆಗಳು ಹೊರ ಬೀಳುತ್ತಲೇ ಇವೆ. ರೈತರ ಪ್ರಜಾಸತ್ತಾತ್ಮಕ ಆಕ್ಷೇಪಣೆಗಳನ್ನು ತೀವ್ರ ದಮನದ ಮೂಲಕ ಸದೆಬಡಿಯಲಾಗುತ್ತಿದೆ. ➚

ಬಿಜೆಪಿಗೆ ಲಾಡ್‌ಕೀ-ಲಾಡ್‌ಲೀ ಯೋಜನೆಗಳು.......

ಪುಟ 13 ರಿಂದ

ಕೂಲಿಯ ಬಾಕಿಯು ಅರ್ಜಿದಾರರನ್ನು ಪರಿಣಾಮಕಾರಿಯಾಗಿ ನಿರುತ್ಸಾಹಗೊಳಿಸುತ್ತದೆ ಮತ್ತು ಯೋಜನೆಯನ್ನು ದುರ್ಬಲಗೊಳಿಸುತ್ತದೆ. ಕೋವಿಡ್ ಕಾರಣದ ಮೇಲೆ ಹಠಾತ್ತಾಗಿ ಘೋಷಣೆಯಾದ ಲಾಕ್‌ಡೌನ್‌ನಿಂದಾಗಿ ಸಾವಿರ ಸಾವಿರಗಟ್ಟಲೆ ಕೆಲಸಗಾರರು ತಮ್ಮ ಹಳ್ಳಿಗಳಿಗೆ ಹಿಂತಿರುಗಿದಾಗ, ಪರಿಷ್ಕೃತ ಬಜೆಟ್‌ನಲ್ಲಿ ಉದ್ಯೋಗ ಖಾತ್ರಿ ಯೋಜನೆಗಾಗಿ 1,13,000 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ಇದು ಅವರಿಗೆ ತಮ್ಮ ಜೀವ ಉಳಿಸಿಕೊಳ್ಳಲು ನೆರವಾಯಿತು. ನಗರಗಳಿಂದ ಗ್ರಾಮೀಣ ಪ್ರದೇಶಗಳಿಗೆ ಜರುಗಿದ ಈ ವಲಸೆಯನ್ನು ಕೋವಿಡ್ ಇಳಿಕೆಯಾದ ನಂತರವೂ ಹಿಮ್ಮೆಟ್ಟಿಸಲಾಗಲಿಲ್ಲ. ಹಾಗಾಗಿ, ಯೋಜನೆಯು ಜೀವ ಹಿಡಿದಿಟ್ಟುಕೊಂಡಿರುವ ಪ್ರಸ್ತುತ ಮಟ್ಟದಲ್ಲಿಯೂ ಸಹ, ಸುಮಾರು ಅಷ್ಟೇ ಹಣವನ್ನು ಈ ವರ್ಷವೂ ಒದಗಿಸಬೇಕಿತ್ತು. ಬದಲಾಗಿ, ವೇತನ ಬಾಕಿಯನ್ನು ಕಳೆದ ನಂತರ ಈ ವರ್ಷದ ಹಂಚಿಕೆಯು ಕೇವಲ 60,000 ಕೋಟಿ ರೂ.ಗಳಷ್ಟಾಗುತ್ತದೆ. ಇದು ಕೂಲಿ ಪಾವತಿಯಲ್ಲಿ ವಿಳಂಬವನ್ನು ಮತ್ತು ಈ ಕಾರಣದಿಂದ ನಿರುತ್ಸಾಹದ ಪರಿಣಾಮವನ್ನು ವಿಸ್ತರಿಸುತ್ತದೆ. ವಾಸ್ತವವಾಗಿ ಡಿಸೆಂಬರ್ 6ರಂದು ದೆಹಲಿಯಲ್ಲಿ ಪ್ರತಿಭಟನಾ ನಿರತ ಉದ್ಯೋಗ ಖಾತ್ರಿ ಯೋಜನಾ ಕಾರ್ಯಕರ್ತರು ಈ ಯೋಜನೆಯನ್ನು ವಿಸ್ತರಿಸಬೇಕೆಂದೂ ಮತ್ತು ಬಜೆಟ್‌ನಲ್ಲಿ ಅದಕ್ಕಾಗಿ 2.5 ಲಕ್ಷ ಕೋಟಿ ರೂ.ಗಳನ್ನು ತೆಗೆದಿಡುವಂತೆ ಒತ್ತಾಯಿಸಿದ್ದರು. ಇದು ಯೋಜನೆಗೆ ಅವಶ್ಯವಾಗಿ ಬೇಕಾಗುವ ಹಣದ ಪ್ರಮಾಣ ಎಷ್ಟಿದೆ ಎಂಬುದನ್ನು ಸೂಚಿಸುತ್ತದೆ.

ಸರಕಾರವೇ ಹಾಳುಗೆಡವುತ್ತಿದೆ

ಸರ್ಕಾರವು ಉದ್ಯೋಗ ಖಾತ್ರಿ ಯೋಜನೆಯ ಕತ್ತು ಹಿಸುಕುತ್ತಿರುವ ಐದನೇ ಮಾರ್ಗವೆಂದರೆ, ವೇತನ-ದರಗಳನ್ನು ಅತ್ಯಂತ ಕೆಳ ಮಟ್ಟದಲ್ಲಿಡುವುದು. ಕೂಲಿಯು ಎಷ್ಟು ಕೆಳ ಮಟ್ಟದಲ್ಲಿದೆ ಎಂಬುದರ ಕಲ್ಪನೆಯನ್ನು ಈ ಕೆಲವು ವಿವರಗಳಿಂದ ಗಮನಿಸಬಹುದು. ಹಿಂದಿನ ಯೋಜನಾ ಆಯೋಗವು ಗ್ರಾಮೀಣ ಭಾರತದಲ್ಲಿ ಪ್ರತಿ ವ್ಯಕ್ತಿಗೆ ದಿನಾ 2200 ಕ್ಯಾಲೊರಿ ಮಟ್ಟದ ಆಹಾರ ಸೇವನೆಯನ್ನು ಬಡತನದ ಮಾನದಂಡವಾಗಿ ತೆಗೆದುಕೊಂಡಿತ್ತು. 2011-12ರ ಎನ್‌ಎಸ್‌ಎಸ್‌ನ ದೊಡ್ಡ ಮಾದರಿ ಸಮೀಕ್ಷೆಯ ಪ್ರಕಾರ, ದೈನಂದಿನ ತಲಾ ವೆಚ್ಚವು ಸರಿಸುಮಾರು 50 ರೂಗಳನ್ನು ತಲುಪಿದಾಗ ಮಾತ್ರ 2200 ಕ್ಯಾಲೊರಿಗಳ ಸೇವನೆ ಸಾಧ್ಯವಾಗುತ್ತದೆ. ಆಗಿನಿಂದ ಇಂದಿನವರೆಗೆ ಹೋಲಿಸಬಹುದಾದ ರೀತಿಯ ಎನ್‌ಎಸ್‌ಎಸ್ ಸಮೀಕ್ಷೆಗಳು ನಡೆದಿಲ್ಲ. ಆದರೆ, ನಾವು ಗ್ರಾಹಕ ಬೆಲೆ ಸೂಚ್ಯಂಕವನ್ನು ಬಳಸಿಕೊಂಡು ಸರಳವಾಗಿ ಲೆಕ್ಕ ಹಾಕಿದರೆ, ಗ್ರಾಮೀಣ ಪ್ರದೇಶಗಳಿಗೆ 2023-24ರಲ್ಲಿ 2200 ಕ್ಯಾಲೊರಿಗಳ ಸೇವನೆಗಾಗಿ ದೈನಂದಿನ ತಲಾ ವೇತನ ದರವು 82 ರೂ.ಗೆ ಬರುತ್ತದೆ. ಐದು ವ್ಯಕ್ತಿಗಳ (ಗಂಡ, ಹೆಂಡತಿ, ಇಬ್ಬರು ಮಕ್ಕಳು ಮತ್ತು ವಯಸ್ಸಾದ ಒಬ್ಬ ಸಂಬಂಧಿ) ಒಂದು ಕುಟುಂಬವನ್ನು ಊಹಿಸಿಕೊಂಡರೆ, ಅದಕ್ಕೆ ದೈನಂದಿನ ಕನಿಷ್ಠ 410 ರೂ.ಗಳ ಕೂಲಿ ದರದ ಅಗತ್ಯವಿರುತ್ತದೆ. ವಾಸ್ತವವಾಗಿ ನೋಡಿದರೆ ದೈನಂದಿನ ಕೂಲಿ ದರವು ಇನ್ನೂ ಹೆಚ್ಚಿನ ಮಟ್ಟದಲ್ಲೇ ಇರಬೇಕಾಗುತ್ತದೆ. ಏಕೆಂದರೆ, ಕೆಲವು ತುರ್ತು ಅಗತ್ಯಗಳಿಗಾಗಿ ಮತ್ತು ಗ್ರಾಹಕ ಬೆಲೆ ಸೂಚ್ಯಂಕವು ವಾಸ್ತವಿಕ ಜೀವನ ವೆಚ್ಚದ ಹೆಚ್ಚಳವನ್ನು ಸಂಪೂರ್ಣವಾಗಿ ಸೆರೆಹಿಡಿಯದ ಕಾರಣದಿಂದಾಗಿ ಸ್ವಲ್ಪ ಹಣವನ್ನು ಮೀಸಲಿಡಬೇಕಾಗುತ್ತದೆ. ಮೇಲಾಗಿ, ಗ್ರಾಹಕ ಬೆಲೆ ಸೂಚ್ಯಂಕವು ಶಿಕ್ಷಣ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳ ಖಾಸಗೀಕರಣದ ಪರಿಣಾಮವನ್ನು ಪರಿಗಣಿಸುವುದಿಲ್ಲ. ಖಾಸಗೀಕರಣವು ಈ ಸೇವೆಗಳನ್ನು ಹೆಚ್ಚು ದುಬಾರಿಯನ್ನಾಗಿ ಮಾಡುತ್ತದೆ.

ಕೇಂದ್ರ ಸರ್ಕಾರವು ನೇಮಿಸಿದ ಒಂದು ತಜ್ಞರ ಸಮಿತಿಯು ಇತ್ತೀಚೆಗೆ ಉದ್ಯೋಗ ಖಾತ್ರಿ ಯೋಜನೆಯ ಕಾರ್ಮಿಕರಿಗೆ 375 ರೂಪಾಯಿಗಳ ದೈನಂದಿನ ಕೂಲಿ ದರವನ್ನು ಶಿಫಾರಸು ಮಾಡಿದೆ. ಇದಕ್ಕೆ ವ್ಯತಿರಿಕ್ತವಾಗಿ ರಾಜ್ಯಗಳ ನಡುವೆ ಕೂಲಿ ದರಗಳ ವಿಷಯದಲ್ಲಿ ಬಹಳ ವ್ಯತ್ಯಾಸಗಳಿವೆ. ಕೂಲಿಯ ದರವು ಯಾವ ರಾಜ್ಯದಲ್ಲೂ 375 ರೂ.ಗಳಿಗೆ ಸಮೀಪದಲ್ಲಿಲ್ಲ. ವಾಸ್ತವವಾಗಿ ಹರಿಯಾಣ, ಕೇರಳ, ಕರ್ನಾಟಕ ಮತ್ತು ಪಂಜಾಬ್ ಈ ನಾಲ್ಕು ಪ್ರಮುಖ ರಾಜ್ಯಗಳಲ್ಲಿ ಮಾತ್ರ ರೂ.300ಕ್ಕಿಂತಲೂ ತುಸು ಮೇಲಿದೆ. ಉಳಿದ ಎಲ್ಲ ರಾಜ್ಯಗಳಲ್ಲೂ ಕೂಲಿ ದರವು 200-300 ರೂ.ಗಳ ನಡುವೆ ಇದೆ. ಈ ಮಟ್ಟದ ಅತಿ ಕಡಿಮೆ ಕೂಲಿ ಮತ್ತು ಅದನ್ನೂ ಸಹ ವರ್ಷಗಟ್ಟಲೆ ಪಾವತಿಸದಿರುವುದು ಕೆಲಸಗಾರರಿಗೆ ಭಾರೀ ನಿರುತ್ಸಾಹ ಉಂಟುಮಾಡುತ್ತದೆ.

ಇಂತಹ ವಿಧಾನಗಳ ಮೂಲಕ, ಸ್ವಾತಂತ್ರ್ಯ ನಂತರದ ಭಾರತದಲ್ಲಿ ರೂಪಿಸಲಾದ ಅತ್ಯಂತ ಪರಿಣಾಮಕಾರಿ ಶಾಸನಗಳ ಪೈಕಿ ಒಂದಾಗಿರುವ ಹಕ್ಕು-ಆಧಾರಿತ ಉದ್ಯೋಗ ಖಾತ್ರಿ ಯೋಜನೆಯನ್ನು ಈಗಿನ ಸರ್ಕಾರವು ಹಾಳುಗೆಡವುತ್ತಿದೆ ಮತ್ತು ನಗದು ವರ್ಗಾವಣೆಯ ಕೃಪೆಗಾಗಿ ಕೈಯೊಡ್ಡುವಂತೆ ಜನರನ್ನು ಬಲವಂತಪಡಿಸುತ್ತದೆ. ಆದರೆ, ಫ್ಯಾಸಿಸ್ಟ್ ತೆರನ ವ್ಯಕ್ತಿಗಳ ನೇತೃತ್ವದ ಸರ್ಕಾರದಿಂದ ಬೇರೇನನ್ನು ತಾನೇ ನಿರೀಕ್ಷಿಸಬಹುದು?

ಕರ್ನಾಟಕದಲ್ಲಿ ಸುಮಾರು 4 ಲಕ್ಷ ಹೆಕ್ಟೇರ್ ನಷ್ಟು ಕೃಷಿ ಯೋಗ್ಯ ಬಂಜರು ಪ್ರದೇಶವಿದೆ. ಈ ಬಂಜರು ಭೂಮಿಯ ಶೇಕಡಾ ಐವತ್ತರಷ್ಟು 7 ಜಿಲ್ಲೆಗಳಲ್ಲಿ ಅಂದರೆ ಉಡುಪಿ, ಮಂಡ್ಯ, ತುಮಕೂರು, ದಕ್ಷಿಣ ಕನ್ನಡ, ಬೀದರ್, ಮೈಸೂರು ಮತ್ತು ರಾಯಚೂರಿನಲ್ಲಿ ಇದೆ. ಇಂತಹ ಭೂಮಿಗಳನ್ನು ಭೂ ರಹಿತರಿಗೆ, ಕೃಷಿ ಕೂಲಿಕಾರರಿಗೆ, ಬಡರೈತರಿಗೆ, ದಲಿತರಿಗೆ ಹಂಚಿಕೆ ಮಾಡುತ್ತಿಲ್ಲ. ಬದಲಾಗಿ ಕಾರ್ಪೊರೇಟ್ ಕೃಷಿಗೆ ಗುತ್ತಿಗೆ ನೀಡುವ ಆಲೋಚನೆಯು ಸರ್ಕಾರದ ಮುಂದೆ ಇದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದನ್ನು ರಾಜ್ಯದ ರೈತ-ಕೃಷಿ ಕೂಲಿಕಾರರು ವಿರೋಧಿಸಬೇಕಾಗಿದೆ. ಕಷ್ಟ ಪಟ್ಟು ಭೂಮಿ ಅಭಿವೃದ್ಧಿ ಪಡಿಸಿ ಮೂರು-ನಾಲ್ಕು ತಲೆಮಾರುಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಡ ಸಾಗುವಳಿದಾರರಿಗೆ ಒಂದೆರಡು ಎಕರೆ ಭೂಮಿ ಮಂಜೂರು ಮಾಡಲು ಮೀನಾಮೇಷ ಎಣಿಸುವ ಸರ್ಕಾರ, ದೊಡ್ಡ ದೊಡ್ಡ ಪ್ಲಾಂಟೇಷನ್ ಒಡೆಯರಿಗೆ 25 ಎಕರೆ ತನಕ ಒತ್ತುವರಿ ಭೂಮಿಯನ್ನು ಗುತ್ತಿಗೆಗೆ ನೀಡಲು ಮುಂದಾಗಿದೆ. ಇದು ಕೂಡ ಆಘಾತಕಾರಿ ತೀರ್ಮಾನವಾಗಿದೆ.

ಕರ್ನಾಟಕ ರಾಜ್ಯದಲ್ಲಿ ವಾಸ ಮಾಡುವ ಕನಿಷ್ಠ ಅವಶ್ಯಕತೆಯ ವಸತಿ ಹೀನ ಕುಟುಂಬಗಳು ಲಕ್ಷಾಂತರ ಸಂಖ್ಯೆಯಲ್ಲಿ ಇವೆ. 2011 ರ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯ ಪ್ರಕಾರ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 40.61 ಲಕ್ಷ ಕುಟುಂಬಗಳು ವಸತಿ ರಹಿತ ಕುಟುಂಬಗಳಾಗಿವೆ. ಪಕ್ಕದ ಕೇರಳ ರಾಜ್ಯ ಸಂಪೂರ್ಣ ಶೂನ್ಯ ವಸತಿ ರಹಿತ ಕುಟುಂಬಗಳ ರಾಜ್ಯವಾಗಿ ಹೊರ ಹೊಮ್ಮುತ್ತಿರುವಾಗ ಕರ್ನಾಟಕದಲ್ಲಿ ಇಷ್ಟು ದೊಡ್ಡ ಪ್ರಮಾಣದ ವಸತಿ ರಹಿತ ಕುಟುಂಬಗಳ ಸಂಖ್ಯೆ ಆಘಾತಕಾರಿಯಾಗಿದೆ. ವಸತಿ ರಹಿತ ಕುಟುಂಬಗಳಿಗೆ ಮನೆ-ನಿವೇಶನದ ಭೂಮಿ ಇಲ್ಲದಿರುವುದು ವಸತಿ ಯೋಜನೆಗಳ ಪ್ರಯೋಜನ ಪಡೆಯಲು ಅಡ್ಡಿಯಾಗಿದೆ. ಈ ಕುಟುಂಬಗಳಿಗೆ ಅದ್ಯತೆ ಮೇಲೆ ವಸತಿಗಾಗಿ ಭೂಮಿ ಒದಗಿಸುವ ನೀತಿಯೊಂದನ್ನು ರೂಪಿಸುವಂತೆ ಸರ್ಕಾರಗಳ ಮೇಲೆ ಒತ್ತಡ ತರಬೇಕಾಗಿದೆ. ಅದೇ ರೀತಿ ಸರ್ಕಾರಿ ಭೂಮಿಗಳಲ್ಲಿ ಮನೆ ನಿರ್ಮಿಸಿಕೊಂಡು ಹಕ್ಕುಪತ್ರಗಳಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿರುವ ಲಕ್ಷಾಂತರ ಕುಟುಂಬಗಳು ಕೂಡ ಇವೆ.

ನಿರ್ಣಯ ಮಂಡನೆ: **ಟಿ.ಯಶವಂತ್,**
ಅನುಮೋದನೆ: **ಜೆ. ಸತ್ಯಬಾಬು, ಬಳ್ಳಾರಿ**
(ಸಂಕ್ಷಿಪ್ತ ಗೊಳಿಸಲಾಗಿದೆ)

ಪ್ರಜಾಪ್ರಭುತ್ವ ನಾಶವಾದಲ್ಲಿ ದಾಳಿ ನಡೆಯುವುದು ಬಡವರು-ದಲಿತರು-ಕಾರ್ಮಿಕರ ಮೇಲೆ..........

ಪುಟ 16 ರಿಂದ

ಸುಪ್ರೀಂ ಕೋರ್ಟ್ (ತನ್ನ ಮಧ್ಯಂತರ ಆದೇಶದಲ್ಲಿ) 1991ರ ಪೂಜಾಸ್ಥಳಗಳ ಸಂರಕ್ಷಣಾ ಕಾಯ್ದೆಯು ದೇಶದಲ್ಲಿರುವ ಎಲ್ಲಾ ಪೂಜಾ ಸ್ಥಳಗಳನ್ನು 1947ರ ಆಗಸ್ಟ್ 15ರ ಸ್ಥಿತಿಯಲ್ಲಿದ್ದಂತೆ ಕಾಪಾಡಬೇಕೆಂಬುದನ್ನು ಎತ್ತಿ ಹಿಡಿದಿದೆ. ಆರ್.ಎಸ್.ಎಸ್. ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸುವ ಹೆಸರಿನಲ್ಲಿ ಮಸೀದಿಗಳ ಕೆಳಗೆ ದೇವಸ್ಥಾನ ಇದೆ ಎಂದು ಗುಲ್ಲೆಬ್ಬಿಸಿ ಪೂಜಾಸ್ಥಳಗಳ ಸಂರಕ್ಷಣಾ ಕಾಯ್ದೆಯನ್ನು ಉಲ್ಲಂಘಿಸುತ್ತಿದೆ. ಇದೇ ವಾದವನ್ನು ದಲಿತ ವಿಭಾಗಗಳು ಪ್ರತಿಪಾದಿಸಿದರೆ 3 ಸಾವಿರ ವರ್ಷಗಳಿಂದ ಜಾತಿ ತಾರತಮ್ಯ, ಅಸ್ಪೃಶ್ಯತೆಯನ್ನು ಅನುಸರಿಸಿರುವ ಜಾತಿಗಳ ವಿರುದ್ಧ ಅಂತಹದ್ದೇ ದೌರ್ಜನ್ಯಗಳನ್ನು ನಡೆಸುವಂತಾಗಬಹುದು. ಆದ್ದರಿಂದ ಚಾರಿತ್ರಿಕ ತಪ್ಪುಗಳನ್ನು ಸರಿಪಡಿಸುವ ಬದಲಿಗೆ ಅದರಿಂದ ಪಾಠಗಳನ್ನು ಕಲಿತು ಸಮಾನತೆಯ ಆಧಾರದಲ್ಲಿ ಜಾತ್ಯತೀತ ತತ್ವವನ್ನು ಅಳವಡಿಸಿಕೊಳ್ಳುವುದನ್ನು ಸಂವಿಧಾನ ಪ್ರತಿಪಾದಿಸುತ್ತದೆ. ಇದಕ್ಕಾಗಿ ನಾವು ಹೋರಾಟ ಮಾಡಬೇಕಿದೆ ಎಂದರು.

ಸಾಮಾಜಿಕ ನ್ಯಾಯವು ಕೂಡ ಈಗ ಅಪಾಯದ ಸ್ಥಿತಿಗೆ ತಲುಪಿದೆ. ಭಾರತವು ವೈವಿಧ್ಯಮಯ ದೇಶ, ಚರಿತ್ರೆಯಲ್ಲಿ ಕುಲ, ಮತ, ಭಾಷೆ, ಜನಾಂಗಗಳ ಆಧಾರದ ಮೇಲೆ ತಾರತಮ್ಯ ಎಸಗಲಾಗಿದೆ. ಇವುಗಳನ್ನು ಸರಿಪಡಿಸುವ ದೃಷ್ಟಿಯಿಂದ ಸಂವಿಧಾನವು ಬಲಹೀನ ವರ್ಗ, ಜಾತಿಗಳನ್ನು ಬಲಪಡಿಸಲು ಸಾಂವಿಧಾನಿಕ ಮೀಸಲಾತಿ ಹಾಗೂ ಉಪಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಆದರೆ ಬಿಜೆಪಿ ಇದರ ವಿರುದ್ಧ ದಾಳಿ ನಡೆಸುತ್ತಿದೆ. ಅಮಿತ್ ಶಾ ಸಂಸತ್ತಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಮಾಡಿದ ಅವಮಾನಕರ ದಾಳಿ ಉದಾಹರಣೆಯಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಜಾತಿ ವ್ಯವಸ್ಥೆ ನಾಶವಾಗಬೇಕೆಂದು ಸಮಾನತೆ ಜಾರಿಯಾಗಬೇಕು ಎಂದು ಪ್ರತಿಪಾದಿಸಿದರು. ಹಾಗಾಗಿ ಈ ದೇಶದ ದುರ್ಬಲರು ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ದೇವರೆಂದು ಭಾವಿಸುವುದು ಸಹಜ. ಆರ್.ಎಸ್.ಎಸ್. ಬಿಜೆಪಿಯವರು ಜಾತಿ ನಿರ್ಮೂಲನೆಯನ್ನು ಪ್ರತಿಪಾದನೆ ಮಾಡುವರೆ? ಮೋಹನ್ ಭಾಗವತ್ ಸನಾತನ ಧರ್ಮ ಕಾಪಾಡಬೇಕು ಎಂದೆನ್ನುತ್ತಾರೆ. ಆದರೆ ಜಾತಿ ನಾಶದ ಬಗ್ಗೆ ಮಾತನಾಡುವುದಿಲ್ಲ. ಮಹಿಳಾ ಸಮಾನತೆಯ ಬಗ್ಗೆ ಮಾತನಾಡುವುದಿಲ್ಲ. ಹೀಗಾಗಿ ಸಂವಿಧಾನವು ಅಸಮಾನತೆಯ ಸನಾತನ ಧರ್ಮವನ್ನು ಒಪ್ಪಿಲ್ಲ, ಬದಲಿಗೆ ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದೆ. ನಾವು ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸಿದ ಸಾಮಾಜಿಕ ನ್ಯಾಯವನ್ನು ಉಳಿಸಲು ಹೋರಾಡಬೇಕಿದೆ ಎಂದರು.

ಭಾರತವು ಹಲವು ರಾಷ್ಟ್ರೀಯತೆಗಳ ಒಂದು ರಾಷ್ಟ್ರೀಯತೆ. ಹಾಗಾಗಿ ಸಂವಿಧಾನದಲ್ಲಿ ಕೇಂದ್ರ ಮತ್ತು ರಾಜ್ಯಗಳಿಗೆ ಶಾಸನಗಳನ್ನು ಮಾಡುವ ಪ್ರತ್ಯೇಕ ಅಧಿಕಾರವನ್ನು ನೀಡಲಾಗಿದೆ. ಬಿಜೆಪಿ ಇದನ್ನು ನಾಶ ಮಾಡುತ್ತಿದೆ. ದೇಶದ ಐಕ್ಯತೆ ಕಾಪಾಡಲು ರಾಜ್ಯಗಳಿಗಿರುವ ಶಾಸನಾತ್ಮಕ ಹಕ್ಕುಗಳನ್ನು ಕಾಪಾಡುವ ಅಗತ್ಯವಿದೆ ಎಂದರು.

ನಂತರ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ಮಂಡಿಸಿದ ಕರಡು ವರದಿ ಮೇಲೆ 65 ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರು. 79 ಮಹಿಳೆಯರು ಸೇರಿದಂತೆ 303 ಪ್ರತಿನಿಧಿಗಳು ಭಾಗವಹಿಸಿದ್ದರು. ಜನ ಚಳುವಳಿಗಳು ಮತ್ತು ಹೋರಾಟಗಳ ಕಾರಣಕ್ಕಾಗಿ ಜೈಲುವಾಸ ಅನುಭವಿಸಿದ 66 ಪ್ರತಿನಿಧಿಗಳು ಭಾಗವಹಿಸಿದ್ದರು.

ಆರೆಸ್ಸೆಸ್-ಬಿಜೆಪಿಗಳು ಮತೀಯ ನೆಲೆಗಟ್ಟಿನಲ್ಲಿ ದೇಶವನ್ನು......

ಪುಟ 9 ರಿಂದ

ನಾಯಕರುಗಳಾದ ಕಾಂ.ವಿಜೆಕೆ. ನಾಯರ್, ಜೆ.ಎನ್. ನಾಗರಾಜ್ ಅವರಲ್ಲದೇ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಕೆ.ಎನ್. ಉಮೇಶ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮೀನಾಕ್ಷಿ ಸುಂದರಂ ಸೇರಿದಂತೆ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು, ತುಮಕೂರು ಜಿಲ್ಲಾ ಮುಖಂಡರು ವೇದಿಕೆಯಲ್ಲಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸುಬ್ರಮಣ್ಯ ಆರಂಭದಲ್ಲಿ ಸ್ವಾಗತಿಸಿದರು. ಬಿ.ಉಮೇಶ್ ಕೊನೆಯಲ್ಲಿ ವಂದಿಸಿದರು. ಇದೇ ಸಂದರ್ಭದಲ್ಲಿ ಜನ ಚಳುವಳಿಗೆ ಸಂಬಂಧಿಸಿ 'ಕ್ರಿಯಾ ಮಾಧ್ಯಮ'ವು ಹೊರತಂದಿರುವ 6 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಅವು 'ಅಚ್ಛೇ ದಿನ್‌ಗೆ ಸವಾಲು'-(ಲೇ. ಎನ್.ಕೆ. ವೇದರಾಜ್), 'ಹೀಗಿದ್ದರು ಯೆಚೂರಿ-ಒಡನಾಡಿಗಳ ನೆನಪುಗಳು'-(ಸಂ. ಎನ್.ಕೆ. ವಸಂತ ರಾಜ್), 'ಫ್ಯಾಸಿಸಂ-ಎರಡನೇ ಮಹಾಯುದ್ಧ ಮತ್ತು ಕ್ವಿಟ್ ಇಂಡಿಯಾ ಹೋರಾಟ' (ಲೇ. ಇ.ಎಂ.ಎಸ್. ನಂಬೂದರಿ ಪಾಡ್-ಕನ್ನಡಕ್ಕೆ ಯಡೂರ ಮಹಾಬಲ.) 'ಮರಕುಂಬಿ ಚಾರಿತ್ರಿಕ ತೀರ್ಪು' (ಲೇ. ಗುರುರಾಜ ದೇಸಾಯಿ), 'ಎ.ಕೆ. ಗೋಪಾಲನ್-ಸಂಸತ್ತಿನಲ್ಲಿ ಒಬ್ಬ ಕಮ್ಯೂನಿಸ್ಟನ ನುಡಿಗಳು'-(ಕನ್ನಡಕ್ಕೆ. ವಿಶ್ವ ಕುಂದಾಪುರ). 'ಬರುತಿಹೆವು ನಾವು ಬರುತಿಹೆವು' ಹೋರಾಟದ ಹಾಡುಗಳು. (ಸಂ. ಪಿಚ್ಚಳ್ಳಿ ಶ್ರೀನಿವಾಸ್)

ಆರಂಭದ ಮೆರವಣಿಗೆಯಲ್ಲಿ ಐತಿಹಾಸಿಕ ವ್ಯಕ್ತಿಗಳ ವೇಷವನ್ನು ಹಾಕಿದ್ದ 10 ಮಕ್ಕಳಿಗೆ ಪುಸ್ತಕಗಳ ಕಾಣಿಕೆ ನೀಡಿ ಗೌರವಿಸಲಾಯಿತು. ಬಹಿರಂಗ ಸಭೆಯಲ್ಲಿ ಅರುಣ್ ಮತ್ತು ಸಂಗಾತಿಗಳು ಹೋರಾಟದ ಹಾಡುಗಳನ್ನು ಹಾಡಿದರು. ಪಂಪ, ಕುವೆಂಪು, ಬಸವಣ್ಣ, ಚೆ ಗುವಾರ ಮುಂತಾದ ನಾನಾ ಚಿಂತಕರು ಹೋರಾಟಗಾರರ ಕವನದ ಸಾಲುಗಳು, ಹೇಳಿಕೆಗಳು ಬಹಿರಂಗ ಸಭೆಯ ಆವರಣದಲ್ಲಿ ಜನರ ಗಮನ ಸೆಳೆದವು.

NEW No. MAG(3)/NPP/205/2021-2022
JANASHAKTHI KANNADA VARA PATRIKE January 6–12, 2025 Price: Rs. 10/- Date of Publication: 3 January 2024 RNI No. KARKAN /2006/17926 Posted on 08-01-2025
Posted at BG PSO, BG - 560026 **Posted at Periodical Rate -** Rs. 2

ಪ್ರತಿನಿಧಿ ಅಧಿವೇಶನದ ಉದ್ಘಾಟನೆ:

ಈಗಿರುವುದು 'ಬಂಡವಾಳಶಾಹಿ ಪ್ರಜಾಪ್ರಭುತ್ವ' ವಾದರೂ ಪ್ರಜಾಪ್ರಭುತ್ವವನ್ನ ಕಾಪಾಡಿಕೊಳ್ಳುವ ಅನಿವಾರ್ಯತೆ ಇದೆ ಪ್ರಜಾಪ್ರಭುತ್ವ ನಾಶವಾದಲ್ಲಿ ದಾಳಿ ನಡೆಯುವುದು ಬಡವರು–ದಲಿತರು–ಕಾರ್ಮಿಕರ ಮೇಲೆ..'–ಬಿ.ವಿ. ರಾಘವುಲು

ಕಾಂ. ವಿ.ಪಿ. ಕುಲಕರ್ಣಿ ಸಭಾಂಗಣ – ಕಾಂ. ಭೀಮಸಿ ಕಲಾದಗಿ ದ್ವಾರ – ಕಾಂ ಬುದ್ಧದೇವ್ ಭಟ್ಟಾಚಾರ್ಯ ನಗರ

ದೇಶದಲ್ಲ ಈಗಿರುವುದು 'ಬಂಡವಾಳಶಾಹಿ ಪ್ರಜಾಪ್ರಭುತ್ವ' ವಾದರೂ ಈ ಪ್ರಜಾಪ್ರಭುತ್ವವನ್ನ ಕಾಪಾಡಿಕೊಳ್ಳುವ ಅನಿವಾರ್ಯತೆ ಇದೆ.. ಏಕೆಂದರೆ ಈ ಪ್ರಜಾಪ್ರಭುತ್ವ ನಾಶವಾದರೆ ಮೊದಲ ದಾಳಿ ನಡೆಯುವುದು ಬಡವರು, ದಲಿತರು ಮತ್ತು ಕಾರ್ಮಿಕರ ಮೇಲೆ ಎಂದು ಪೊಲಿಟ್ ಬ್ಯೂರೋ ಸದಸ್ಯ ಬಿ.ವಿ. ರಾಘವಲು ಎಚ್ಚರಿಸಿದರು. ಅವರು ಡಿಸೆಂಬರ್ 29 ರಂದು ಸಂಜೆ ಸಿಪಿಐ(ಎಂ) 24 ನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು. ಉದ್ಘಾಟನಾ ಸಮಾರಂಭದ ಒಂದು ವರದಿ.



ಸಮ್ಮೇಳನದ ಧ್ವಜಾರೋಹಣ

ಡಿಸೆಂಬರ್ 29 ರ ಸಂಜೆ ಸಿಪಿಐ(ಎಂ) ಹಿರಿಯ ಮುಖಂಡ ಜಿ.ಎನ್.ನಾಗರಾಜ್‌ರವರು ಸಮ್ಮೇಳನದ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ನಾಗರಾಜರವರು ನೂರಾರು ದೇಶಗಳಲ್ಲಿ ದುಡಿಯುವ ಜನರ ಧ್ವನಿಯಾಗಿರುವ ಕೆಂಬಾವುಟವನ್ನು ಹಾರಿಸುವ ಅವಕಾಶ ನನಗೆ ದೊರಕಿರುವುದು ಹೆಮ್ಮೆಯ ಸಂಗತಿ ಎಂದು ಭಾವಿಸುತ್ತೇನೆ ಎಂದರು. ನಂತರ ಹುತಾತ್ಮ ಸಂಗಾತಿಗಳಿಗೆ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯರು, ಕೇಂದ್ರ ಸಮಿತಿ ಸದಸ್ಯರು, ರಾಜ್ಯ ಸಮಿತಿ ಸದಸ್ಯರು, ಸಮ್ಮೇಳನದ ಪ್ರತಿನಿಧಿ, ವೀಕ್ಷಕರು ಪುಷ್ಪ ನಮನ ಸಲ್ಲಿಸಿ ಗೌರವ ಅರ್ಪಿಸಿದರು.

ಪ್ರತಿನಿಧಿ ಅಧಿವೇಶನ ಉದ್ಘಾಟನೆ

ಪ್ರತಿನಿಧಿ ಅಧಿವೇಶನವನ್ನು ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ. ಬಿ.ವಿ. ರಾಘವಲು ರವರು ಉದ್ಘಾಟಿಸಿದರು.



ಉದ್ಘಾಟಿಸುತ್ತಿರುವ ಬಿ.ವಿ.ರಾಘವಲು

ಸಂಸದೀಯ ಪ್ರಜಾಪ್ರಭುತ್ವದ ಪ್ರತಿಪಾದನೆಯ ಆಂತರಿಕ ಸತ್ವ ಬಂಡವಾಳಶಾಹಿ ಪ್ರಜಾಪ್ರಭುತ್ವ ವಾಗಿದೆ. ಹಾಗಿದ್ದರೂ, ಈಗಿರುವ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಬೇಕಿದೆ. ಯಾಕೆಂದರೆ ಈ ಪ್ರಜಾಪ್ರಭುತ್ವ ನಾಶವಾದರೆ ಅದರ ಮೊದಲ ದಾಳಿ ಬಡವರು, ದುರ್ಬಲರೂ, ಕಾರ್ಮಿಕರು, ದಲಿತರ ಮೇಲೆ ನಡೆಯುತ್ತದೆ. ಉದಾಹರಣೆ ನೋಡುವುದಾದರೆ, ಬಿಜೆಪಿ ಸರಕಾರ ಕಾರ್ಮಿಕ ಸಂಹಿತೆಗಳನ್ನು ತಂದಿದೆ. ಈ ಹಿಂದೆ ಕಾಂಗ್ರೆಸ್ ಕೂಡಾ ಇದೇ ಕಾರ್ಮಿಕ ನೀತಿಗಳ ಜಾರಿಗೆ ಪ್ರಯತ್ನಿಸಿತ್ತು. ಈ ಸಂಹಿತೆಗಳು ಸಂಘ ಕಟ್ಟುವ ಹಕ್ಕು, ಕೆಲಸದ ಅವಧಿ ಹೆಚ್ಚಿಸುವ, ಗುತ್ತಿಗೆ ಪದ್ಧತಿಯನ್ನು ಹಾಗೂ ಕಾರ್ಮಿಕರನ್ನು ಬೇಕೆಂದಾಗ ಕೆಲಸಕ್ಕೆ ತೆಗೆದುಕೊಳ್ಳುವುದು, ಬೇಡವೆನಿಸಿದಾಗ ತೆಗೆದು ಹಾಕುವುದನ್ನು ಬೆಂಬಲಿಸುತ್ತದೆ. ಇಂತಹ ಕಾರ್ಮಿಕ ವಿರೋಧಿ ನೀತಿಗಳನ್ನು ಸಂಹಿತೆಗಳು ಹೇಳುತ್ತಿವೆ. ಇದಕ್ಕೆ ನಿಯಮಗಳನ್ನು ರೂಪಿಸಲು ಮುಂದಾಗಿದೆ. ಈ ನೀತಿಗಳಿಂದ ಪ್ರಜಾಪ್ರಭುತ್ವದಕ್ಕೆ ಧಕ್ಕೆಯಾಗುತ್ತದೆ ಎಂದು ಬಿ.ವಿ. ರಾಘವುಲು ಹೇಳಿದರು.

ಸಂಸತ್ತಿನಲ್ಲಿ ಸಂವಿಧಾನದ 75 ವರ್ಷದ ಸಂದರ್ಭದಲ್ಲಿ ವಿಶೇಷ ಚರ್ಚೆ ನಡೆಯುತ್ತಿದೆ. ಸಂವಿಧಾನದ ಮಹತ್ವವನ್ನು ಅರಿಯದ ಕಾಂಗ್ರೆಸ್ ಮತ್ತು ಬಿಜೆಪಿಗಳು ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದನ್ನು ದೇಶದ ಜನ ಗಮನಿಸಿದ್ದಾರೆ. ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಮೂಲಭೂತ ತತ್ವಗಳನ್ನು ಅರಿಯಬೇಕಿದೆ. ಆ ನಿಟ್ಟಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನದ ನಿರ್ಮಾತೃಗಳು ಪ್ರತಿಪಾದಿಸಿದ ಆಧಾರದಲ್ಲಿ 5 ಮೂಲಭೂತ ತತ್ವಗಳನ್ನು ಸಂವಿಧಾನವು ನಿರೂಪಿಸಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯ, ಒಕ್ಕೂಟ ತತ್ವ ಮತ್ತು ಸಮಾಜವಾದ ಇವೇ ಆ ತತ್ವಗಳು. ಇವುಗಳ ಮೇಲೆ ನಡೆಯುತ್ತಿರುವ ದಾಳಿಯನ್ನು ನಾವು ತಡೆಗಟ್ಟಬೇಕಿದೆ ಎಂದರು.



ಪ್ರಜಾಪ್ರಭುತ್ವದ ಮೇಲಿನ ಮತ್ತೊಂದು ದಾಳಿ ಎಂದರೆ ಅದು 'ಒಂದು ದೇಶ ಒಂದು ಚುನಾವಣೆ' ನೀತಿ. ಇದು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವವನ್ನು ನಾಶಮಾಡಿ ಫ್ಯಾಸಿಸಂ ಜಾರಿ ಮಾಡುವ ಹುನ್ನಾರವಾಗಿದೆ. ಏಕ ವ್ಯಕ್ತಿಯ ಆಡಳಿತ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡಲಿದೆ. ಆರ್.ಎಸ್.ಎಸ್. ಫ್ಯಾಸಿಸಂನ್ನು ಬೆಂಬಲಿಸುತ್ತಿರುವ ಕಾರಣ ಈ ದಾಳಿ ನಡೆಸುತ್ತಿದೆ. ಇಂತಹ ದಾಳಿಗಳ ವಿರುದ್ಧ ಹೋರಾಟಗಳನ್ನು ಸಂಘಟಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಿದೆ.

ಜಾತ್ಯಾತೀತತೆ ಮತ ಧರ್ಮಗಳನ್ನು ಅಧರಿಸದೆ ಇರುವ ಒಂದು ಪ್ರಭುತ್ವವೇ ಜಾತ್ಯತೀತತೆ ಎಂಬುದು ಸಂವಿಧಾನದ ನಿರ್ವಚನೆಯಾಗಿದೆ. ಸಂವಿಧಾನದ ಈ ತಿಳುವಳಿಕೆಗೆ ವಿರುದ್ಧವಾದ ತಿಳುವಳಿಕೆಆರ್.ಎಸ್.ಎಸ್.ನದ್ದಾಗಿದೆ. ಹಾಗಾಗಿ ಸಂವಿಧಾನದಲ್ಲಿರುವ ಜಾತ್ಯತೀತತೆಯನ್ನು ಅವರು ವಿರೋಧಿಸುತ್ತಿದ್ದಾರೆ. ಜಾತ್ಯತೀತ ತತ್ವದ ರಕ್ಷಣೆಯ ಅಗತ್ಯವಿದೆ. ಆರ್.ಎಸ್.ಎಸ್. ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಪ್ರತಿಪಾದನೆ ಮಾಡುತ್ತಿದೆ. ಸಂವಿಧಾನವು ಪೌರತ್ವವನ್ನು ಆಧರಿಸಿದ ರಾಷ್ಟ್ರೀಯತೆಯನ್ನು ಪ್ರತಿಪಾದಿಸುತ್ತದೆ. ಹಾಗಾಗಿ ಆರ್.ಎಸ್.ಎಸ್. ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದರು.

ಜಾತ್ಯಾತೀತತೆ ಸಮಾಜದ ಸೌಹಾರ್ದತೆಯನ್ನು ನಾಶ ಮಾಡುವುದಕ್ಕಾಗಿ ಬಿಜೆಪಿ ಮತೀಯ ಕೋಮುಗಲಭೆಗಳನ್ನು ಹೆಚ್ಚಿಸುತ್ತದೆ. ಇತ್ತೀಚೆಗೆ

ಪುಟ 15 ಕ್ಕೆ



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**